ಸಿದ್ಧಾಪುರ ಪರಿಸರ : ಸಾಂಸ್ಕೃತಿಕ ಅಧ್ಯಯನ

(೨೦೧೮-೧೯ ನೇ ಸಾಲಿನ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪ್ರೌಢಪ್ರಬಂಧ)

ಸಂಶೋಧಕರು

ನೋಂದಣಿ ಸಂಖ್ಯೆ : ೧೮೦೧೦೮೦೩೦೦೧೧



ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೯

ಸಿದ್ಧಾಪುರ ಪರಿಸರ : ಸಾಂಸ್ಕೃತಿಕ ಅಧ್ಯಯನ

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಕ್ಕೆ ಸಾದರಪಡಿಸಿದ ಸಂಪ್ರಬಂಧ)

ಸಂಶೋಧಕರು

ನೋಂದಣಿ ಸಂಖ್ಯೆ : ೧೮೦೧೦೮೦೩೦೦೧೧

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೯

ಪರಿವಿಡಿ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಅಧ್ಯಯನ ವಿಧಾನ, ಸಮೀಕ್ಷೆ ಮತ್ತು ಸ್ವರೂಪ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಅಧ್ಯಯನ ವಿಧಾನ, ಸಮೀಕ್ಷೆ ಮತ್ತು ಸ್ವರೂಪ

ಪ್ರಸ್ತಾವನೆ

ಭಾರತ ದೇಶವು ಬಹು ಪುರಾತನವಾದ ಇತಿಹಾಸವನ್ನು ಹೊಂದಿದ ದೇಶವಾಗಿದೆ. ಇಲ್ಲೇ ಶಿಲಾಯುಗದ ಕಾಲದಿಂದಲೂ ಮಾನವನು ವಾಸವಾಗಿದ್ದರೆ ಬಗ್ಗೆ ಅನೇಕ ಕುರುಹುಗಳು ದೊರೆಯುತ್ತವೆ. ಹಳೆಯ ಶಿಲಾಯುಗ ಕಾಲದಿಂದ ಪ್ರಾರಂಭವಾಗ ಮನುಷ್ಯ ಜೀವನ ಚರಿತ್ರೆಗಳು ಮಧ್ಯಶಿಲಾಯುಗ ಹಾಗೂ ಅಂತ್ಯ ಶಿಲಾಯುಗದ ಮೂಲಕ ವಿಕಸನಗೊಂಡು ಸೂಕ್ಷ್ಮ ಶಿಲಾಯುಗದಲ್ಲಿ ನಾಗರಿಕತೆಯ ಕಡೆಗೆ ಮುಖಮಾಡಿ ನವಶಿಲಾಯುಗದಲ್ಲಿ ಪ್ರಗತಿಯನ್ನು ಹೊಂದಿತ್ತು. ಮುಂದೆ ಚಾರಿತ್ರಿಕ ಯುಗದ ಪ್ರಾಚೀನ ಮಧ್ಯಯುಗಿನ ಹಾಗೂ ಆಧುನಿಕ ಸಂದರ್ಭದಲ್ಲಿ ಮನುಷ್ಯ ಜೀವನ ಸಂಸ್ಕೃತಿ ವಿವಿಧ ಮಜಲುಗಳಲ್ಲಿ ವಿಕಾಸವಾಗುತ್ತ ಬಂದಿದೆ. ಪರಿಣಾಮವಾಗಿ ಎಲ್ಲೆಡೆ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರಗಳಲ್ಲಿ ಅದ್ಭುತವಾದ ಪ್ರಗತಿ ಸಾಧ್ಯವಾಗಿದೆ.

ಪರಂಪರೆಯುದ್ದಕ್ಕೂ ಭಾರತ ದೇಶವನ್ನು ಆಳಿದ ಮೌರ್ಯ, ಶಾತವಾಹನ, ಗುಪ್ತ, ಚಾಲುಕ್ಯ, ರಾಷ್ಟ್ರಕೂಟ, ಪಲ್ಲವ, ಚೋಳ , ಮೊಗಲ್ ಮತ್ತು ವಿಜಯನಗರ ಮನೆತನಗಳು ಬದುಕಿನ ಎಲ್ಲಾ ಕ್ಷೇತ್ರಗಳಲ್ಲಿ ಅಮೋಘವಾದ ಪ್ರಗತಿ ಸಾಧಿಸಿ ಭಾರತವನ್ನು ಶ್ರೀಮಂತ ಪರಂಪರೆಯ ನಾಡನ್ನಾಗಿ ರೂಪಿಸಿದ್ದಾರೆ.

ದಕ್ಷಿಣ ಭಾರತದ ಸಶಕ್ತವಾದ ದಖಿನ್ ಪ್ರಸ್ಥಭೂಮಿಯಲ್ಲೇ ಕರ್ನಾಟಕ ರಾಜ್ಯವು ವ್ಯಾಪಿಸಿದೆ. ಕರ್ನಾಟಕದ ಉತ್ತರದ ಜಿಲ್ಲೆಗಳಲ್ಲಿ ಕೊಪ್ಪಳವೂ ಒಂದಾಗಿದೆ. ಬಹು ಪ್ರಾಚೀನ ಕಾಲದಿಂದಲೂ ಮಾನವನ ಚಟುವಟಿಕೆಯ ತಾಣವಾಗಿರುವ ಕೊಪ್ಪಳ ಜಿಲ್ಲೆ ಭೌಗೋಳಿಕವಾಗಿ ಮತ್ತು ರಾಜಕೀಯವಾಗಿ ಆಯಕಟ್ಟಿನ ನೆಲೆಯಲ್ಲಿದೆ. ವಿದಿತ ಮಹಾ ಕೊಪಣ ನಗರ ಜೈನಕಾಶಿ ಎಂದು ಪ್ರಸಿದ್ಧಿ ಪಡೆದಿದ್ದ ಕೊಪ್ಪಳವು ತಿರುಳ್ಗನ್ನಡ ಪ್ರದೇಶದಲ್ಲಿತ್ತು. ಪ್ರಸ್ತುತ ೧೯೯೭ರಲ್ಲಿ ಹಿಂದಿನ ರಾಯಚೂರು ಜಿಲ್ಲೆಯಿಂದ ಬೇರ್ಪಟ್ಟು ಸ್ವತಂತ್ರ ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬಂದ ಕೊಪ್ಪಳ ಜಿಲ್ಲೆಯಲ್ಲಿ ಕೊಪ್ಪಳ ಯಲಬುರ್ಗಾ ಕುಷ್ಟಗಿ ಹಾಗೂ ಗಂಗಾವತಿ ತಾಲೂಕುಗಳಿವೆ.

ತುಂಗಭದ್ರಾ ಎಡದಂಡೆ ನೀರಾವರಿ ಸೌಲಭ್ಯವು ಈ ತಾಲೂಕಿನ ಬಹುಭಾಗಕ್ಕೆ ದೊರೆತಿದ್ದು, ಆದ್ದರಿಂದಾಗಿ ಇಲ್ಲಿ ಭತ್ತದ ಕೃಷಿ ಹಾಗೂ ಅಕ್ಕಿ ಉದ್ಯಮ ಮುಂಚೂಣಿಯಲ್ಲಿದೆ. ಹಾಗಾಗಿ ಗಂಗಾವತಿ ತಾಲೂಕನ್ನು ರಾಜ್ಯದ ಭತ್ತದ ಕಣಜ ಎಂದು ಗುರುತಿಸಲಾಗುತ್ತಿದೆ.

ಗಂಗಾವತಿ ತಾಲೂಕು ಆರ್ಥಿಕ ಶ್ರೀಮಂತಿಕೆಯ ಜೊತೆಗೆ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿರಿಮೆಯನ್ನು ಹೊಂದಿದೆ. ವೈಶಿಷ್ಟ ಪೂರ್ಣವಾದ ಇಲ್ಲಿಯ ಭೌಗೋಳಿಕ ಸನ್ನಿವೇಶ ಇಲ್ಲಿಯ ಇತಿಹಾಸ ಹಾಗೂ ಸಂಸ್ಕೃತಿಯ ಮೇಲೆ ದಟ್ಟವಾದ ಪ್ರಭಾವವನ್ನು ಬೀರಿದೆ. ಅದರ ಜೊತೆಯಲ್ಲಿ ಗಂಗಾವತಿಯ ತಾಲೂಕಿನಲ್ಲಿ ಒಂದು ಹೋಬಳಿ ಕೇಂದ್ರ ಗ್ರಾಮವಾದ ಸಿದ್ದಾಪುರ ಒಂದು. ಸುತ್ತಮುತ್ತ ಚಿಕ್ಕಪುಟ್ಟ ಹಳ್ಳಿಯನ್ನು ಹೊಂದಿದೆ ಹಳ್ಳಿಯಲ್ಲಿಯೇ ಪ್ರಮುಖವಾದಂತಹ ಗ್ರಾಮವಾಗಿದ್ದು, ಸುತ್ತಲಿನ ಹಳ್ಳಿಗಳಿಗೆ ವ್ಯಾಪಾರ–ವ್ಯವಹಾರಕ್ಕೆ ಪ್ರಮುಖ ಆಯಕಟ್ಟಿನ ಸ್ಥಳವಾಗಿದೆ.

೧.೧ ಅಧ್ಯಯನದ ಉದ್ದೇಶ

ಪ್ರಾಚೀನ ಸ್ಮಾರಕಗಳು ಮತ್ತು ಪ್ರಾಚ್ಯಾವಶೇಷಗಳು ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿದ್ದು ಅವುಗಳ ಅಧ್ಯಯನವು ಇತಿಹಾಸದ ಪುನರ್ ನಿರ್ಮಾಣಕ್ಕೆ ಪ್ರಮುಖ ದತ್ತಾಂಶ ವಾಗಿವೆ. ಈ ತರಹದ ಆಕರಗಳಿಂದ ಸಿದ್ದಾಪುರ ಹೋಬಳಿಯ ಪ್ರಾಚೀನ ಅವಶೇಷಗಳನ್ನು ಒಳಗೊಂಡಿರುವ ಸಮಗ್ರ ಅಧ್ಯಯನ ನಡೆದಿರುವುದಿಲ್ಲ ವೆಂದು ಇದುವರೆಗೆ ನಡೆದ ಅಧ್ಯಯನದ ಸಮೀಕ್ಷೆ ಮೂಲಕ ಕಂಡುಕೊಂಡು ಸಂಪೂರ್ಣ ಮಾಹಿತಿಯ ಕೊರತೆ ನೀಗಿಸಲು ಸಿದ್ದಾಪುರ ಪರಿಸರ ಸಾಂಸ್ಕೃತಿಕ ಅಧ್ಯಯನ ಮಾಡುವ ಕಾರ್ಯಕ್ಕೆ ಮುಂದಾಗಿರುವುದು ಇಲ್ಲಿನ ಪ್ರಮುಖ ಉದ್ದೇಶವಾಗಿದೆ.

ಸಿದ್ದಾಪುರ ಪರಿಸರದ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ಸ್ಥಳಗಳಿಗೂ ಪ್ರತ್ಯಕ್ಷವಾಗಿ ಭೇಟಿ ನೀಡಿ ಅಧ್ಯಯನಕ್ಕೆ ಪೂರಕವಾದ ಪ್ರಮುಖ ಅಂಶಗಳನ್ನು ಸಂಗ್ರಹಿಸಿ, ಅವುಗಳನ್ನು ಪಟ್ಟಿ ಮಾಡಿ, ಅವುಗಳನ್ನು ಸ್ಥೂಲ ಅಧ್ಯಯನಕ್ಕೆ ಒಳಪಡಿಸಿ, ಅವುಗಳ ವೈಜ್ಞಾನಿಕ, ವೈಚಾರಿಕ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವುದು ಹಾಗೂ ಸ್ಥಳೀಯ ಜನರಲ್ಲಿನ ಅಭಿಪ್ರಾಯ ಪರಿಗಣಿಸಿ

ಸಿದ್ದಾಪುರ ಪರಿಸರ ವ್ಯಾಪ್ತಿಯಲ್ಲಿ ಬರುವ ಐತಿಹ್ಯಗಳು, ಜನಪದ ನಂಬಿಕೆಗಳು, ಸ್ಥಳ ಪುರಾಣಗಳ ಬಗ್ಗೆ ವಿಶ್ಲೇಷಣೆ ಮಾಡುವುದು ಮೂಲ ಉದ್ದೇಶವಾಗಿದೆ.

ಇಲ್ಲಿನ ಪ್ರಾಚ್ಯಾವಶೇಷಗಳು ಇತಿಹಾಸದ ಪುನರ್ ನಿರ್ಮಾಣಕ್ಕೆ ನೆರವಾಗುವುದರಿಂದ ಅವುಗಳ ಮಹತ್ವ ಸ್ಥಳೀಯ ಜನರಿಗೆ ತಿಳಿಸುವ ಜೊತೆಗೆ ಅವುಗಳ ಸಂರಕ್ಷಣೆಗೆ ಜನರನ್ನು ಜಾಗೃತಗೊಳಿಸುವ ಕೆಲಸ ಈ ಅಧ್ಯಯನದ ನಿಟ್ಟಿನಲ್ಲಿ ಮಹತ್ವದ್ದೆನಿಸಿದೆ. ಸಿದ್ದಾಪುರ ಪರಿಸರದ ಸಮಾಜದ ಸಂಸ್ಕೃತಿಯ ಬಗ್ಗೆ ಸಮಗ್ರ ಅಧ್ಯಯನ ಮಾಡುವ ಮೂಲಕ ಸಾಂಸ್ಕೃತಿಕ ಚಿತ್ರಣವನ್ನು ಅನಾವರಣಗೊಳಿಸುವ ಉದ್ದೇಶವಾಗಿದೆ.

ಸಮಗ್ರ ಕರ್ನಾಟಕ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಶೇಷಗಳ ಅಧ್ಯಯನದ ವಿಭಾಗದಲ್ಲಿ ನಿರ್ಲಕ್ಷಕ್ಕೆ ಒಳಗಾಗಿರುವ ಸಿದ್ದಾಪುರ ಹೋಬಳಿಯ ಪರಿಸರವನ್ನು ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕವಾಗಿ ಅಧ್ಯಯನಕ್ಕೆ ಒಳಪಡಿಸುವ ಮೂಲಕ ಚರಿತ್ರೆಯನ್ನು ನಿರ್ಮಿಸಿಕೊಡುವ ಎಲ್ಲಾ ಬಗೆಯ ಮಾರ್ಗಗಳನ್ನು ಗುರುತಿಸಲಾಗಿದೆ. ಒಟ್ಟಾರೆಯಾಗಿ ರಾಜ್ಯಗಳ ಗುರುತುಗಳನ್ನು ಆಧರಿಸಿ ಸೀಮಿತ ಗಡಿರೇಖೆಯ ಆಯ್ದುಕೊಂಡು ಅಧ್ಯಯನ ಮಾಡಿದಲ್ಲಿ ಅದು ವಸ್ತುನಿಷ್ಠ ಅಧ್ಯಯನವಾಗುತ್ತದೆ. ಸಿದ್ದಾಪುರ ಪರಿಸರ ಸೀಮಿತಗೊಳಿಸಿಕೊಂಡು ಅಧ್ಯಯನ ಮಾಡಲಾಗುವುದು.

೧.೨ ಅಧ್ಯಯನದ ವ್ಯಾಪ್ತಿ

ನಿರ್ದಿಷ್ಟವಾಗಿ ಯಾವುದೇ ಒಂದು ಸಂಶೋಧನೆ ಸ್ಪಷ್ಟವಾಗಿ ಯಶಸ್ವಿಯಾಗಬೇಕಾದರೆ ಅದಕ್ಕೆ ತನ್ನದೇ ಆದ ವ್ಯಾಪ್ತಿ ಚೌಕಟ್ಟು ಇರಬೇಕಾದದ್ದು ಅತೀ ಮುಖ್ಯವಾದದ್ದು. ಪ್ರಸ್ತುತ ಅಧ್ಯಯನಕ್ಕೆ ಸೂಚಿಸುವಂತೆ ಸಿದ್ಧಾಪುರ ಪರಿಸರಕ್ಕೆ ಮಾತ್ರ ಸೀಮಿತವಾಗಿದೆ. ಸಾಂದರ್ಭಿಕವಾಗಿ ಅಕ್ಕಪಕ್ಕದಲ್ಲಿ ಬರುವಂತ ಪ್ರದೇಶಗಳನ್ನು ಈ ವಿಷಯದ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗಿದೆ. ಇತಿಹಾಸ ಕಾಲದ ಆರಂಭದಿಂದ ವಿಜಯನಗರ, ಹೈದರಾಬಾದ್ ನಿಜಾಮರ, ಪಾಳೇಗಾರ ಹಾಗೂ ಬ್ರಿಟೀಷರನ್ನು ಒಳಗೊಂಡಂತೆ ಕಾಲದವರೆಗಿನ ಅನೇಕ ದೇವಾಲಯಗಳು, ಸ್ಮಾರಕಗಳು ಪುರಾತನ ಸ್ಮಾರಕ ಅವಶೇಷಗಳು ಕಂಡುಬರುತ್ತವೆ. ಇವುಗಳನ್ನು ವಿಷಯಗಳಿಗನುಗುಣವಾಗಿ ಸಾಂಸ್ಕೃತಿಕ ಸಂಗತಿಗೆ ಅನ್ವಯಿಸಿಕೊಂಡು ಸಿದ್ದಾಪುರ ಪರಿಸರದ ಸಾಂಸ್ಕೃತಿಕ ಅಧ್ಯಯನ ಮಾಡಲಾಗಿದೆ.

೧.೩. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನ ಸಿದ್ಧಾಪುರ ವ್ಯಾಪ್ತಿಗೆ ಒಳಪಡುವ ಅಂತಹ ಪ್ರದೇಶಗಳಿಗೆ ನೇರವಾಗಿ ಭೇಟಿ ನೀಡಿ ಅಲ್ಲಿ ದೊರೆತಿರುವ ಐತಿಹಾಸಿಕ ಅವಶೇಷಗಳನ್ನು ಕ್ರೋಢೀಕರಿಸಿ ದಾಖಲಿಸಿ ಕೊಳ್ಳುವುದರ ಮುಖಾಂತರವಾಗಿ ಮೌಖಿಕ ಕಥೆಗಳನ್ನು ಹಾಗೂ ಐತಿಹ್ಯಗಳನ್ನು ಅರಿತಿರುವಂತಹ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚಿಸಿ ವಿಷಯವನ್ನು ಸಂಗ್ರಹಿಸಲಾಗಿದೆ. ಅಧ್ಯಯನಕ್ಕೆ ಪೂರಕವಾಗಿ ದೊರೆತಿರುವ

ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಪ್ರಚಲಿತದಲ್ಲಿರುವ ಇತಿಹಾಸ ಮತ್ತು ಸಾಂಸ್ಕೃತಿಕ ಆಕರಗಳನ್ನು ವಿಷಯಾನುಸಾರ ಮತ್ತು ಅವಧಿಯನ್ನು ಸಾರ ವಿಶ್ಲೇಷಿಸಿ ಚರ್ಚಿಸಿ ಫಲಿತಗಳನ್ನು ಕಂಡುಕೊಳ್ಳಲಾಗಿದೆ. ವೈಜ್ಞಾನಿಕವಾಗಿ ಮತ್ತು ವಸ್ತುನಿಷ್ಠವಾದ ವಿಧಾನಗಳನ್ನು ಈ ಕಿರು ಪ್ರಬಂಧದ ರಚನೆಯಲ್ಲಿ ಪ್ರಾಮಾಣಿಕವಾಗಿ ಬಳಸಿಕೊಳ್ಳಲು ಪ್ರಯತ್ನಿಸಲಾಗಿದೆ.

೧.೪ ಅಧ್ಯಯನದ ಸಮೀಕ್ಷೆ

ಪ್ರಸ್ತುತ ಅಧ್ಯಯನ ವಿಷಯವಾದ "ಸಿದ್ದಾಪುರ ಪರಿಸರ ಸಾಂಸ್ಕೃತಿಕ ಅಧ್ಯಯನ" ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಈವರೆಗೆ ಅನೇಕ ಇತಿಹಾಸಕಾರರು, ಸಂಶೋಧಕರು ಅಧ್ಯಯನ ನಡೆಸುತ್ತಾರೆ. ಇಲ್ಲಿನ ದೇವಾಲಯ, ಮೂರ್ತಿಶಿಲ್ಪಗಳು, ಪುಷ್ಕರಣಿ ಹಾಗೂ ಶಾಸನಗಳನ್ನು ಕುರಿತಂತೆ ಕೆಲವು ಪ್ರಬಂಧಗಳು ಮತ್ತು ಬಿಡಿ ಲೇಖನಗಳು ಪ್ರಕಟಗೊಂಡಿರುವುದನ್ನು ಗಮನಿಸಬಹುದಾಗಿದೆ.

ಸಿದ್ದಾಪುರ ಪರಿಸರವನ್ನು ಒಳಗೊಂಡಂತೆ ಗಂಗಾವತಿ ತಾಲೂಕು ದರ್ಶನ, ಶರಣಬಸಪ್ಪ ಕೋಲ್ಕಾರ ೨೦೧೦ ಬಸವ ಪ್ರಕಾಶನ ಗುಲ್ಬರ್ಗಾ, ಕೊಪ್ಪಳ ಜಿಲ್ಲೆಯ ಬಗೆಗೆ ಹಲವಾರು ಅಧ್ಯಯನಗಳಾಗಿವೆ. ಅವುಗಳಲ್ಲಿ ಕರ್ನಾಟಕ ದೇವಾಲಯ ಕೋಶ, ಕೊಪ್ಪಳ ಜಿಲ್ಲೆ, ೨೦೦೧, ಅಲ್ಲಮಪ್ರಭು ಬೆಟ್ಟದೂರು (ಸಂ) ೨೦೦೫, ಕೊಪ್ಪಳ ಜಿಲ್ಲಾ ದರ್ಶನ ಗುಲ್ಬರ್ಗಾ ವಿಶ್ವವಿದ್ಯಾಲಯ ಗುಲ್ಬರ್ಗಾ, ಶರಣಬಸಪ್ಪ ಕೋಲ್ಕಾರ ೨೦೧೦ ಅಂತರಗಂಗೆ ಗಂಗಾವತಿ ತಾಲೂಕು ದ್ವಿತೀಯ ಸಾಹಿತ್ಯ ಸಮ್ಮೇಳನ ಸಂಚಿಕೆ ಕನ್ನಡ ಸಾಹಿತ್ಯ ಪರಿಷತ್ ಗಂಗಾವತಿ, ಮತ್ತು ದೇವರ ಕೊಂಡಾರೆಡ್ಡಿ ಸಂಪುಟ ೧೯೯೯ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೨ ಕೊಪ್ಪಳ ಜಿಲ್ಲೆ , ಕನ್ನಡ ವಿಶ್ವವಿದ್ಯಾಲಯ ಹಂಪಿ ಹಾಗೆಯೇ ಶರಣಬಸಪ್ಪ ಕೋಲ್ಕಾರ ೧೯೯೪ ಕನಗಿರಿ ಪ್ರದೇಶ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು ಎಂ.ಫಿಲ್ ಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದರಲ್ಲಿ ನೋಡಬಹುದು.

೧.೫ ಅಧ್ಯಯನದ ಸ್ವರೂಪ

ಅಧ್ಯಯನದ ಅನುಕೂಲಕ್ಕಾಗಿ ಪ್ರಸ್ತುತ ಸಂಪ್ರಬಂಧದ ವಿಷಯವನ್ನು ಐದು ಅಧ್ಯಾಗಳನ್ನಾಗಿ ವರ್ಗೀಕರಿಸಲಾಗಿದೆ.

ಮೊದಲನೆಯ ಅಧ್ಯಾಯ ಪ್ರಸ್ತಾವನೆಯಲ್ಲಿ ಅಧ್ಯಯನದ ಉದ್ದೇಶ, ಅಧ್ಯಯನದ ವ್ಯಾಪ್ತಿ ಮತ್ತು ಅಧ್ಯಯನದ ವಿಧಾನ, ಅಧ್ಯಯನದ ಸಮೀಕ್ಷೆ ಹಾಗೂ ಅಧ್ಯಯನದ ಸ್ವರೂಪವನ್ನು ಹೇಳಲಾಗಿದೆ.

ಎರಡನೇ ಅಧ್ಯಾಯದಲ್ಲಿ ಸಿದ್ದಾಪುರ ಪರಿಸರದ ಭೌಗೋಳಿಕ ಸನ್ನಿವೇಶ ಮತ್ತು ಸ್ಥಳನಾಮ ಹಾಗೂ ಚಾರಿತ್ರಿಕ ಹಿನ್ನೆಲೆಯ ಕುರಿತಾಗಿ ವಿವರಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳ ಕುರಿತಾದ ಹಾಗೂ ದೇವಾಲಯ, ಸ್ಮಾರಕಗಳು, ವೀರಗಲ್ಲು ಮತ್ತು ಶಾಸನಗಳ ಕುರಿತಾಗಿ ಸಮಗ್ರವಾಗಿ ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ಸಾಮಾಜಿಕ ವ್ಯವಸ್ಥೆಗಳಾದ ಕುಟುಂಬ, ಸಮಾಜದ ಆಚರಣೆ, ನಂಬಿಕೆಗಳು, ಜಾತ್ರೆ, ಉತ್ಸವಗಳ ಕುರಿತ ಸವಿವರ ಮಾಹಿತಿಯನ್ನು ಕಲೆಹಾಕಿ ವಿವರಿಸಲಾಗಿದೆ.

ಕೊನೆಯ ಅಧ್ಯಾಯವು ಸಮಾರೋಪವಾಗಿದ್ದು, ಜೊತೆಗೆ ಅನುಬಂಧ, ಆಕರ ಗ್ರಂಥಗಳು, ನಕ್ಷೆಗಳು ಮತ್ತು ಛಾಯಾಚಿತ್ರಗಳನ್ನು ಒಳಗೊಂಡಿದೆ.

ಅಧ್ಯಾಯ – ಎರಡು

ಭೌಗೋಳಿಕ ಪರಿಸರ ಮತ್ತು ಐತಿಹಾಸಿಕ ಹಿನ್ನೆಲೆ

ಅಧ್ಯಾಯ – ಎರಡು

ಭೌಗೋಳಿಕ ಪರಿಸರ ಮತ್ತು ಐತಿಹಾಸಿಕ ಹಿನ್ನೆಲೆ

ಕೋಪಣಾಚಲ, ಕೊಪಣತೀರ್ಥ, ಎಂಬ ನಾಮದಿಂದ ಕರೆಸಿಕೊಂಡಿದ್ದ ಇಂದಿನ ಕೊಪ್ಪಳವು ಹೈದರಾಬಾದ್– ಕರ್ನಾಟಕದ ಪ್ರತಿಷ್ಠಿತ ನಗರ ಮತ್ತು ಇತಿಹಾಸದ ಪ್ರಸಿದ್ಧ ಸಾಂಸ್ಕೃತಿಕ ರಾಜಧಾನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇತಿಹಾಸ ಪೂರ್ವ ಅವಶೇಷಗಳು, ಇಂದ್ರಕೀಲ ಪರ್ವತ ಅಶೋಕನ ಶಿಲಾಶಾಸನಗಳು ನಿಸರ್ಗ ಸಹಜ ಬೆಟ್ಟ–ಕೋಟೆ–ಕೊತ್ತಲಗಳು. ಕೊಪ್ಪಳ ಜಿಲ್ಲೆಯ ಭವ್ಯ ಇತಿಹಾಸದ ಪರಂಪರೆಗೆ ಸಾಕ್ಷಿಯಾಗಿದೆ.

ಕೊಪ್ಪಳ ಜಿಲ್ಲೆಯ ಆಯಾ ತಾಲೂಕುಗಳು ವಿಸ್ತೀರ್ಣವನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

೧. ಕೊಪ್ಪಳ ತಾಲ್ಲೂಕು ೧೪೦೪ ಚ.ಕಿ.ಮೀ.

೨. ಯಲಬುರ್ಗಾ ತಾಲ್ಲೂಕು ೧೪೧೨ ಚ.ಕಿ.ಮೀ.

೩. ಕುಷ್ಟಗಿ ತಾಲ್ಲೂಕು ೧೩೮೭ ಚ.ಕಿ.ಮೀ.

೪. ಗಂಗಾವತಿ ೧೩೩೧ ಚ.ಕಿ.ಮೀ.

೫. ಕಾರಟಗಿ ೭೫೫ ಚ.ಕಿ.ಮೀ.

ಅದರಲ್ಲಿ ಕಾರಟಗಿ ತಾಲ್ಲೂಕು ಕೂಡ ಆರ್ಥಿಕ ಶ್ರೀಮಂತಿಕೆಯ ಜೊತೆಗೆ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಸ್ವಲ್ಪ ಪ್ರಮಾಣದಲ್ಲಿ ಮುನ್ನಡೆ ಮತ್ತು ಸಾಮಾಜಿಕವಾದ ಕಾರ್ಯಚಟುವಟಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಸಿದ್ಧಾಪುರ ಗ್ರಾಮ ಪರಿಸರದ ಭೌಗೋಳಿಕ ಸನ್ನಿವೇಶ ಭಿನ್ನವಾಗಿದ್ದು ಒಂದೆಡೆ ದಟ್ಟವಾದ ಬೆಟ್ಟಗಳ ಸಾಲುಗಳು, ಮತ್ತೊಂದೆಡೆ ಬಟ್ಟಬಯಲುಗಳಿಂದ ಕೂಡಿದ ಪರಿಸರದಲ್ಲಿ ಕೆರೆ, ಪ್ರದೇಶದಿಂದ ಆವೃತವಾದ ಭೂಮಿಯನ್ನು ಮತ್ತು ಶಿಲೆ ಖನಿಜ, ಸಸ್ಯ, ಪ್ರಾಣಿಗಳು ವೈವಿಧ್ಯತೆ ಯುಳ್ಳ ಪ್ರದೇಶ ವಾಗಿದೆ. ಪ್ರಾಚೀನ ಕಾಲದಿಂದಲೂ ಇಲ್ಲಿನ ಮಾನವ ಜೀವನವನ್ನು ಸಂಸ್ಕೃತೀಕರಣ ಗೊಳಿಸುವಲ್ಲಿ ಗಮನಾರ್ಹವಾದ ಪಾತ್ರವನ್ನು ವಹಿಸಿದೆ.[೧]

೨.೧ ಭೌಗೋಳಿಕ ಸನ್ನಿವೇಶ

ಸಿದ್ಧಾಪುರ ಗ್ರಾಮವು ಭೌಗೋಳಿಕವಾಗಿ ೧೫.೨೧' ಉತ್ತರ ಅಕ್ಷಾಂಶ ಮತ್ತು ೭೬.೦೯' ಪೂರ್ವ ರೇಖಾಂಶದಿಂದ ಕೂಡಿದೆ. ಇದು ದಖನ್ನಿನ ಕಣಿವೆ ಭಾಗದಲ್ಲಿದ್ದು, ಸಮುದ್ರಮಟ್ಟಕ್ಕೆ ಹೆಚ್ಚು ಎತ್ತರವಲ್ಲದ ಭೂಪ್ರದೇಶದಿಂದ ಕೂಡಿದೆ. ಇದರಿಂದಾಗಿ ಇಲ್ಲಿ ಯಾವ ಪ್ರಮುಖ ಬೆಟ್ಟಸಾಲುಗಳು ಕಂಡುಬರುವುದಿಲ್ಲ. ಅಲ್ಲಲ್ಲಿ ಪಶ್ಚಿಮ ಅಥವಾ ಪೂರ್ವಘಟ್ಟ ಸಾಲಿಗೆ ಸೇರದ ಹೆಚ್ಚು ಎತ್ತರವಲ್ಲದ ಗುಡ್ಡಗಳಿವೆ. ಈ ಪರಿಸರದಲ್ಲಿ ಮಳೆಯ ಪ್ರಮಾಣ ಕಡಿಮೆಯಿದ್ದು, ಸಸ್ಯಸಂಪತ್ತೂ ಕಡಿಮೆ. ಕಡಿದಾದ ಮತ್ತು ವಿವಿಧ ಆಕಾರದ ಬಂಡೆಗಳಿಂದ ಆವೃತವಾದ ಪರಿಸರವನ್ನು, ಬಯಲು ಭೂದೃಶ್ಯಗಳನ್ನು ಕಾಣುತ್ತೇವೆ.

ದಖನ್ ಪ್ರಸ್ಥಭೂಮಿಯಲ್ಲಿರುವ ಕರ್ನಾಟಕ ರಾಜ್ಯದ ಪಶ್ಚಿಮ ಬಯಲು ಪ್ರದೇಶದಲ್ಲಿ ಗಂಗಾವತಿ ತಾಲೂಕು ಸೇರುತ್ತದೆ. ಭೂವೈಜ್ಞಾನಿಕವಾಗಿ ಈ ಪ್ರದೇಶವನ್ನು ಒಳಗೊಂಡಂತೆ ದಕ್ಷಿಣ ಭಾರತದ ಪ್ರಸ್ಥಭೂಮಿಯನ್ನು ಅತ್ಯಂತ ಪ್ರಾಚೀನತೆಯನ್ನು ಯುಗಕ್ಕೆ ಸೇರಿದೆಂದು ಸುಮಾರು ಮೂರು ನೂರು ಕೋಟಿ ವರ್ಷ ಹಿರಿಯರೆಂದು ಭೂ ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಈ ಭೂಭಾಗವು ಸಮುದ್ರ ಮಟ್ಟದಿಂದ (ಎಂ.ಎಸ್.ಎಲ್) ೨೩೫೬ ಅಡಿ ಎತ್ತರದಲ್ಲಿದೆ. ಈ ಪ್ರದೇಶವು ಆಯಕಟ್ಟಿನದಾಗಿದ್ದು, ಬೆಟ್ಟ ಗುಡ್ಡಗಳು,ಫಲವತ್ತಾದ ನೆಲ,ಸಮೃದ್ಧ ನೆಲ, ಸಮೃದ್ಧ ಜಲ, ಸಸ್ಯ–ಪ್ರಾಣಿ ಸಂಪತ್ತಿನಿಂದ ಕೂಡಿದೆ.[೨]

ನದಿ, ಹಳ್ಳ, ಕೆರೆಗಳು

ಕೃಷ್ಣಾ ನದಿಯ ಉಪನದಿಯಾದ ತುಂಗಭದ್ರಾ ನದಿಯು ತಾಲೂಕಿನ ಏಕೈಕ ಪ್ರಧಾನ ನದಿಯಾಗಿದೆ. ಆನೆಗುಂದಿಯ ತಿರುಮಲಾಪುರದ ಹತ್ತಿರ ತಾಲೂಕನ್ನು ಪ್ರವೇಶಿಸಿ ಆನೆಗುಂದಿ, ಚಿಕ್ಕಜಂತಗಲ್, ಅಯೋಧ್ಯ ,ಉಳೆನೂರು ಮೂಲಕ ಸಿಂಗಾಪುರದ ಹತ್ತಿರ (ತಾಲ್ಲೂಕನ್ನು ಪ್ರವೇಶಿಸಿ) ಸಿಂಧೂನೂರು ತಾಲೂಕಿಗೆ ಮುನ್ನಡೆಯುತ್ತದೆ. ನದಿಯ ಈ ಹರಿವು ಬಹುಮಟ್ಟಿಗೆ ಬೆಟ್ಟ–ಗುಡ್ಡಗಳ ನಡುವೆಯೇ ಸಾಗಿದೆ. ನದಿಯು ಸಮುದ್ರಮಟ್ಟದಿಂದ ೧೭೦೦ ಮೀ. ಎತ್ತರದಲ್ಲಿ ಹರಿಯುತ್ತದೆ.

ತುಂಗಭದ್ರ ನದಿಯ ಜಾಲವಾಗಿ ಅನೇಕ ಹಳ್ಳಗಳು ತಾಲೂಕಿನಲ್ಲಿ ಹರಿದಿವೆ. ಅವುಗಳಲ್ಲಿ ಬೇಣಕಲ್ ಹಳ್ಳ, ಎಮ್ಮಿಗುಡ್ಡಹಳ್ಳ, ಗಡ್ಡಿ ಹಳ್ಳ, ಆಗೋಲಿ ಹಳ್ಳ, ಮರಳಿಹಳ್ಳ, ಸಿದ್ದಾಪುರ ಹಳ್ಳಗಳು ಪ್ರಧಾನವಾಗಿವೆ. ಬೆಟ್ಟದಲ್ಲಿ ಅಲ್ಲಲ್ಲಿ ನೀರಿನ ಚಿಲುಮೆಗಳಿವೆ.(ಮಳೆಗಾಲದಲ್ಲಿ ಮಾತ್ರ)ಅವುಗಳಿಗೆ "ಊಟಿ" ಎನ್ನುತ್ತಾರೆ. ಮಳೆಯಮ್ಮನ ಊಟಿ (ಚಿಕ್ಕಬೇಣಕಲ್) ಜಬ್ಬಲ ಊಟಿ" ಅನ್ನುತ್ತಾರೆ.(ಮಲ್ಲಾಪುರ) ಕಣಿವೆ ಆಂಜನೇಯ ಊಟಿ (ಸಂಗಾಪುರ) ಮುಖ್ಯವಾಗಿದೆ. ತಾಲೂಕಿನಲ್ಲಿ ಸುಮಾರು ೧೬ ಪ್ರಮುಖ ಕೆರೆಗಳಿವೆ. ಅವುಗಳಲ್ಲಿ ಕಾಟಾಪುರ ಕೆರೆ, ಲಕ್ಷ್ಮಿದೇವಿ ಕೆರೆ, ಕರಡೋಣಿ ಕೆರೆ, ರಾಯರ ಕೆರೆ (ಚಿಕ್ಕಬೇಣಕಲ್) ವೆಂಕಟಗಿರಿ ಕೆರೆ, ಯರಡೋಣಿ ಕೆರೆ ಪ್ರಮುಖವಾಗಿವೆ.

ಬೆಟ್ಟ, ಅರಣ್ಯ, ಸಸ್ಯ ಮತ್ತು ಪ್ರಾಣಿಗಳು

ಕಾರಟಗಿ ತಾಲೂಕಿನಲ್ಲಿ ಪೂರ್ವ–ಪಶ್ಚಿಮವಾಗಿ ಪ್ರಸಿದ್ಧ ಏಳುಗುಡ್ಡದ ಸಾಲು ಬೆಟ್ಟಗಳು ಸುಮಾರು ೩೦ ಕಿ.ಮೀ ಎಡಬಿಡದೆ ವಿಸ್ತರಿಸಿದೆ. ಇವುಗಳ ಸಾಲಿನಲ್ಲಿ ನಿಶಾನಿ ಗುಡ್ಡ (೫೮೦ ಮೀ), ಯಮ್ಮಿಗುಡ್ಡ(೮೨೧ ಕಿ.ಮೀ) ಮತ್ತು ಮೋರೆರ ಗುಡ್ಡ (೫೯೨ ಮೀ) ಎತ್ತರವಾಗಿವೆ.

ಈ ಎಲ್ಲಾ ಬೆಟ್ಟಗಳು ಪ್ರಧಾನವಾಗಿ ಕಣಶಿಲೆಯ(GRANITE) ರಚನೆಗಳು ಅಲ್ಲಲ್ಲಿ ಕಪ್ಪು ಶಿಲಾ ಪಟ್ಟಿಗೆ (DREAM TRAP BARS) ಗಳನ್ನು ಕಾಣಬಹುದು. ಮಟ್ಟಿ ಹೆಸರಿನ ಗುಡ್ಡಗಳು ಪ್ರಧಾನವಾಗಿ ಮಣ್ಣಿನಿಂದ ರಚನೆಯಾಗಿದೆ.

ಬೆಟ್ಟಗಳನ್ನು ಒಳಗೊಂಡಂತೆ ತಾಲೂಕಿನ ಅರಣ್ಯ ಪ್ರದೇಶ ೧೪,೪೮೨ ಹೆಕ್ಟೇರುಗಳಷ್ಟಿದೆ. ಜಿಲ್ಲೆಯ ಒಟ್ಟು ಅರಣ್ಯ ಪ್ರದೇಶದಲ್ಲಿ ಸುಮಾರು ಅರ್ಧದಷ್ಟು (ಶೇ ೪೯.೧೨) ಭಾಗ ಹಿರೇಬೇಣಕಲ್ ಕಾಯ್ದಿಟ್ಟ ಅರಣ್ಯ ೬೬೪೨ ಹೆಕ್ಟೇರುಗಳಷ್ಟಿದೆ. ಮಾದಿನಾಳ ೪೦೫.೫ ಹೆಕ್ಟೇರುಗಳಷ್ಟಿದೆ. ಈ ಪ್ರದೇಶದಲ್ಲಿ ಪ್ರಧಾನವಾಗಿ ಜಾಲಾರಿ, ಹೊನ್ನೆ ಮತ್ತಿ ಅಳಲೆ ಮೋರಿಸ್ ಬಾಗಿ–ಮರಡಿ, ಬೇವು, ಜಾಲಿ, ಕಕ್ಕೆ, ಚಿರತೆ, ನರಿ, ತೋಳ, ಮೊಲ, ಚಿಪ್ಪುಹಂದಿ,(ಪ್ಯಾಂಗೋಲಿನ್), ಮುಳ್ಳುಹಂದಿ ,ಕಾಡುಹಂದಿ ,ಮಂಗ, ಕತ್ತೆ, ಕಿರುಬ, ಹೆಬ್ಬಾವು ,ನಾಗರಹಾವು, ಕೆರೆಹಾವು, ನವಿಲು, ಕಾಡುಕೋಳಿ ,ಬಾವಲಿ, ಕೊಕ್ಕರೆ ,ಕೌಜುಗ ,ಗಿಳಿ, ಪಾರಿವಾಳ ,ಕಾಗೆ ,ಗುಬ್ಬಿ ಮುಂತಾದ ಪ್ರಾಣಿ ಪಕ್ಷಿಗಳು ಕಂಡುಬರುತ್ತವೆ.

ಮಣ್ಣು, ಶಿಲೆ ಖನಿಜಗಳು

ತಾಲೂಕಿನಲ್ಲಿ ಪ್ರಧಾನವಾಗಿ ಎರೆ (ಕಪ್ಪು ಮಣ್ಣು) ಮಸಾರಿ (ಕೆಂಪು ಮಣ್ಣು) ಹಾಗೂ ಕೆಲವು ಕಡೆ ಸವಳು (ಕ್ಷಾರ)ಭೂಮಿ ಇದು ಬಿತ್ತನೆಗೆ ಯೋಗ್ಯವಲ್ಲದ ಭೂಮಿಯಾಗಿದೆ.

ಹಾಗೆ ನದಿತೀರದಲ್ಲಿ ಮರಳು ಮಿಶ್ರಿತ ಕೆಂಪು ಜೇಡಿ ಮಣ್ಣಿದೆ, ಹುಲಿಹೈದರ್ ಹತ್ತಿರ ಕಾವಿಮಣ್ಣಿದೆ. ಇಲ್ಲಿಯ ಬರಿದಾಗದ ನಸುಗೆಂಪು ಮತ್ತು ಬೂದಿ ಬಣ್ಣದ ಗ್ರಾನೈಟ್ ಶಿಲೆಗಳ

ಅಪಾರ ಸಂಪತ್ತಿದೆ. ಆನೆಗುಂದಿ ಹತ್ತಿರ ಉತ್ತಮ ಹಾಗೂ ಮಧ್ಯಮ ಗುಣಮಟ್ಟದ ಬೂದಿ ಬಣ್ಣದ ಕಣಶಿಲೆ (GRANITE) ಗಳನ್ನು ,ಎಮ್ಮಿಗುಡ್ಡದ ಹತ್ತಿರ ಕೆಂಪು ಕಣಶಿಲೆ (PINK GRANITE) ಗಳನ್ನು ಕಾಣಬಹುದು. ಬೆಣಕಲ್ ನಲ್ಲಿ ಕಂದು ಮತ್ತು ಉಆದಾ ಕಣಶಿಲೆಗಳು. ಬೆಣಚು ವಿರುಪಾಪುರ ಗಡ್ಡೆ ಯ ಹತ್ತಿರ ಬೆಳಿಬೆಣಚು. ಆನೆಗುಂದಿ ಸಮೀಪ ಕೊರಡು ರೂಬಿ. ಶಿಲೆಗಳು ದೊರೆಯುತ್ತವೆ. ಅದೇ ರೀತಿ ಕನಕರ್ಪುರ ಬೈಲಕ್ಕಂಪುರಗಳಲ್ಲಿ ಗ್ರೀನ್ ಕ್ವಾರ್ಟ್ಜ್ (ಹಸಿರು ಬೆಣಚು) ಡಣಾಪುರ, ಮುಸ್ಟೂರು, ನರಸಾಪುರ ಗಳಲ್ಲಿ ಅಭ್ರಕ, ಕ್ಯಾಲೈಟ್ ಗಳು,ಬೂದಗುಂಪಾದ ಲಕ್ಷ್ಮಿ ಗುಡ್ಡದಲ್ಲಿ ಬಳಪದ ಶಿಲೆ, ಸರಕಾರಿ ಹೈಸ್ಕೂಲ್ ಹತ್ತಿರ ಕ್ವಾರ್ಜ್ಜ್‌ಜುನ ಹರಳುಗಳು (ಸಿಲಿಕಾನ್ ಡೈ ಆಕ್ಸೈಡ್) ದೊರೆಯುತ್ತವೆ.[೩]

ಹವಾಮಾನ

ಕಾರಟಗಿ ತಾಲೂಕು ಪರ್ಜನ್ಯ ಛಾಯಾ(RAIN SHADOW REGION) ಪ್ರದೇಶದಲ್ಲಿರುವುದರಿಂದ ಹವಾಗುಣ ಸಾಮಾನ್ಯವಾಗಿ ತಂಪಾಗಿರದೆ ಒಣಹವೆ, ಬಿಸಿಲು, ಮತ್ತು ಸೆಕೆಗಳಿಂದ ಕೂಡಿರುತ್ತವೆ. ಬೇಸಿಗೆಯಲ್ಲಿ ಅತಿ ಉಷ್ಣ ಹಾಗೂ ಚಳಿಗಾಲದಲ್ಲಿ ಅತಿ ಚಳಿಯಿಂದ ಕೂಡಿದ ಹವಾಮಾನ ಇಲ್ಲಿಯ ವಿಶೇಷ, ಮಳೆಗಾಲದಲ್ಲಿ ಮಳೆ ಮಾತ್ರ ಕಡಿಮೆ. ಇಲ್ಲಿಯ ವಾಡಿಕೆ ಮಳೆ ಪ್ರಮಾಣ ೫೨೨.೨ ಮೀ.ಮೀ ಇದ್ದು ವಾಸ್ತವಿಕ ಸರಾಸರಿ ಮಳೆ ೨೨೬೫ ಮೀ.ಮೀ. ಇರುತ್ತದೆ. ಪ್ರಸ್ತುತ ಇನ್ನೂ ಕಡಿಮೆ ಪ್ರಮಾಣದಲ್ಲಿ ಮಳೆಯು ಬರುತ್ತದೆ.

ನೀರಾವರಿ ಸೌಲಭ್ಯ ಹಾಗೂ ಬೆಳೆಗಳು

ತಾಲೂಕಿನ ಮುಕ್ಕಾಲು ಭಾಗ ತುಂಗಭದ್ರಾ ಎಡದಂಡೆ ಕಾಲುವೆಯಿಂದ ನೀರಾವರಿಗೊಳಪಟ್ಟಿದೆ. ಇಡೀ ರಾಜ್ಯದಲ್ಲಿ ಅತಿ ಹೆಚ್ಚು ನೀರಾವರಿ ಪ್ರದೇಶವನ್ನು ಒಳಗೊಂಡ ತಾಲೂಕ ಇದಾಗಿದ್ದು, ತಾಲ್ಲೂಕಿನ ಆನೆಗುಂದಿ, ಗಂಗಾವತಿ, ಶ್ರೀ ರಾಮನಗರ, ಸಿದ್ದಾಪುರ,ಕಾರಟಗಿ ಹೋಬಳಿಗಳು ನೀರಾವರಿ ಸೌಲಭ್ಯಗಳನ್ನು ಪಡೆದಿವೆ.

ವೆಂಕಟಗಿರಿ, ಕನಕಗಿರಿ, ನವಲಿ ಹೋಬಳಿಗಳು ಒಣಭೂಮಿಯನ್ನು ಹೊಂದಿದ್ದು, ಅಲ್ಲಲ್ಲಿ ಬೋರ್ವೆಲ್ ನ್ನು ಕೊರೆಯುವುದರ ಮೂಲಕ ಮತ್ತು ಪಂಪ್ ಸೆಟ್ ಮೂಲಕ ಪ್ರದೇಶಗಳನ್ನು ನೀರಾವರಿಗೆ ಮಾರ್ಪಡಿಸಲಾಗುತ್ತದೆ.

ತಾಲೂಕಿನಲ್ಲಿ ಬಿತ್ತನೆ ಪ್ರದೇಶ ಶೇ ೫೫.೫೯ ರಷ್ಟು ಪ್ರದೇಶಕ್ಕೆ ನೀರಾವರಿ ದೊರೆಯುತ್ತದೆ. ಬೆಳೆಗಳ ತೀವ್ರತೆ ಪ್ರಮಾಣ ಶೇ ೧೪೨.೯೨ ಬಿತ್ತನೆ. ಒಟ್ಟು ಪ್ರದೇಶ ೮೫೧೭೪ ಹೆಕ್ಟೇರ್ ಗಳು ನೀರಾವರಿ ಪ್ರದೇಶದಲ್ಲಿ ಮುಖ್ಯ ವಾಗಿ ಭತ್ತವನ್ನು ಬೆಳೆಯಲಾಗುತ್ತಿದ್ದು, ಅದಕ್ಕಾಗಿ ತಾಲ್ಲೂಕು ಭತ್ತದ ಕಣಜವೆಂದು ಪ್ರಸಿದ್ದಿಯಾಗಿದೆ. ಅಷ್ಟೇ ಬಾಳೆ ಮತ್ತು ಕಬ್ಬು ಇತರ ಪ್ರಮುಖ ಬೆಳೆಗಳಾಗಿವೆ.

ಒಣಭೂಮಿ ಪ್ರದೇಶದಲ್ಲಿ ಹತ್ತಿ, ಜೋಳ, ದ್ವಿದಳ ಧಾನ್ಯಗಳ ಮತ್ತು ಸೂರ್ಯಪಾನ ಪ್ರಮುಖ ಬೆಳೆಗಳಾಗಿವೆ.[೪]

ಜನಸಂಖ್ಯೆ

೨೦೧೧ ರ ಜನಗಣತಿಯ ಪ್ರಕಾರ ತಾಲೂಕಿನಲ್ಲಿ ಒಟ್ಟು ೪,೫೯,೯೦೫ ಒಟ್ಟು ಜನಸಂಖ್ಯೆ ಇದೆ. ಇದರಲ್ಲಿ ಪುರುಷರ ಸಂಖ್ಯೆ ೨,೨೯,೬೨೭, ಮಹಿಳೆಯರ ಸಂಖ್ಯೆ ೨,೩೧,೨೭೮ ಇದೆ.

ಹಾಗೆಯೇ ಕಾರಟಗಿ ತಾಲೂಕಿನಲ್ಲಿ ಸೇರುವ ಸಿದ್ದಾಪುರ ಹೋಬಳಿಯು ೨೦೧೧ ರ ಜನಗಣತಿಯ ಪ್ರಕಾರ ೧೯೧೬ ಮನೆಗಳಿದ್ದು, ೪೮೬೫ ಪುರುಷರು ಮತ್ತು ೪೯೨೦ ಮಹಿಳೆಯರನ್ನು ಒಟ್ಟು ೯೮೧೫ ಜನವಸತಿಯನ್ನು ಹೊಂದಿದ್ದು. ಪುರುಷರಿಗಿಂತ ಮಹಿಳೆಯರ ಸಂಖ್ಯೆಯೇ ಅಧಿಕವಾಗಿದೆ.ಗ್ರಾಮದ ಸಾಕ್ಷರತಾ ಪ್ರಮಾಣ ೬೪.೭೧ ರಷ್ಟಿದ್ದು ಅದರಲ್ಲಿ ೭೫.೫೯ ಪುರುಷರು ಸಾಕ್ಷರತೆ ಇದ್ದರೆ, ೫೪.೧೦ ಮಹಿಳೆಯರು ಇದ್ದಾರೆ. ಗ್ರಾಮದಲ್ಲಿ ೩೦೩೭ಜನ ಪರಿಶಿಷ್ಟ ಜಾತಿಯವರಿದ್ದಾರೆ,ಕೇವಲ ೪೩೪ ಜನ ಪರಿಶಿಷ್ಟ ಪಂಗಡದವರಿದ್ದಾರೆ. ಈಳಿಗನೂರು ಗ್ರಾಮದಲ್ಲಿ ೫೪೭ ಮನೆಗಳಿದ್ದು, ೧೩೮೬ ಜನಸಂಖ್ಯೆ ಪುರುಷರು ಮತ್ತು ೧೪೮೨ ಜನಸಂಖ್ಯೆ ಮಹಿಳೆಯರನ್ನು ಒಟ್ಟು ೨೮೬೮ ಜನವಸತಿಯ ಪ್ರದೇಶವಾಗಿದೆ. ಅದೇ ರೀತಿಯಾಗಿ ಉಳೇನೂರು ಗ್ರಾಮದಲ್ಲಿ ೬೦೬೯ ಮನೆಗಳಿದ್ದು, ೧೬೬೦ ಪುರುಷರು ಮತ್ತು ೧೬೧೧ ಮಹಿಳೆಯರನ್ನು ಒಟ್ಟು ೩೨೭೧ ಜನವಸತಿಯನ್ನು ಹೊಂದಿದ್ದ ಚಿಕ್ಕ ಗ್ರಾಮವಾಗಿದೆ.[೫]

೨.೨ ಪ್ರಾಗಿತಿಹಾಸ

ಕಾರಟಗಿ ತಾಲೂಕಿನ ಇತಿಹಾಸವು ಶಿಲಾಯುಗ ಕಾಲದಿಂದಲೇ ಪ್ರಾರಂಭವಾಗುತ್ತವೆ. ಹಳೆಯ ಶಿಲಾಯುಗದ ಕಾಲದ ನಂತರ ಕಾಣಿಸಿಕೊಳ್ಳುವ ಮಧ್ಯಶಿಲಾಯುಗ ಅಥವಾ ಸೂಕ್ಷ್ಮ ಶಿಲಾಯುಗದ ಕಾಲದ ಕೊನೆಯ ಹಂತದ ಅವಶೇಷ ವಾದ ಚಿಕ್ಕದಾದ ಶಿಲಾಯುಗದ ಚಕ್ಕೆಗಳು, ಬ್ಲೇಡುಗಳು ಮಡಿಕೆ, ಚೂರುಗಳು ಸಂಗಾಪುರ, ಚಿಕ್ಕಬೆಣಕಲ್, ಎಮ್ಮಿ ಗುಡ್ಡ ಪರಿಸರದ ಬೆಟ್ಟಗಳಲ್ಲಿ ಕಂಡುಬಂದಿವೆ. ಕ್ರಿ.ಶ.೨೦೦೦ ಹಾಗೂ ೧೨೦೦ ರ ಕಾಲ ಅವಧಿಯಲ್ಲಿದ್ದ ಈ ಸಂಸ್ಕೃತಿಯ ಜನರು ಒರಟಾದ ಆಯುಧಗಳ ಬದಲಿಗೆ ಸೂಕ್ಷ್ಮವಾದ ಚಿಕ್ಕ-ಚಿಕ್ಕ ಆಯುಧಗಳನ್ನು ಬಳಸಿರುವುದು. ಅಂದರೆ ಮಾನವನ ಇತಿಹಾಸ ಇಂದಿಗೆ ಸುಮಾರು ೫೦೦೦ ವರ್ಷಗಳಷ್ಟು ಪ್ರಾಚೀನವಾಗಿರುವುದು ತಿಳಿದುಬರುತ್ತದೆ. ಹಾಗೆಯೇ ಈ ಕಾಲಘಟ್ಟವನ್ನು ೩ ಭಾಗಗಳಾಗಿ ವಿಂಗಡಿಸಲಾಗಿದೆ.

೧. ಸೂಕ್ಷ್ಮ ಶಿಲಾಯುಗ ಸಂಸ್ಕೃತಿ [ಕ್ರಿ. ಪೂ. ೧೭೦೦-೮೦೦]

೨. ನವ ಶಿಲಾಯುಗ ಸಂಸ್ಕೃತಿ[ಕ್ರಿ. ಪೂ ೮೦೦-೧೧೦೦]

೩. ಕಬ್ಬಿಣ ಯುಗದ ಬೃಹತ್ ಶಿಲಾ ಸಂಸ್ಕೃತಿ[ಕ್ರಿ. ಪೂ ೧೨೦೦]

೧. ಸೂಕ್ಷ್ಮ ಶಿಲಾಯುಗ ಸಂಸ್ಕೃತಿ

(,ಕ್ರಿ. ಪೂ ೧೭೦೦-೮೦೦) ಈ ಯುಗದ ಮುಖ್ಯ ಲಕ್ಷಣವೆಂದರೆ ಆದಿಮಾನವನು ಒರಟಾದ ದೊಡ್ಡ-ದೊಡ್ಡ ಶಿಲಾಯುಧಗಳ ಬಳಕೆಯನ್ನು ಕೈಬಿಟ್ಟು ಅತೀ ಸೂಕ್ಷ್ಮವಾದ ಚಿಕ್ಕದಾದ ಆಯುಧ ಬಳಸಿರುವುದು. ಕೊರಲಗುಗಳು, ಚಕ್ಕೆಗಳು, ಬ್ಲೇಡ್ ಗಳು ಮುಂತಾದ ಶಿಲಾಯುಗದ ಅವಶೇಷಗಳು ಗಂಗಾವತಿ ತಾಲೂಕಿನ ಏಳುಗುಡ್ಡ ಪರಿಸರದಲ್ಲಿ ಅಲ್ಲಲ್ಲಿ ಕಂಡುಬರುತ್ತವೆ. ವಿಶೇಷವಾಗಿ ಸಂಗಾಪುರ, ಚಿಕ್ಕಬೆಣಕಲ್ ,ಇಂದರಗಿ ಮುಂತಾದ ಬೆಟ್ಟಗಳಲ್ಲಿ ಈ ಸಂಸ್ಕೃತಿಯ ಅವಶೇಷಗಳು ದೊರೆತಿವೆ.

೨. ನವಶಿಲಾಯುಗದ ಸಂಸ್ಕೃತಿ

ಈ ಕಾಲದಲ್ಲಿ ಅಲೆಮಾರಿಯಾದ ಆದಿಮಾನವನ ಅಲೆದಾಟವನ್ನು ಬಿಟ್ಟು ಫಲವತ್ತಾದ ಭೂಮಿಯಲ್ಲಿ ನೆಲೆಸಿ ವ್ಯವಸಾಯ ಪ್ರಾರಂಭಿಸಿದ. ಸಾಕು ಪ್ರಾಣಿಗಳನ್ನು ಸಾಕಿಕೊಂಡು ಒರಟು ಶಿಲಾಯುಧಗಳ ಬದಲಿಗೆ ಉಜ್ಜಿ ನಯಗೊಳಿಸಿದ ಆಯುಧಗಳನ್ನು ಮಣ್ಣಿನ ಪಾತ್ರೆಗಳನ್ನು ಬಳಸಲಾರಂಭಿಸಿದ. ಹೀಗೆ ನವೀನ ಬದುಕಿಗೆ ಎಡೆ ಮಾಡಿದ ಈ ಕಾಲವನ್ನು ನವಶಿಲಾಯುಗ ಎಂದು ಕರೆಯಲಾಗಿದೆ. ಗಂಗಾವತಿ ತಾಲೂಕಿನ ಹೇರೂರು, ಕೆಸರಟ್ಟಿ, ಗೋನಾಳ್, ಆರ್ಹಾಳ, ಹಿರೇಜಂತಕಲ್ಲು, ಜಂಗಮರ ಕಲ್ಗುಡಿ, ಪನ್ನಾಪುರ, ಬೇವಿನಾಳ, ಸೋಮನಾಳ, ಬೂದಗುಂಪ, ಆಗೋಲಿ, ಸಂಗಾಪುರ, ಗಂಗಾವತಿ ಮುಂತಾದ ಕಡೆಗಳಲ್ಲಿ ಈ ಸಂಸ್ಕೃತಿಯ ನೆಲೆಗಳು ಕಂಡುಬರುತ್ತವೆ. ಇಲ್ಲಿ ಬೂದುವರ್ಣದ ಮೃತ್ಪಾತ್ರೆಯ ಚೂರುಗಳು ಆದಿ ರೂಪವಾಗಿ ಉತ್ತಮ ಜಾತಿಯ ಚಕಮಕಿ ಕಲ್ಲಿನ ಬ್ಲೇಡಿನಂತಹ ಚಕ್ಕೆಗಳ ಸಣ್ಣ ಪ್ರಮಾಣದ ಆಯುಧಗಳ ತಿಕ್ಕಿ ನಯಗೊಳಿಸಿದ ಕಲ್ಲಿನ ಕೊಡಲಿಗಳು, ಪ್ರಾಣಿಗಳ ಎಲುಬುಗಳು, ಕಂಡುಬಂದಿವೆ. ಮುಕ್ಕುಂಪಿ, ಆಗೋಲಿ, ಪಂಪಸದುರ್ಗಾ, ಆನೆಗುಂದಿ, ಗಂಗಾವತಿಯ ಬೆಟ್ಟಗಳಲ್ಲಿ ಈ ಕಾಲದ ಅನೇಕ ಗುಹಾ ಚಿತ್ರಗಳನ್ನು ಕಾಣಬಹುದು.

೩. ಕಬ್ಬಿಣ ಯುಗದ ಬೃಹತ್ ಶಿಲಾ ಸಂಸ್ಕೃತಿ (ಕ್ರಿ.ಪೂ.೧೨೦೦)

ನವ ಶಿಲಾಯುಗ ಸಂಸ್ಕೃತಿಯ ನಂತರ ಇದು ಕಾಣಿಸಿಕೊಳ್ಳುತ್ತದೆ. ಕಬ್ಬಿಣದ ಉಪಯೋಗ ಅರಿತ್ತಿದ್ದ ಇವರು ದೊಡ್ಡ ಕಲ್ಲು ಚಪ್ಪಡಿಗಳನ್ನು ಉಪಯೋಗಿಸಿ ಸತ್ತವರ ಸಮಾಧಿ ಕಟ್ಟುತ್ತಿದ್ದರು.

ಹಾಗಾಗಿ ಈ ಕಾಲದಲ್ಲಿ ಕಬ್ಬಿಣಯುಗದ ಬೃಹತ್ ಶಿಲಾ ಯುಗವೆಂದು ಕರೆಯಲಾಗಿದೆ. ಗಂಗಾವತಿ ತಾಲೂಕಿನ ಗಂಗಾವತಿ, ಸಂಗಾಪುರ, ಮಲ್ಲಾಪುರ ತಾಂಡಾ, ಆನೆಗುಂದಿ, ಹಿರೇಬೆಣಕಲ್, ಗಡ್ಡಿ, ಆಗೋಲಿಯ ಪರಿಸರದಲ್ಲಿ ಈ ಕಾಲದ ಶಿಲಾ ಸಮಾಧಿಯ ನೆಲೆಗಳಿವೆ. ಸುಮಾರು ೪೦೦ ರಷ್ಟಿರುವ ಹಿರೇಬೆಣಕಲ್ಲಿನ ಬೃಹತ್ ಶಿಲಾ ಸಮಾಧಿಗಳು ಅಂತಾರಾಷ್ಟ್ರೀಯ ಹಾಗೂ ರಾಷ್ಟ್ರೀಯ ಪ್ರಾಚ್ಯ ತಜ್ಞರ ಗಮನ ಸೆಳೆದಿವೆ. ಈ ನೆಲೆಗಳ ಸಮೀಪದ ಗವಿಗಳಲ್ಲಿ ಅನೇಕ ಚಿತ್ರಗಳು ಕಂಡು ಬರುತ್ತವೆ. ಹಿರೇಬೆಣಕಲ್ಲಿನ ಹೆಚ್ಚಾಗಿನ ಚಿತ್ರ ಅತ್ಯಂತ ಬೃಹತ್ ಪ್ರಮಾಣದಲ್ಲಿದ್ದು ಅಪೂರ್ವವೆನಿಸಿದೆ.

ಶಿಲಾಯುಗದ ಕಾಲದ ಕವಿ ಚಿತ್ರಗಳು

ಪ್ರಾಗಿತಿಹಾಸ ಕಾಲದ ಗವಿವರ್ಣ ಹಾಗೂ ಬಯಲು ಬಂಡೆ ಕೊರೆದ ಚಿತ್ರಗಳ ದೃಷ್ಟಿಯಿಂದ ಗಂಗಾವತಿ ತಾಲೂಕು ರಾಜ್ಯದಲ್ಲಿಯೇ ಅತ್ಯಂತ ಶ್ರೀಮಂತ ವಲಯವೆನ್ನಬಹುದು. ನೂತನ ಶಿಲಾಯುಗದ ಬೃಹತ್ ಶಿಲಾಯುಗ ಹಾಗೂ ಆದಿ ಚಾರಿತ್ರಿಕ ಕಾಲಗಳಲ್ಲಿ ಆದಿಮಾನವನು ತಾನು ವಾಸಿಸುತ್ತಿದ್ದು, ಗವಿಗಳಲ್ಲಿ ತಾತ್ಕಾಲಿಕ ಆಶ್ರಯ ಪಡೆಯುತ್ತಿದ್ದು, ಕಲ್ಲಾಸರೆಗಳಲ್ಲಿ ಕೆಂಪು ವರ್ಣದಿಂದ ಪಶು, ಪಕ್ಷಿ ಹಾಗೂ ಮನುಷ್ಯರ ಚಿತ್ರಗಳನ್ನು ಚಿತ್ರಿಸುತ್ತಿದ್ದನು. ಕೆಲವುಸಲ ಬಯಲಿನ ಬಂಡೆಗಳಲ್ಲಿ ಚಿತ್ರಗಳನ್ನು ಕೊರೆಯುತ್ತಿದ್ದರು. ಇಂಥ ಚಿತ್ರಗಳು ತಾಲೂಕಿನ ಏಳು ಗುಡ್ಡದ ಸಾಲಿನಲ್ಲಿ ಬೆಟ್ಟಗಳಲ್ಲಿ ಅಧಿಕವಾಗಿ ಕಂಡು ಬಂದಿವೆ. ಗ್ರಾಮವಾರು ಕಂಡುಬಂದ ಆದಿಮಾನವನ ಚಿತ್ರಗಳಿವೆ. ಗವಿಗಳ ಸಂಖ್ಯೆ ಇಂತಿವೆ ಬೆಣಕಲ್–೧೭, ಚಿಕ್ಕಬೆಣಕಲ್–೩, ಎಮ್ಮಿಗುಡ್ಡ–೨, ಗಡ್ಡಿ–೨, ಆಗೋಲಿ–೨, ಹಂಪನ ದುರ್ಗ–೨, ಬೊಮ್ಮಸಾಗರ ತಾಂಡ–೧, ರಾಮದುರ್ಗ–೧, ಆನೆಗುಂದಿ–೯, ಅಂಜನಹಳ್ಳಿ–೨, ಮಲ್ಲಾಪುರ–೧೪, ತೆಂಬಾ–೫ ಸ್ಥಳಗಳಲ್ಲಿ ಬಸಾಪಟ್ಟಣ ಹಾಗೂ ಸಿದ್ಧಿಕೇರಿಯ ಒಂದೊಂದು ಕಡೆ ಚಟುವಟಿಕೆಗಳನ್ನು ಅರಿಯಲು ಈ ಚಿತ್ರಗಳು ಅಪೂರ್ವವಾದ ಮಾಹಿತಿಯನ್ನು ಒದಗಿಸುತ್ತವೆ. ಇಡೀ ದೇಶದಲ್ಲಿಯೇ ಅತ್ಯಂತ ಬೃಹತ್ ಪ್ರಮಾಣದ ಶಿಲಾಯುಗದ ಕಲ್ಲಾಸರೆಯ ಚಿತ್ರ ಗಂಗಾವತಿಯ ತಾಲೂಕಿನಲ್ಲಿ (ಹಿರೇಬೆಣಕಲ್) ಚಿತ್ರನೆಲೆ–೨) ಇದೆ. ಎನ್ನುವುದು ಹಾಗೂ ರಾಜ್ಯದಲ್ಲಿಯೇ ಅತೀ ಹೆಚ್ಚಿನ ಸಂಖ್ಯೆಯ ಚಿತ್ರಗಳನ್ನು ಹೊಂದಿದ ಕೀರ್ತಿ ಗಂಗಾವತಿ ತಾಲೂಕಿನದು ಎನ್ನುವುದು ಹೆಮ್ಮೆಯ ಸಂಗತಿ.[೬]

೨.೩. ಸ್ಥಳನಾಮ

ಭಾರತ ದೇಶದ ಪ್ರತಿಯೊಂದು ಹಳ್ಳಿಯು ತನ್ನದೇ ಇತಿಹಾಸವನ್ನು ಹೊಂದಿದೆ. ಹಾಗೆಯೇ ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆಯನ್ನು ಕೂಡ ಹೊಂದಿದೆ. ಹೇಗೆಂದರೆ ಸ್ಥಳನಾಮಗಳು ಹೇಗೆ ಹುಟ್ಟಿದವು ಯಾವ ಕಾರಣಕ್ಕಾಗಿ ಹುಟ್ಟಿದವು ಎಂಬುದನ್ನು ತಿಳಿಯುವುದೇ ಒಂದು ಅಧ್ಯಯನ. ಏಕೆಂದರೆ ಸೀಮಿತವಾದ ಪ್ರದೇಶಕ್ಕೆ ಹೆಸರು ಬರಲು ಹಲವಾರು ಕಾರಣಗಳು ಕೆಂಡುಬರುತ್ತವೆ. ಅದು ತನ್ನದಾದಂತಹ ಇತಿ–ಮಿತಿಗಳನ್ನು, ಚೌಕಟ್ಟನ್ನು ಹೊಂದಿದ್ದು, ಒಂದು ಸೀಮಿತವಾದ

ಪ್ರದೇಶಕ್ಕೆ ನಾಮ ಹುಟ್ಟಲು ವ್ಯಕ್ತಿಯಿಂದಲೂ ಮತ್ತು ಜನಾಂಗದಿಂದಲೂ, ಪ್ರಾಣಿ-ಪಕ್ಷಿ ಮತ್ತು ಪ್ರಕೃತಿ ,ಬೆಟ್ಟ-ಗುಡ್ಡ ನೀರಾವರಿ ಸಂಬಂಧಗಳು ಕೊಡುವಿಕೆ,, ಜಗಳವಾಡುವುದುರಿಂದ, ಹಬ್ಬ-ಹರಿದಿನಗಳ ವಿಶೇಷತೆ ,ಎತ್ತರವಾದ ಪ್ರದೇಶದ, ಅಂಗವಿಕಲರ ಸಾಧನೆ ,ವೀರಯೋಧರ ಸಾಧನೆ, ಅನೇಕ ಮಹಾ ನಾಯಕರಿಂದ ಮುಂತಾದ ಕಾರಣಗಳಿಂದ ಆ ಪ್ರದೇಶಕ್ಕೆ ಹೆಸರು ಬಂದಿರುತ್ತವೆ.

ಅದೇ ರೀತಿಯಾಗಿ " ಸಿದ್ದಾಪುರ "ಪರಿಸರವು ಒಂದು ಚಾರಿತ್ರಿಕ ಮತ್ತು ಸಾಂಸ್ಕೃತಿಕವಾಗಿ ಸಮೃದ್ಧ ಪ್ರದೇಶವಾಗಿದ್ದು,ಇಲ್ಲಿ ಹೆಚ್ಚು ಬೇರೆ ಬೇರೆ ಸ್ಥಳಗಳಿಂದ ವಲಸೆ ಬಂದ ಜನರು ಕಂಡುಬರುವುದು. ಅದರಲ್ಲಿ ವೇಷಗಾರರು ಮತ್ತು ಆಂಧ್ರ ಜನಾಂಗ, ಮಾರವಾಡಿಗಳು ಪ್ರಮುಖರಾಗಿದ್ದಾರೆ. ಒಟ್ಟಿನಲ್ಲಿ ಇದು ಐತಿಹಾಸಿಕವಾಗಿ ಮತ್ತು ಭೌಗೋಳಿಕವಾಗಿ ಹಿನ್ನೆಲೆಯಲ್ಲಿ ಕೂಡಿಕೊಂಡಿರುವುದನ್ನು ನೋಡಬಹುದು.

ಸಿದ್ದಾಪುರದ ಸ್ಥಳನಾಮ

ಸಿದ್ದಾಪುರ ಗ್ರಾಮ ನಾಮದ ಉತ್ಪತ್ತಿಯ ಬಗೆಗೆ ಭಾಷಾ ವಿದ್ವಾಂಸರು ಹೀಗೆ ಅಭಿಪ್ರಾಯಪಡುತ್ತಾರೆ, ಸಿದ್ದಾಪುರ ಶಬ್ದವು ಸಿದ್ದ ಮತ್ತು ಪುರ ಎಂಬ ಎರಡು ಸಂಯೋಜಿತ ಶಬ್ದದಿಂದ ಉತ್ಪತ್ತಿಯಾಗಿದೆ. ಸಿದ್ದ ಶಬ್ದವು ಅದೇ ಅರ್ಥದ ಜೊತೆಗೆ ಸಂತ, ಸಾಧಕ, ಸಿದ್ಧಿ, ಪುರುಷರನ್ನು ಧ್ವನಿಸಿದರೆ. ಪುರ ಶಬ್ದವು ಗ್ರಾಮ, ಕ್ಷೇತ್ರ, ಪಟ್ಟಣ, ಊರು, ಎಂಬ ಅರ್ಥವನ್ನು ಹೊಂದಿದೆ.

ಹಾಗಾಗಿ ಇದು ಹಿಂದೆ ಯಾವುದೋ ಸಿದ್ಧಪುರುಷರ ಕ್ಷೇತ್ರವಾಗಿರಬೇಕು. ಅವರಿಂದಾಗಿ ಸಿದ್ದಪುರ> ಸಿದ್ದಾಪುರ ವಾಗಿದೆ.[ಅಂಬಾಮಠ ವನ್ನು ಅವಧೂತ ಸಾಧುಗಳ ಸಿದ್ಧಿಯ ತಾಣವಾಗಿದ್ದ ರಿಂದ ಸಿದ್ದಪರ್ವತ ಎಂದು ಕರೆಯಲಾಗಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.]

ಇನ್ನೊಂದು ಅರ್ಥದಲ್ಲಿ ಶಿಸ್ತಿಗೆ ಅಚ್ಚುಕಟ್ಟುತನಕ್ಕೆ ಮತ್ತೊಂದು ಹೆಸರೇ ಸಿದ್ದಿಪುರ ಅಥವಾ ಸಿದ್ದಾಪುರ ಎಂಬುವ ವ್ಯಾಪಕವಾದ ಅರ್ಥವನ್ನು ನೀಡುತ್ತದೆ. ಆದರೆ ಸಿದ್ಧಾಪುರದಲ್ಲಿ ದೊರೆತಂತಹ ಶಾಸನಗಳಲ್ಲಿ ಈ ಗ್ರಾಮಕ್ಕೆ ಸಂಬಂಧಿಸಿದಂತೆ ಯಾವುದೇ ಉಲ್ಲೇಖಗಳು ಕಂಡುಬದಂದಿಲ್ಲವೆಂಬುದು ಅಧ್ಯಯನಗಳಿಂದ ತಿಳಿದುಬರುತ್ತದೆ.

ಕೃಷ್ಣಾಪುರ

ಕೃಷ್ಣಾಪುರ ನಾಮವು ಕೃಷ್ಣ ಎಂಬ ದೇವರ ಅಥವಾ ವ್ಯಕ್ತಿಯಿಂದಾಗಿ ಬಂದಿದೆ. ವಿಜಯನಗರ ಸಾಮ್ರಾಟ್ ಶ್ರೀಕೃಷ್ಣದೇವರಾಯನ ಹಲವು ಪ್ರಾಚೀನ ಗ್ರಾಮಗಳಿಗೆ ತನ್ನ ಹೆಸರಿಸಿ (ಕೃಷ್ಣಪುರ, ಕೃಷ್ಣ ರಾಯಪುರ) ಅವುಗಳನ್ನು ದೇವಾಲಯಗಳಿಗೆ, ಅಗ್ರಹಾರ ಗಳಿಗೆ ದಾನವಾಗಿ ನೀಡಿದ

ಸಂಗತಿ ಆತನ ಶಿಲಾಶಾಸನಗಳಲ್ಲಿ ವ್ಯಕ್ತವಾಗಿದೆ. ಹೀಗಾಗಿ ಕೃಷ್ಣಾಪುರವು ಕೃಷ್ಣದೇವರಾಯ ನಿಂದಾಗಿ ಹೆಸರನ್ನು ಪಡೆದಿರುವ ಸಾಧ್ಯತೆ ಕಂಡುಬರುತ್ತದೆ.

ಬರಗೂರು

ಬರಗೂರು ಗ್ರಾಮದ ಉತ್ಪತ್ತಿಯ ಬಗೆಗೆ ಭಾಷಾ ವಿದ್ವಾಂಸರು ಹೀಗೆ ಅಭಿಪ್ರಾಯಪಡುತ್ತಾರೆ. ಬರಗೂರು ಗ್ರಾಮದ ಶಬ್ದವು ಬರಗ ಮತ್ತು ಊರು ಎಂಬ ಎರಡು ಶಬ್ದಗಳ ಸಂಯೋಜಿತ ಶಬ್ದ.

ಬರಗ+ಊರು=ಬರಗೂರು

ಬರಗೂರು ಎಂಬ ಹೆಸರು ಪ್ರಕೃತಿ ವಾಚಕವಾಗಿ ಬಂದಂತೆ ತೋರುತ್ತದೆ. 'ಬರಗೂರು' ,ಬರಗ (ಬರಗು) ಮತ್ತು 'ಊರು' (ಬರಗ+ಊರು=ಬರಗೂರು) ಎಂಬ ಎರಡು ಶಬ್ದಗಳ ಸೈತ ರೂಪ. ಬರಗ (ಬರಗು) ಎಂದರೆ ಎತ್ತರವಾದ ಗಟ್ಟಿ ದಂಟಿನ ಒಂದು ಬಗೆಯ ಹುಲ್ಲು, ಪ್ರಾಚೀನ ಕಾಲದಲ್ಲಿ ಈ ಹುಲ್ಲಿನ ಕಡ್ಡಿಯನ್ನು ಮಸಿಯಲ್ಲಿ ಅದ್ದಿ ಬರೆಯುವ ಲೇಖನಿ ಯನ್ನಾಗಿ ಉಪಯೋಗಿಸುತ್ತಿದ್ದರು. ಈ ಹುಲ್ಲು ಸಾಮಾನ್ಯವಾಗಿ ನದಿ, ಹಳ್ಳ, ಬೆಟ್ಟಗಳಲ್ಲಿ ಬೆಳೆಯುತ್ತದೆ. ಈಗ ಬರಗೂರು ಗ್ರಾಮ ಇರುವ ಸ್ಥಳದಲ್ಲಿ ಮೊದಲಿಗೆ ಯಥೇಚ್ಛವಾಗಿ ಬರಗ ಹುಲ್ಲು ಬೆಳೆಯುತ್ತಿದ್ದರಬೇಕು. ಆ ಸ್ಥಳದಲ್ಲಿ ಹುಟ್ಟಿಕೊಂಡು ಊರನ್ನು ಅಲ್ಲಿನ ಹುಲ್ಲಿನೊಂದಿಗೆ ಗುರುತಿಸಿ ಬರಗೂರು ಎಂದು ಕರೆಯಬಹುದಾದ ಸಾಧ್ಯತೆ ಇದೆ. (ಮರಗಳ ನಡುವೆ ಹುಟ್ಟಿಕೊಂಡು ಊರನ್ನು ಮರ್ಲಾನಹಳ್ಳಿ ಎಂದು ಕರೆದಂತೆ).

ಉಳೇನೂರು

ಉಳೇನೂರು ಗ್ರಾಮ ನಾಮದ ಉತ್ಪತ್ತಿಯ ಬಗೆಗೆ ಭಾಷಾ ವಿದ್ವಾಂಸರು ಹೀಗೆ ಅಭಿಪ್ರಾಯ ಪಡುತ್ತಾರೆ. ಉಳೇನೂರು ಶಬ್ದವು ಊಳ್ ಮತ್ತು ನ್ ಮತ್ತು ಊರು ಎಂಬ ಮೂರು ಸಂಯೋಜಿತ ಶಬ್ದದಿಂದ ಉತ್ಪತ್ತಿಯಾಗಿದೆ.

ಊಳ್ + ನ್ + ಊರು = ಉಳೇನೂರು

ಊಳ್ – ಅಂದರೆ ಕೃಷಿ ಮಾಡು;ಉಳುಮೆ ಮಾಡು

ಊರು – ಅಂದರೆ ವಾಸಿಸುವ ಪ್ರದೇಶ, ಊರು, ಎಂದರ್ಥವಾಗುತ್ತದೆ.

ಮತ್ತೊಂದು ಅರ್ಥದಲ್ಲಿ ಹೊಳೆಯ ಪಕ್ಕದಲ್ಲಿಯೇ ಊರು ಇರುವುದು ಹೊಳೆಊರು ಎಂದು ಕರೆಯಲಾಗುತ್ತೆ, ಕ್ರಮೇಣ ಹೊಳೇಊರು ಹೋಗಿ ಉಳೇನೂರು ಎನ್ನಲಾಗಿ ಉಳೇನೂರು

ಎಂದು ಹೆಸರು ಬಂದಿರುವುದಾಗಿದೆ. ಇದು ಪುರಾತನ ಇತಿಹಾಸವನ್ನು ಹೊಂದಿದೆ. ಕೆಲವು ಪ್ರಾಚೀನ ಅವಶೇಷಗಳು ಇಲ್ಲಿ ದೊರೆಯುತ್ತವೆ.

ಈ ಗ್ರಾಮದ ಭದ್ರತೆಯ ರಕ್ಷಣೆಯ ದೃಷ್ಟಿಯಿಂದಾಗಿಯೇ ಹಿಂದಿನ ಕಾಲದಲ್ಲಿ ಕೋಟೆಯಿಂದ ಆವೃತವಾದ ಪುಟ್ಟ ಗ್ರಾಮವಿದು.

ನಂತರದಲ್ಲಿ ತುಂಗಭದ್ರಾ ನದಿಯೇ ಇದರ ಪಕ್ಕದಲ್ಲಿ ರುವುದರಿಂದಾಗಿ ೧೨ ತಿಂಗಳು ಕೃಷಿಯಲ್ಲಿಯೇ ಮುಳುಗಿದ ದೊಡ್ಡ ಗ್ರಾಮವೇ ಉಳೇನೂರಾಯಿತು.

ಮತ್ತೊಂದು ಅರ್ಥದಲ್ಲಿ ಇದೊಂದು ಜಲವಾಸಿಯ ಸ್ಥಳ ನಾಮವನ್ನು ಗುರುತಿಸುತ್ತಿದ್ದು, ಮಾನವನು ಸುಸಂಸ್ಕೃತವಾಗಿ ಬದುಕಬೇಕು ಎಂದರೆ ಮುಖ್ಯವಾಗಿ ಬೇಕು. ಏಕೆಂದರೆ ಅವನಿಗೆ ಬದುಕಲು ತುಂಬಾ ಅವಶ್ಯವಾದ ಆಹಾರವೆಂದು ಹೇಳಬಹುದು. ಅದೇ ರೀತಿಯಲ್ಲಿ ನದಿ, ಹಳ್ಳ, ಸಮುದ್ರ, ಕೊಳ್ಳ, ಕೆರೆ ಮುಂತಾದ ಕಾರಣದಿಂದಾಗಿ ಒಂದು ಹೆಸರು ಬಂದಿರಬೇಕು.

ಉದಾ: ಹಾಲ ಸಮುದ್ರ, ಸೋಮಸಾಗರ, ಕರಡೋಣಿ, ಬೊಮ್ಮಸಾಗರ, ಕ್ಯಾರಿ ಹಾಳ್, ಗಂಗಾವತಿ, ನೀರಲೂಟಿ ಇತ್ಯಾದಿ.

ಬೆನ್ನೂರು

ಬೆನ್ನೂರು ಗ್ರಾಮ ನಾಮದ ಉತ್ಪತ್ತಿಯ ಬಗ್ಗೆ ಭಾಷಾ ವಿದ್ವಾಂಸರು ಹೀಗೆ ಅಭಿಪ್ರಾಯಪಡುತ್ತಾರೆ. ಬೆನ್ನೂರು ಶಬ್ದವು ಬೆನ್ನ ಮತ್ತು ಊರು ಎಂಬ ಎರಡು ಸಂಯೋಜಿತ ಶಬ್ದದಿಂದ ಉತ್ಪತ್ತಿಯಾಗಿದೆ.

ಬೆನ್ನ + ಊರು = ಬೆನ್ನೂರು

ಬೆನ್ನ ಅಂದರೆ ನೆಲ, ಊರಿನ ಪಕ್ಕದಲ್ಲಿಯೇ ಊಳಿವೆ ಮಾಡು ಮತ್ತು ಅಲ್ಲಿಯೇ ವಾಸಿಸು ಎಂದರ್ಥ. ಊರು ಅಂದರೆ ವಾಸಿಸು ಎಂಬ ಅರ್ಥವನ್ನು ನೀಡುತ್ತದೆ.

ನಮ್ಮ ಪೂರ್ವಜರ ಕಲಾಕೌಶಲ ವಾಸ್ತು, ತಂತ್ರಜ್ಞಾನ ಮತ್ತು ಕೃಷಿಯ ಪ್ರಗತಿಯ ಪ್ರತೀಕಗಳಾದ ಅದೆಷ್ಟು ಸ್ಮಾರಕಗಳು ನಾಡಿನ ಮೂಲೆ ಮೂಲೆಗಳಲ್ಲಿ ಅನಾಥವಾಗಿ, ಅಜ್ಞಾತವಾಗಿ ಉಳಿದಿದೆ. ಅವುಗಳಲ್ಲಿ ಬೆನ್ನೂರಿನ ಬಸವ ಕಟ್ಟೆ ಜಲಾಶಯವು ಕೂಡ ಒಂದಾಗಿದೆ. ಭಾರತದಲ್ಲಿ ನೀರಾವರಿಯು ನಾಗರಿಕತೆಯಷ್ಟೇ ಪ್ರಾಚೀನವಾಗಿದೆ. ಕೃಷಿ ಪ್ರಧಾನವಾದ ಈ ದೇಶದಲ್ಲಿ ಬಹು ಹಿಂದಿನಿಂದಲೂ ನೀರಾವರಿ ಅನುಕೂಲಕ್ಕಾಗಿ ಕೆರೆ. ಕೊಳ, ಕಾಲುವೆ, ಕುಂಟೆ,ಡೋಣಿಣಿ ಮುಂತಾದವುಗಳನ್ನು ನಿರ್ಮಿಸಲಾಗಿದೆ. ಅಂತ ಒಂದು ಋಷಿ ಪೂರಕ ಪ್ರಾಚೀನ ನಿರ್ಮಿತಿಯೇ

ಬೆನ್ನೂರಿನ ಬಸವನ ಆಣೆಕಟ್ಟು ಎಂದು ಬೆನ್ನೂರಿನ ಕೊಪ್ಪಳ ಜಿಲ್ಲೆಯ ಕಾರಟಗಿ ತಾಲೂಕಿನ ಒಂದು ಚಿಕ್ಕ ಹಳ್ಳಿ ಗಂಗಾವತಿ ರಾಯಚೂರು ರಸ್ತೆಯಲ್ಲಿ ಸಿದ್ದಾಪುರ ಎಂಬ ಗ್ರಾಮವಿದ್ದು ಅಲ್ಲಿಂದ ಪೂರ್ವಕ್ಕೆ ಸುಮಾರು ೨೨ ಕಿ.ಮೀ ದೂರದಲ್ಲಿ ಬೆನ್ನೂರ ಇದೆ. ಬೆನ್ನೂರಿಗೆ ಸರಿಯಾಗಿ ರಸ್ತೆ ಸಂಪರ್ಕವಾಗಲಿ, ಸಾರಿಗೆ ವ್ಯವಸ್ಥೆಯಲ್ಲಿ ಅಲ್ಪಸ್ವಲ್ಪ ಕುಂಠಿತ ವನ್ನು ಹೊಂದಿದೆ.

ಈ ಹಳ್ಳಿಯ ಪೂರ್ವಕ್ಕೆ ತುಂಗಭದ್ರ ನದಿ ಆಚೆ ಬದಿಯ ಸೂಗೂರು (ಸಿರುಗುಪ್ಪ ತಾಲೂಕು, ಬಳ್ಳಾರಿ ಜಿಲ್ಲಾ) ಗ್ರಾಮಗಳ ಮಧ್ಯದಲ್ಲಿ ನದಿಗೆ ಅಣೆಕಟ್ಟನ್ನು ನಿರ್ಮಿಸಲಾಗಿದೆ. ನದಿಯ ನಿಧಾನ ಹರಿವು ತೀರದಲ್ಲಿ ಹಸಿರು ಭತ್ತದ ಗದ್ದೆಗಳು, ಹುಲ್ಲಿನ ಪೊದಗಳು, ಗಿಡಮರಗಳು ಈ ಪ್ರದೇಶದ ಸೌಂದರ್ಯವನ್ನು ಹೆಚ್ಚಿಸುತ್ತದೆ.

ತುಂಗಭದ್ರಾ ನದಿಗೆ ವಿಜಯನಗರ ಕಾಲದಲ್ಲೇ ಅನೇಕ ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಅವುಗಳ ಕಾಲುವೆಗಳು ಇಂದಿಗೂ ಬಳಕೆಯಲ್ಲಿದ್ದು ನೂರಾರು ಎಕರೆ ಭೂಮಿಗೆ ನೀರುಣಿಸುತ್ತಿವೆ.

ನದಿಯನ್ನು, ಕೊಪ್ಪಳ ಬಳ್ಳಾರಿ ರಾಯಚೂರ್ ಜಿಲ್ಲೆಯ ೧೯೪ ಮೈಲು ಉದ್ದದ ಹರಿವಿನಲ್ಲಿ ಒಟ್ಟು ೧೮ ಅಣೆಕಟ್ಟನ್ನು ನಿರ್ಮಿಸಲಾಗಿತ್ತು. ಅವುಗಳಲ್ಲಿ ವಲ್ಲಭಾಮರ ,ಹೊಸಪೇಟೆ ಮತ್ತು ಕೋರಗಲ್ ಆಣೆಕಟ್ಟುಗಳು ಈಗ ತುಂಗಭದ್ರಾ ಜಲಾಶಯದಲ್ಲಿ ಮುಳುಗಡೆಯಾಗಿವೆ. ಉಳಿದವುಗಳಲ್ಲಿ ಹೊಸೂರು, ತುರ್ತು, ರಾಮಸಾಗರ, ಕಂಪ್ಲಿ ,ಬೆನ್ನೂರು, ಕೆಂಚನಗುಡ್ಡ ,ಸಿರುಗುಪ್ಪ ಮತ್ತು ದೇಶನೂರು ಅಣೆಕಟ್ಟುಗಳು ಪ್ರಮುಖವಾಗಿವೆ.[೭]

೨.೪ ಚಾರಿತ್ರಿಕ ಹಿನ್ನೆಲೆ

ಮಾನವ ಜೀವನ ವಿಕಾಸ ಕ್ರಮದಲ್ಲಿ ಹಂತ–ಹಂತವಾಗಿ ಅನೇಕ ಬದಲಾವಣೆಗಳನ್ನು ಕಂಡ ಹಾಗೆಯೇ ಅಕ್ಷರದ ಅರಿವಿನೊಂದಿಗೆ ಇತಿಹಾಸದ ಕಾಲಘಟ್ಟವನ್ನು ಗುರುತಿಸಲಾಗುತ್ತಿದೆ. ಉತ್ತರ ಭಾರತದ ಸಿಂಧೂ ಬಯಲಿನ ನಾಗರಿಕತೆ (ಹರಪ್ಪ ಸಂಸ್ಕೃತಿ) ಅಸ್ತಿತ್ವದಲ್ಲಿರುವ ದಕ್ಷಿಣ ಭಾರತ ಇನ್ನೂ ಶಿಲಾಯುಗದ ಹಂತದಲ್ಲಿತ್ತೆ ಅದರಲ್ಲಿ ಉತ್ತರ ವೇದಗಳ ಕಾಲದ ಮಹಾಕಾವ್ಯಗಳ ಕಾಲದಲ್ಲಿ ನಾಗರಿಕತೆಯ ಸಂಸ್ಕೃತಿ ದಕ್ಷಿಣದಲ್ಲಿ ಪಸರಿಸಿದ್ದ ಬಗ್ಗೆ ತಿಳಿಯುತ್ತದೆ. ವಿಶೇಷವೆಂದರೆ ಗಂಗಾವತಿ ತಾಲೂಕಿನ ಆನೆಗೊಂದಿ ಪ್ರದೇಶವನ್ನು ರಾಮಾಯಣ ಕಾಲದ ವಾನರ ರಾಜ್ಯವಾದ ಕಿಷ್ಕಿಂದೆ ಎಂದು ಒಂದು ನಂಬಿಕೆ ಇದೆ. ಅದಕ್ಕೆ ಪೂರಕವೆಂಬಂತೆ ಇಲ್ಲಿ ರಾಮಾಯಣ ಕಥಾನ ಗಳಿಗೆ ಸಂಬಂಧಿಸಿದ ವಾಲಿಖಿಲ್ಲಾ, ಅಂಜನಾದ್ರಿ, ಚಿಂಚಲ ಕೋಟೆ, ವಾಲಿದಿಬ್ಬ, ಶಬರಿ ಬಂಡೆ, ಶಬರಿಗವಿ ಮುಂತಾದ ಸ್ಥಳಗಳಿವೆ. ತಾಲೂಕಿನಲ್ಲಿ ಅಯೋಧ್ಯ ಎಂಬ ಹೆಸರಿನ ಪ್ರಾಚೀನ ಹಳ್ಳಿಯೊಂದಿರುವುದು ಇಲ್ಲಿ ಗಮನಾರ್ಹವೆನಿಸುತ್ತದೆ.

ಹಂಪಿ ಪ್ರಾಚೀನ ಕಾಲದಿಂದಲೂ ಪಂಪಾ ಕ್ಷೇತ್ರ ವೆಂದು ಹೆಸರಾಗಿದೆ. ಪಂಪಾಕ್ಷೇತ್ರದ ಗಡಿಗಳಾಗಿ ಎರಡು ದಿಕ್ಕುಗಳಲ್ಲಿ ಲಿಂಗಗಳಿವೆ. ಅವುಗಳಲ್ಲಿ ಈಶಾನ್ಯ ಮತ್ತು ಉತ್ತರದ ಗಡಿಗಳ ಎರಡು ಲಿಂಗಗಳು ಗಂಗಾವತಿ ತಾಲೂಕಿನಲ್ಲಿವೆ. ಗಂಗಾವತಿ ತುಂಗಭದ್ರ ನದಿ ದೇವಘಾಟ್ ಈಶಾನ್ಯ ಗಡಿ ಯಾಗಿದ್ದು, ಸೋಮೇಶ್ವರ ಲಿಂಗವನ್ನು ಮಲ್ಲಾಪುರ ವೀರಭದ್ರೇಶ್ವರ ಉತ್ತರ ಗಡಿ ಯಾಗಿದ್ದು, ಮಾಣಿ ಭದ್ರೇಶ್ವರ ಲಿಂಗವನ್ನು ಹೊಂದಿದೆ. ಇವುಗಳ ಬಗ್ಗೆ ಸ್ಥಳದ ಪುರಾಣದಲ್ಲಿ ಉಲ್ಲೇಖವಿದೆ. ಇದೇ ಪುರಾಣದ ಉಲ್ಲೇಖದಂತೆ ಪಂಪಾಂಬಿಕೆ (ಪಾರ್ವತಿ) ಯು ನಿತ್ಯ ಸ್ನಾನ ಮಾಡುತ್ತಿದ್ದಾಳೆ ಎನ್ನಲಾದ ಪಂಪಾ ಸರೋವರ ಗಂಗಾವತಿ ತಾಲೂಕಿನಲ್ಲಿದೆ.

ಕನ್ನಡ ಮನೆತನಗಳ ಆಳ್ವಿಕೆ

ಶಾತವಾಹನರ ನಂತರ ಕನ್ನಡ ಮನೆತನಗಳಾದ ಕದಂಬ, ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಸೇವುಣ, ಕುಮ್ಮಟದರಸರು, ವಿಜಯನಗರ ಸಾಮ್ರಾಜ್ಯಗಳು ಕ್ರಮವಾಗಿ ಕನ್ನಡ ನಾಡನ್ನು ಆಳಿದವು. ಈ ಎಲ್ಲಾ ಅರಸರ ಕಾಲಘಟ್ಟಗಳಲ್ಲಿ ಗಂಗಾವತಿ ಆಯಾ ಮನೆತನಗಳ ಆಳ್ವಿಕೆಯನ್ನು ಕಂಡಿತು. ಕದಂಬ ಮಯೂರವರ್ಮನು ಮಲಪ್ರಭಾ ನದಿ ವರೆಗೂ ತನ್ನ ಪ್ರಭುತ್ವವನ್ನು ಸ್ಥಾಪಿಸಿದ್ದುದು ಕ್ರಿ. ಶ.೧೦ ನೇ ಶತಮಾನದ ಗಂಗರ ಶಾಸನ ತಾಲೂಕಿನ ಹೆಬ್ಬಾಳಿನಲ್ಲಿ ದೊರೆತಿರುವುದು, ಚಾಲುಕ್ಯ ಪುಲಿಕೇಶಿ ಸಮಗ್ರ ದಕ್ಷಿಣಾಪಥದ ಅರಸನಾಗಿದ್ದುದ್ದು, ರಾಷ್ಟ್ರಕೂಟ ೨ ನೇ ಜಗತ್ತುಂಗನು ಯಡದೊರೆ ನಾಡನ್ನು ಆಳಿದ್ದುದು ಇದಕ್ಕೆ ಸಾಕ್ಷಿಯಾಗಿದವೆ. ತಾಲೂಕಿನ ಬೂದಗುಂಪ ಹಾಗೂ ಆಗೋಲಿ ಬೆಟ್ಟದಲ್ಲಿ ರಾಷ್ಟ್ರಕೂಟರ ಶಿಲಾಶಾಸನಗಳಿವೆ

ಕ್ರಿ.ಶ.೯೭೩ ರಲ್ಲಿ ಕಲ್ಯಾಣ ಚಾಲಕ್ಯರು ರಾಷ್ಟ್ರಕೂಟರನ್ನು ಹತ್ತಿಕ್ಕಿ ಅಧಿಕಾರಕ್ಕೆ ಬರಲು ಗಂಗಾವತಿ ತಾಲೂಕು ಸಂಪೂರ್ಣ ಅವರ ಆಡಳಿತಕ್ಕೆ ಒಳಪಟ್ಟಿತ್ತು. ಚಾಲುಕ್ಯರ ಕಾಲದ ಶಾಸನಗಳು, ದೇವಾಲಯಗಳು, ಶಿಲ್ಪಗಳು ತಾಲೂಕಿನ ಆನೆಗೊಂದಿ, ಕನಕಗಿರಿ, ಕಾರಟಗಿಗಳಲ್ಲಿವೆ. ಚಾಲುಕ್ಯ ಅರಸ ಅಹವಮಲ್ಲ (೨ನೇ ತೈಲ) ತನ್ನ ಮಹಾಮಂತ್ರಿ ಮಣ್ಣಯ್ಯನಿಗೆ ಭೂದಾನ ಮಾಡಿದ ಉಲ್ಲೇಖ ಆನೆಗುಂದಿಯ ಪಂಪಾ ಸರೋವರದ ಶಾಸನದಲ್ಲಿದೆ. ದೇವಘಾಟದ ಸೋಮೇಶ್ವರ ದೇವಾಲಯದಲ್ಲಿ ಚಾಲುಕ್ಯ ೧ ನೇ ಸೋಮೇಶ್ವರನ ಕ್ರಿ.ಶ.೧೦೫೯ ಶಾಸನವಿದೆ. ಹೆಬ್ಬಾಳಿನ ಸೋಮೇಶ್ವರ, ಕಾರಟಗಿಯ ಶಿವದೇವಾಲಯ, ವಿಷ್ಣು, ಗಜಾನನ, ಸೂರ್ಯ, ಸಪ್ತಮಾತೃಕೆ ಶಿಲ್ಪಗಳು ಚಾಲುಕ್ಯ ಕಾಲದವು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಅವರ ಸಾಮಂತರಾದ ನೊಳಂಬ ಪಲ್ಲವರು ನೇರವಾಗಿ ಗಂಗಾವತಿ ಪ್ರದೇಶದಲ್ಲಿ ಆಡಳಿತ ನಡೆಸಿದರು

ನೊಳಂಬ ಪಲ್ಲವರ ಆಳ್ವಿಕೆ

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಅವರ ಸಾಮಂತರಾದ ನೊಳಂಬ ಪಲ್ಲವರು ಗಂಗಾವತಿ ತಾಲ್ಲೂಕಿನಲ್ಲಿ ಆಡಳಿತ ನಡೆಸುತ್ತಾರೆ. ಗಂಗಾವತಿ ತಾಲೂಕಿನ ದೇವಘಾಟ, ಮಿಪ್ರ ಮತ್ತು ಬಳ್ಳಾರಿ

ತಾಲೂಕಿನ ಕಲ್ಕಂಬ ಮತ್ತು ಹಳೇನೆಲ್ಲುಡಿ ಗ್ರಾಮಗಳಲ್ಲಿಯ ಶಿಲಾಶಾಸನಗಳು ಈ ವಿಷಯವನ್ನು ತಿಳಿಸುತ್ತವೆ. ಗಂಗಾ- ರಾಷ್ಟ್ರಕೂಟರ ಕಾಲದಲ್ಲಿ ಹೆಂಜೇರುವಿನಿಂದ ಆಳುತ್ತಿದ್ದ ನೊಳಂಬ ಪಲ್ಲವರು ಅವರ ದಾಳಿಯಿಂದಾಗಿ ಉತ್ತರಕ್ಕೆ ಬಂದು ಕಂಪ್ಲಿಯನ್ನು ರಾಜಧಾನಿಯನ್ನಾಗಿಸಿಕೊಂಡು ಸಾರ್ವಭೌಮತ್ವದಡಿಯಲ್ಲಿ ಆಡಳಿತ ನಡೆಸುತ್ತಾರೆ. ಈ ಮನೆತನದ ಅರಸ ಜಗದೇಕಮಲ್ಲ ಪೆರ್ಮಾನಡಿ ಉದಯಾದಿತ್ಯನು(ಕ್ರಿ. ಶ.೧೦೧೭-೧೦೪೪) ಕಂಪ್ಲಿಯ ಜೊತೆಗೆ ಗಂಗಾವತಿ ಬಳಿಯ ವಿಪ್ರ ನಾರಾಯಣ (ಹಿಂದಿನ ವಿಪ್ರ ಎಂಬ ಹಾಳು ಗ್ರಾವ) ವನ್ನು ಉಪರಾಜಧಾನಿಯನ್ನಾಗಿಸಿಕೊಂಡು ಗಂಗಾವತಿ ಪ್ರದೇಶವನ್ನು ಆಳುತ್ತಾನೆ. ಅವನು ವಿಪ್ರ ದ ಶಿವದೇವಾಲಯ, ಬನಶಂಕರಿ ದೇವಾಲಯ, ದೇವಘಾಟದ ಸೋಮೇಶ್ವರ, ಗಜಾನನ, ಪಂಚಾಯತನ ಹಾಗೂ ಇತರ ದೇವಾಲಯಗಳನ್ನು ವಿರುಪಾಪುರದ ಆಂಜನೇಯ ಹಾಗೂ ರಾಮಲಿಂಗೇಶ್ವರ ದೇವಾಲಯಗಳನ್ನು ನಿರ್ಮಿಸುತ್ತಾನೆ. ಅದೇ ರೀತಿ ಗಂಗಾವತಿಯಲ್ಲಿ ಗಂಗಾ(ವತಿ) ಸಮೇತ ಗಂಗಾಧರೇಶ್ವರ ದೇವಾಲಯವನ್ನು ಕಟ್ಟಿಸಿದನು.

ಕುಮ್ಮಟದರಸರು

ಕಲ್ಯಾಣ ಚಾಲುಕ್ಯರ ಪತನದ ನಂತರ ಗಂಗಾವತಿ ತಾಲೂಕು ಕಳಚೂರ್ಯರ, ಸೇವುಣರ ಹಾಗೂ ಕುಮ್ಮಟದರಸರ ಅಧೀನಕ್ಕೆ ಒಳಗಾಯಿತು. ಸೇವುಣರು ಆನೆಗುಂದಿ ಕೋಟೆಯ ನಿರ್ಮಾಣವನ್ನು ಪ್ರಾರಂಭಿಸಿದರು. ಇಲ್ಲಿಯ ಚಂಚಲಕೋಟೆ ಹಾಗೂ ಅದರೊಳಗಿನ ನಾಗನಾಥ ದೇವಾಲಯವನ್ನು ಸೇವುಣರು ನಿರ್ಮಿಸುತ್ತಾರೆ.

ಗಂಗಾವತಿ ತಾಲೂಕು ಕೆಲಕಾಲ ಕುಮ್ಮಟದರಸರಾದ ಕಂಪಿಲರಾಯ ಹಾಗೂ ಅವನ ಮಗ ಕುಮಾರ ರಾಮನ ಅಧೀನಕ್ಕೆ ಒಳಗಾಯಿತು. ದೊರವಡಿಯಲ್ಲಿದ್ದ ರಾಜಧಾನಿಯನ್ನು ಕ್ರಿ.ಶ. ೧೨೮೦ರ ಹೊತ್ತಿಗೆ ಕುಮ್ಮಟ ದುರ್ಗಕ್ಕೆ ಸ್ಥಳಾಂತರಿಸಿದ ಅರಸರು ಅಲ್ಲಿಂದಲೇ ಆಡಳಿತ ನಡೆಸಿದರು. ಗಂಗಾವತಿ ಆನೆಗುಂದಿ ಅವರ ರಾಜ್ಯದ ಪ್ರಮುಖ ಸ್ಥಳಗಳಾಗಿದ್ದವು. ಕುಮಾರರಾಮನ ಸಾಂಗತ್ಯದಲ್ಲಿ ಉಲ್ಲೇಖವಾಗಿರುವ ನೀಲಾವತಿ ಪಟ್ಟಣ ಗಂಗಾವತಿ ಎಂದು ಗುರುತಿಸಬಹುದಾಗಿದೆ. ಗಂಗಾವತಿ ಹಿಂದೆ ನೀಲಾವತಿ ಎಂಬ ಹೆಸರಿತ್ತೆಂದು ಹೇಳಲಾಗುತ್ತದೆ. ಕುಮ್ಮಟದುರ್ಗ ದಿಂದ ಗಂಗಾವತಿ ಯನ್ನು ಆಳಿದ ಕುಮಾರರಾಮನ ಹೆಸರು ಶೌರ್ಯ, ಸಾಹಸ, ಪರನಾರಿ ಸಹೋದರತ್ವ ಗಳಿಂದಾಗಿ ಈ ಭಾಗದಲ್ಲಿ ಜನಜನಿತವಾಗಿದೆ. ಗಂಗಾವತಿಯ ನಾಯಕ ಜನಾಂಗದ ಓಣಿಯಲ್ಲಿ ಕುಮಾರರಾಮನ ಶಿಲ್ಪ ಹೊಂದಿದೆ.ಕ್ರಿ. ಶ.೧೩೨೭ ರಲ್ಲಿ ನಡೆದ ದೆಹಲಿ ಸುಲ್ತಾನ್ ಮಹಮದ್ ಬಿನ್ ತುಘಲಕ್ ನ ದಾಳಿಯಲ್ಲಿ ಕಂಪ್ಲಿರಾಯ ಹಾಗೂ ಅವನ ಮಗ ಹೋರಾಡುತ್ತಲೇ ವೀರಮರಣವನ್ನು ಹೊಂದಿದವರು.

ಕುಮ್ಮಟ ಸಹಿತ ದಕ್ಷಿಣದ ಎಲ್ಲಾ ಹಿಂದೂ ರಾಜ್ಯಗಳು ದೆಹಲಿಯ ದಾಳಿಯಲ್ಲಿ ಪತನವಾದ ನಂತರ ಈ ಪ್ರದೇಶಕ್ಕೆ ಆನೆಗುಂದಿಯನ್ನು ಮುಖ್ಯ ಆಡಳಿತ ಕೇಂದ್ರವನ್ನಾಗಿಸಿ ಸುಲ್ತಾನನು ೧೩೩೨ ರಲ್ಲಿ ಮಲ್ಲಿಕ್ ಮಹ್ಮದ್ ಎಂಬ ಅಧಿಕಾರಿಯನ್ನು ನೇಮಿಸಿದನು. ಆದರೆ ಸ್ಥಳೀಯರ ಅಸಹಕಾರ ಮತ್ತು ದೆಹಲಿಯ ರಾಜಕೀಯ ಅಸ್ಥಿರತೆಯಿಂದಾಗಿ ಅವನು ಇಲ್ಲಿಂದ ೧೩೩೪ ರಲ್ಲಿ ನಿರ್ಗಮಿಸುತ್ತಾನೆ.

ವಿಜಯನಗರ ಸಾಮ್ರಾಜ್ಯ ಕಾಲ

ದೆಹಲಿ ಸುಲ್ತಾನರ ದಬ್ಬಾಳಿಕೆಗೆ ಪ್ರತಿಭಟನಾತ್ಮಕ ವಾಗಿ ವಿದ್ಯಾರಣ್ಯರ ಆಶೀರ್ವಾದ ಹಾಗೂ ಕಾಶೀವಿಲಾಸ ಕ್ರಿಯಾಶಕ್ತಿ ದೇವರ ಪ್ರೇರಣೆಯೊಂದಿಗೆ ಕ್ರಿ.ಶ. ೧೩೩೬ ರಲ್ಲಿ ಹರಿಹರ ಬುಕ್ಕರು ವಿಜಯನಗರ ರಾಜ್ಯ ಸ್ಥಾಪಿಸಿದಾಗ, ಗಂಗಾವತಿ ತಾಲೂಕು ಮೂಲ ವೇದಿಕೆಯಾಯಿತು. ತಾಲೂಕಿನ ಆನೆಗುಂದಿಯನ್ನು ಸಂಗಮ ಸಹೋದರರು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಹರಿಹರ ಬುಕ್ಕರು ಆನೆಗುಂದಿಯಿಂದಲೇ ಆಡಳಿತ ನಡೆಸಿ ನಂತರ ರಾಜಧಾನಿಯನ್ನು ಹಂಪಿಗೆ ಸ್ಥಳಾಂತರಿಸಿದರು. ಪ್ರೌಢದೇವರಾಯನ ಕಾಲದಲ್ಲಿ ಗಂಗಾವತಿ ತಾಲೂಕಿನಲ್ಲಿ ಅನೇಕ ನಿರ್ಮಾಣ ಕಾರ್ಯಗಳು ನಡೆದವು. ಹಿರೇಜಂತಕಲ್ಲಿನ ಪ್ರಸನ್ನ ವಿರೂಪಾಕ್ಷ (ಪಂಪಾಪತಿ) ದೇವಾಲಯ, ಬಸಾಪಟ್ಟಣ, ಚಿಕ್ಕಬೆಣಕಲ್ ಹಾಗೂ ವೆಂಕಟಗಿರಿ ಗಳಲ್ಲಿ ಇವನು ಕೆರೆಗಳನ್ನು ನಿರ್ಮಿಸಿದ್ದಾನೆ. ಚಿಕ್ಕಬೆಣಕಲ್ ಕೆರೆಯ ಹತ್ತಿರದ ಬಂಡೆಯ ಮೇಲೆ ಈತನ ಒಂದು ಶಿಲಾಶಾಸನವಿದೆ.ಕ್ರಿ. ಶ.೧೩೪೨ ರಲ್ಲಿ ಹರಿಹರನ ಕಾಲದಲ್ಲಿ ಬೈಚದಂಡನಾಯಕನ ಮಗ ಇರುಗಪ ದಂಡನಾಯಕನು ಆನೆಗುಂದಿಯಲ್ಲಿ ಜೈನ ಬಸದಿಯೊಂದನ್ನು ನಿರ್ಮಿಸಿದನು. ನರಸಿಂಹ ದೇವಾಲಯ, ಕೃಷ್ಣದೇವರಾಯ, ಅಚ್ಯುತ ದೇವರಾಯ, ಸದಾಶಿವ ದೇವರಾಯರ ಕಾಲದ ಹಲವು ಶಾಸನಗಳು, ಕನಕಗಿರಿ, ಹಿರೇಜಂತಕಲ್, ಕೇಸರಹಟ್ಟಿ ಮುಂತಾದ ಗ್ರಾಮಗಳಲ್ಲಿವೆ.

ವಿಜಯನಗರ ಸಾಮ್ರಾಜ್ಯದ ಉತ್ತರದ ಕೊನೆಯ ಕಣಿವೆ ದ್ವಾರ ಬಸವಪಟ್ಟಣ ದ್ವಾರ ಗಂಗಾವತಿ ತಾಲೂಕಿನಲ್ಲಿತ್ತು. ಈ ದ್ವಾರದ ಮೂಲಕವೇ ಹಾದು ವಿಜಯನಗರದ ಅರಸರು ಉತ್ತರ ರಾಯಚೂರು, ಮುದಗಲ್, ಗುಲ್ಬರ್ಗಾ ಯುದ್ಧಗಳನ್ನು ನಡೆಸಿದ್ದು. ಆನೆಗುಂದಿಯಲ್ಲಿ ವಿಜಯನಗರ ಕಾಲದಲ್ಲಿ ರಾಜಕೀಯ ಕೈದಿಗಳನ್ನು ಬಂಧಿಸಿಡುತ್ತಿದ್ದ ಸೆರೆಮನೆ ಇತ್ತು. ಆಡಳಿತಾತ್ಮಕವಾಗಿ ಗಂಗಾವತಿ ನಗರ 'ಸೀಮೆ' ಎಂಬ ಘಟಕ ವಾಗಿತ್ತು. ಸದಾಶಿವ ದೇವರಾಯನ ಮಹಾಮಂಡಲೇಶ್ವರ ರಾಮರಾಯನ ಹಾಗೂ ಆತನ ಸಹೋದರ ತಿರುಮಲರ ಶಾಸನಗಳು ತಾಲೂಕಿನ ಕನಕಗಿರಿ,ಹಿರೇಜಂತಕಲ್ ಮತ್ತು ಆನೆಗುಂದಿಯಲ್ಲಿವೆ.

ಕ್ರಿ ಶ.೧೫೫೬ ರಲ್ಲಿ ನಡೆದ ತಾಳಿಕೋಟೆ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯ ಸೋತು, ವೈಭವತೆಯನ್ನು ಕಳೆದುಕೊಂಡಿತು. ಆಗ ಗಂಗಾವತಿ ಸಹಿತ ತುಂಗಭದ್ರಾ ನದಿಯ ಸುತ್ತಲಿನ ಪ್ರದೇಶ ಬಿಜಾಪುರದ ವಶವಾಯಿತು.

ಕನಕಗಿರಿ ಪಾಳೆಯಗಾರರು

ಕರ್ನಾಟಕದ ಪಾಳೆಯಗಾರರಲ್ಲಿ ಅತ್ಯಂತ ದೀರ್ಘಾವಧಿಯ ಆಡಳಿತದಿಂದಾಗಿ ಗಮನ ಸೆಳೆದ ವರಲ್ಲಿ ಕನಕಗಿರಿಯ ಪಾಳೇಗಾರರು ಪ್ರಮುಖರಾಗಿದ್ದಾರೆ. ರಾಜಕೀಯವಾಗಿ ಹಾಗೂ ಸಾಂಸ್ಕೃತಿಕವಾಗಿ ಇವರ ಆಳ್ವಿಕೆ ಕರ್ನಾಟಕದ ಚರಿತ್ರೆಯಲ್ಲಿ ಗಮನ ಸೆಳೆಯುವಂತದ್ದು. ಗುಜ್ಜಲ ವಂಶದ ನಾಯಕ ಅರಸರ ಕನಗಿರಿ ರಾಜ್ಯ ಕ್ರಿಶ ೧೫ ನೇ ಶತಮಾನದಿಂದ ೧೮ ನೇ ಶತಮಾನದ ವರೆಗೆ ಅಸ್ತಿತ್ವದಲ್ಲಿತ್ತು. ದೀರ್ಘಾವಧಿಯಲ್ಲಿ ನಾಯಕ ಅರಸರು ವಿಜಯನಗರ, ಆದಿಲ್ ಷಾಯಿಗಳ ಸಾರ್ವಭೌಮತ್ವದಡಿಯಲ್ಲಿ ಆಡಳಿತ ನಡೆಸುತ್ತಾರೆ.

ವಿಜಯನಗರ ಸಾಮ್ರಾಟ ಪ್ರೌಢದೇವರಾಯನ ಕಾಲದಲ್ಲಿ ಗುಜ್ಜಲ ವಂಶದ ಪರಸಪ್ಪ ನಾಯಕನು ಕನಕಗಿರಿಯಲ್ಲಿ ೧೪೩೬ ರಲ್ಲಿ ಆಳ್ವಿಕೆ ಪ್ರಾರಂಭಿಸಿದನು. ಇವನ ವಂಶಜರು ವಿಜಯನಗರ ಸಾಮ್ರಾಟರಿಗೆ ಆಪ್ತರು, ನಿಷ್ಠರು ಕ್ರಮೇಣ ತಮ್ಮ ಅಧಿಕಾರ ವ್ಯಾಪ್ತಿಯ ಪ್ರದೇಶವನ್ನು ವಿಸ್ತರಿಸಿದರು. ಪರಸಪ್ಪ ನಾಯಕನು (೧೪೩೬–೧೫೧೦) ನಂತರ ಕ್ರಮವಾಗಿ ಉಡಚ ನಾಯಕ (೧೫೧೦–೧೫೩೩), ಕೆಲವಡಿ ಉಡಚ ನಾಯಕ (೧೫೩೩–೧೫೭೮), ಒಂದನೇಯ ಕನಕಪ್ಪ ನಾಯಕ (೧೫೭೮–೧೬೧೮), ಇಮ್ಮಡಿ ಉಡಚ ನಾಯಕ (೧೬೧೮–೧೭೦೮), ಇಮ್ಮಮಡಿ ಕನಕಪ್ಪ ಉಡಚ ನಾಯಕ (೧೭೦೮–೧೭೫೨), ಹಿರೇ ರಂಗಪ್ಪನಾಯಕ (೧೭೫೨–೧೭೮೧), ಮುಮ್ಮಡಿ ಕನಕಪ್ಪ ನಾಯಕ (೧೭೮೧–೧೭೮೮), ಮತ್ತು ಹಿರೇನಾಯಕರು (೧೭೮೮–೧೮೩೩), ಕನಕಗಿರಿಯಿಂದ ಆಡಳಿತ ನಡೆಸಿದರು.

ಮೂಲಪುರುಷ ಪರಸಪ್ಪ ನಾಯಕನ ನಂತರ ಬಂದ ಅವನ ಮಗ ಒಂದನೇ ಉಡಚ ನಾಯಕ ಅಥವಾ ನವಾಬ್ ಉಡಚ ನಾಯಕ, ಇಮ್ಮಡಿ ಉಡಚ ನಾಯಕ ಹಾಗೂ ಹಿರೇ ರಂಗಪ್ಪನಾಯಕರು ಕನಕಗಿರಿ ಪಾಳೆಯಗಾರರಲ್ಲಿ ಹೆಸರಾಂತ ದೊರೆಗಳು. ಇವರ ಕಾಲದಲ್ಲಿ ರಾಜಕೀಯ ,ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಹತ್ವಪೂರ್ಣವಾದ ಬೆಳವಣಿಗೆಗಳುಂಟಾದವು, ನವಾಬ ಉಡಚ ನಾಯಕನು ಹಲವಾರು ದೇವಾಲಯ,ಸ್ಮಾರಕ ಕೋಟೆಗಳನ್ನು ನಿರ್ಮಿಸಿ ಕನಕಗಿರಿಯನ್ನು ಕಲಾ ಕೇಂದ್ರವನ್ನಾಗಿ ರೂಪಿಸಿದನು. ಹೀಗೆ ಹಲವಾರು ಸ್ಮಾರಕಗಳನ್ನು ಹೊಂದಿರುವುದರಿಂದಲೇ "ಕಣ್ಣಿದ್ದವರು ಕನಕಗಿರಿ ನೋಡಬೇಕು" ಎಂಬ ನಾಣ್ಣುಡಿ ಪ್ರಚಲಿತದಲ್ಲಿದೆ. ನವಾಬ ಉಡಚ ನಾಯಕನು ಕೃಷ್ಣದೇವರಾಯನ ಅನುಮತಿ ಪಡೆದು ಹಂಪಿಯ

ವಿರುಪಾಕ್ಷ ದೇವಾಲಯದ ಉತ್ತರ ದಿಕ್ಕಿನ ದ್ವಾರಗೋಪುರವನ್ನು ನಿರ್ಮಿಸುತ್ತಾನೆ. ಇಂದಿಗೂ ಗೋಪುರವನ್ನು ಕನಕಗಿರಿ ಗೋಪುರವೆಂದೇ ಕರೆಯಲಾಗುತ್ತಿದೆ

ಇಮ್ಮಡಿ ಉಡಚ ನಾಯಕನ ಕಾಲವು ರಾಜಕೀಯ, ಸೈನಿಕ ಸಾಧನೆಗಳು ಚರಿತ್ರೆಯಲ್ಲಿ ಗಮನಾರ್ಹವಾಗಿದೆ. ಸಮರ್ಥ ದೊರೆಯಾಗಿದ್ದ ಇತನು ೧೬೫೩ ರಲ್ಲಿ ರಾಜ್ಯದ ಮೇಲೆ ದಂಡೆತ್ತಿ ಬಂದ ಬಿಜಾಪುರದ ಸೇನಾನಿ ಅಫ್ಜಲ್ ಖಾನನನ್ನು ಸೋಲಿಸಿ ಹಿಮ್ಮೆಟ್ಟಿಸುತ್ತಾನೆ. ಅವನ ಜೊತೆ ಬಂದಿದ್ದ ಬಿಜಾಪುರದ ಮತ್ತೊಬ್ಬ ಸೇನಾಧಿಪತಿ ಷಹಜಿಯ ಮಗ ಸಂಭಾಜಿ (೨ ನೇ ಹೆಂಡತಿ ತಕುಬಾಯಿ ಮಗ) ಕನಕಗಿರಿಯ ಯುದ್ದದಲ್ಲಿ ಹತನಾದನು. ಅವನನ್ನು ಕನಕಗಿರಿಯಲ್ಲಿಯೇ ಸಮಾಧಿ ಮಾಡಲಾಯಿತು. ಆದರೆ ಮಗನ ಸಾವಿನ ಸೇಡನ್ನು ತೀರಿಸಿಕೊಳ್ಳಲು ೧೬೫೭ ರಲ್ಲಿ ದಂಡೆತ್ತಿ ಬಂದ ಷಹಾಜಿಯ ಕೈಯಲ್ಲಿ ಇಮ್ಮಡಿ ಉಡಚ ನಾಯಕ ಸೋಲುತ್ತಾನೆ, ಕನಕಗಿರಿಯನ್ನು ಷಹಾಜಿ ಕೈವಶ ಮಾಡಿಕೊಂಡನು. ೧೬೮೬ ರಲ್ಲಿ ಬಿಜಾಪುರ ಪತನವಾಗಲು ಇಮ್ಮಡಿ ಉಡಚ ನಾಯಕ ಪುನಃ ಕನಕಗಿರಿ ಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಾನೆ. ಇವನ ನಂತರದ ದೊರೆಗಳಲ್ಲಿ ಹಿರೇ ರಂಗಪ್ಪನಾಯಕನ ಕಾಲವು ಸಾಹಿತ್ಯಕವಾಗಿ ಮಹತ್ವದಾಗಿದೆ. ಈತನ ಆಶ್ರಯದಲ್ಲಿ ಕವಿಗಳು, ಸಂತರು ಇದ್ದರು. ಹರೇ ರಂಗಪ್ಪನಾಯಕನ ಇಚ್ಛೆಯೆ ಮೇರೆಗೆ ಕವಿ ಶಿರಗುಪ್ಪಿ ಸದಾಶಿವಯ್ಯನು ಅಪೂರ್ಣವಾಗಿದ್ದ ಅಪರಾಳ ತಮ್ಮಣ್ಣನ ಶ್ರೀ ಕೃಷ್ಣ ಪಾರಿಜಾತ ನಾಟಕವನ್ನು ಪೂರ್ಣಗೊಳಿಸುತ್ತಾನೆ. ಕವಿ ಜಯ ವೆಂಕಟಾಚಾರ್ಯನು ಕನ್ನಡ ಸಾಹಿತ್ಯದಲ್ಲಿ ವಿರಳವಾಗಿರುವ ಭಟ್ಟಂಗಿ ಹಾಗೂ ದಂಡಗಳನ್ನು ರಚಿಸಿದ್ದಾನೆ. ಸಂತರಾದ ಚಿದಾನಂದವಧೂತರು ದೇವಿ ಪುರಾಣ, ಬಗಳಾಂಬ ಸ್ತೋತ್ರ, ಕಾಮ ವಿಡಂಬನೆ ಮುಂತಾದ ಕೃತಿಗಳನ್ನು ರಚಿಸಿರುವರು.

ಹಿರೇನಾಯಕನು ಕನಕಗಿರಿಯ ಕೊನೆಯ ದೊರೆ. ಈತನು ಪ್ರಜಾಪೀಡಕನು, ಉದ್ದಟನು ಆಗಿದ್ದನು. ಆನರ ಆಪಾದನೆ ಮೇರೆಗೆ ಹೈದರಾಬಾದಿನ ನಿಜಾಮನು ಹಿರೇನಾಯಕನನ್ನು ಶಿಕ್ಷಿಸಲು ಸುರುಪುರದ ಪಾಮನಾಯಕನಿಗೆ ಆದೇಶಿಸುತ್ತಾನೆ.೧೮೩೩ ರಲ್ಲಿ ಪರಸ್ಪರರ ಮಧ್ಯ ಎಮ್ಮಿಗುಡ್ಡ ಕೋಟೆಯಲ್ಲಿ ಕಾಳಗ ನಡೆಯಿತು. ಹಿರೇ ನಾಯಕನನ್ನು ಮೋಸದಿಂದ ಸೆರೆ ಹಿಡಿದು ಹತ್ಯೆಗೆಯ್ಯ ಲಾಯಿತು. ಕನಕಗಿರಿ ನಿಜಾಮನ ವಶವಾಯಿತು.

ನರಪತಿ ಸಂಸ್ಥಾನ, ಆನೆಗುಂದಿ

ಗಂಗಾವತಿ ತಾಲೂಕಿನ ಮತ್ತೊಂದು ಸಣ್ಣ ರಾಜ್ಯವೆಂದರೆ, "ವಿದ್ಯಾವಿಜಯನಗರ ನರಪತಿ ಸಂಸ್ಥಾನ ಆನೆಗುಂದಿ".೧೫೬೫ ರಲ್ಲಿ ತಾಳಿಕೋಟೆ ಯುದ್ಧದಲ್ಲಿ ಅಳಿಯ ರಾಮರಾಯ ಹತನಾಗಲು ಅವನ ಸಹೋದರರಾದ ತಿರುಮಲ ಹಾಗೂ ವೆಂಕಟಾದ್ರಿ ಇವರು ಪೆನುಗೊಂಡ ಮತ್ತು ಚಂದ್ರಗಿರಿ ಗಳಿಗೆ ತೆರಳಿ ಅಲ್ಲಿಂದ ಆಡಳಿತ ಮುಂದುವರಿಸಿದರು. ಆದರೆ ೧೬೪೬ ರ ಹೊತ್ತಿಗೆ ವಿಜಯನಗರದ ಕೊನೆಯ ದೊರೆ ಶ್ರೀರಂಗ ಬಿಜಾಪುರ ಗೋಲ್ಕೊಂಡ ಗಳ ಜಂಟಿ ದಾಳಿಯಿಂದಾಗಿ ವೆಲ್ಲೂರ

ಕಳೆದುಕೊಂಡು ರಾಜ್ಯ ಭ್ರಷ್ಟನಾದನು. ಆದರೆ ಆದಿಲ್ ಶಾಹಿಗಳು ಶ್ರೀ ರಂಗನಿಗೆ ಆನೆಗುಂದಿಯಲ್ಲಿ ನೇಮಕ ಮಾಡಿ ಗಂಗಾವತಿ ಪರಗಣೆ, ಬಾಣರಾವಿ ಪರಗಣೆ,ಕೆಲವು ಗ್ರಾಮಗಳನ್ನು ಬಿಟ್ಟುಕೊಟ್ಟರು. ಹೀಗೆ ಆನೆಗುಂದಿಯಲ್ಲಿ ವಿಜಯನಗರ ವಂಶಸ್ಥರಾದ ಅರವಿಡು ಮನೆತನದ ಅರಸೊತ್ತಿಗೆ ೧೬೪೭ ರ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬಂದಿತು. ಇದು ನರಪತಿ ಸಂಸ್ಥಾನವೆಂದು ಪ್ರಸಿದ್ಧವಾಗಿದೆ. ಶ್ರೀರಂಗರಾಯನ ನಂತರ ಆತನ ಮಗ ವೆಂಕಟರಾಯ(೧೬೭೨-೧೬೯೨) ಆತನ ನಂತರ ಮಗ ಚಿನ್ನಪ್ಪ ರಾಯ (೧೬೯೨-೧೭೦೩) ಆತನ ಮಗ ಶೂರ ಹಿರೇದಾಸಿರಾಯ (೧೭೦೩-೧೭೨೦) ಇವರು ಕ್ರಮವಾಗಿ ಆಳಿದರು. ಹಿರೇದಾಸಿರಾಯನು ಕಾಲದಲ್ಲಿ ಹರಪನಹಳ್ಳಿ ಪಾಳೆಯಗಾರರು ಹೊಸೂರು ಪರಗಣೆಯನ್ನು ,ಚಿತ್ರದುರ್ಗ ಪಾಳೆಯಗಾರರು ಬಾಣರವಿ ಪರಗಣೆ, ಕುರುಗೋಡು ಪರಗಣೆಯ ಕೆಲವು ಗ್ರಾಮಗಳನ್ನು ಮತ್ತು ಕನಕಗಿರಿಯ ಪಾಳೆಗಾರರು ಗಂಗಾವತಿ ಪರಗಣೆಯ ಕೆಲವು ಗ್ರಾಮಗಳನ್ನು ಆಕ್ರಮಿಸಿದರು. ಪರಿಣಾಮವಾಗಿ ಆನೆಗುಂದಿ ಚಿಕ್ಕ ರಾಜ್ಯವಾಯಿತು.

ವೀರ ವೆಂಕಟಪತಿರಾಯನ ತರುವಾಯ ಆತನ ಮಗ ತಿರುಮಲನಿಗೆ ೧೭೭೫ ರಲ್ಲಿ ಪಟ್ಟ ವಾಯಿತು. ಇವನ ಕಾಲದಲ್ಲಿ ಅಂದರೆ ೧೭೭೫ ರಲ್ಲಿ ಅದರಲ್ಲಿಯೂ ಆನೆಗುಂದಿಯ ಮೇಲೆ ಆಕ್ರಮಣ ಗೈದು ಕೆಲವು ಹಳ್ಳಿಗಳನ್ನು ವಶಪಡಿಸಿಕೊಂಡನು. ಅಷ್ಟೇ ಅಲ್ಲದೆ ಆನೆಗುಂದಿ ರಾಜ್ಯವನ್ನು ತನ್ನ ಅಧೀನದಲ್ಲಿರಿಸಿಕೊಂಡನು. ೧೭೮೯ ರಲ್ಲಿ ಹೈದರಾಲಿಯ ಮಗ ಟಿಪ್ಪು ಸುಲ್ತಾನನು ಆನೆಗುಂದಿಯನ್ನು ಸಂಪೂರ್ಣವಾಗಿ ವಶಪಡಿಸಿಕೊಂಡು ಮೈಸೂರು ರಾಜ್ಯದಲ್ಲಿ ವಿಲೀನಗೊಳಿಸಿದರು. ಅರಸ ತಿರುಮಲ ಮತ್ತು ಅವನ ಪರಿವಾರ ಕಮಲಾಪುರ ಕ್ಕೆ ತೆರಳಿ ಅಲ್ಲಿ ವಾಸಿಸಲಾರಂಭಿಸಿತು. ಟಿಪ್ಪುವಿನ ಮಂತ್ರಿ ಪೂರ್ಣಯ್ಯ ರಾಜತಿರುಮಲನಿಗೆ ೨೦೦೦ ರೂಪಾಯಿಗಳ ಮಾಶಾಸನದ ವ್ಯವಸ್ಥೆ ಮಾಡಿದ. ಅಲ್ಲಿಗೆ ಆನೆಗುಂದಿ ಅರಸರ ಅಧಿಕೃತ ಸ್ವತಂತ್ರ ಆಳ್ವಿಕೆ ಕೊನೆಗೊಂಡಿತು.

೧೭೫೦ ರಲ್ಲಿ ಬ್ರಿಟಿಷರು ಹೈದರಾಬಾದಿನ ನಿಜಾಮ ಮತ್ತು ಪೇಶ್ವೆಯರ ನಡುವೆ ಆದ ಒಪ್ಪಂದದಲ್ಲಿ ಆನೆಗುಂದಿ ಸಂಸ್ಥಾನವನ್ನು ಪುನಃ ಪ್ರತಿಷ್ಠಾಪಿಸಲಾಯಿತು. ಅದಕ್ಕೆ ಶ್ರೀ ಮದ್ರಾಜಾಧಿರಾಜ ಪರಮೇಶ್ವರ, ಶ್ರೀ ವೀರಪ್ರತಾಪ, ವೀರ ತಿರುಮಲ ವಿದ್ಯಾ ವಿಜಯನಗರ ಸಂಸ್ಥಾನವೆಂದು ಹೆಸರಿತ್ತು. ಶ್ರೀಸಂಸ್ಥಾನ ರಾಣಿ ಕುಪ್ಪಮ್ಮ ವರ ಜನಾಮ ರಾಗಿದ್ದರು. ೧೯೪೭ ರಲ್ಲಿ ಭಾರತ ದೇಶ ಸ್ವತಂತ್ರಗೊಂಡು ಆನೆಗುಂದಿ ಸಂಸ್ಥಾನದ ಹಂಪಿ, ಕಮಲಾಪುರ ಸುತ್ತಲಿನ ಪ್ರದೇಶಗಳು ಮದ್ರಾಸ್ ಪೆಸಿಡೆನ್ಸಿಯೊಂದಿಗೆ ಭಾರತ ಒಕ್ಕೂಟದಲ್ಲಿ ವಿಲೇನ ವಾದವು. ೧೯೪೮ ರಲ್ಲಿ ನಡೆದ ಹೈದರಾಬಾದ್ ಯೋಜನೆಯೊಂದಿಗೆ ಭಾರತ ಸರ್ಕಾರಕ್ಕೆ ಸೇರಿದವು. ಅಲ್ಲಿಗೆ ಆನೆಗೊಂದಿ ರಾಜ್ಯವು ಕೊನೆಗೊಂಡಿತು.

ಹುಲಿಹೈದರ ಸಂಸ್ಥಾನ (೧೮೩೩-೧೯೪೮)

ಕನಕಗಿರಿಯಿಂದ ಸುಮಾರು ೧೦ ಕಿ.ಮೀ ದೂರದಲ್ಲಿ ಹುಲಿಹೈದರ ಗ್ರಾಮವಿದೆ. ಇಲ್ಲಿ ಕನಕಗಿರಿಯ ಗುಜ್ಜಲ ವಂಶದ ನಾಯಕ ಮನೆತನದವರು ೧೮೩೩ ರಿಂದ ೧೯೪೮ ರ ವರೆಗೆ ಆಳ್ವಿಕೆ ನಡೆಸಿದರು.

ಹಳ್ಳಿಗಳ ಜಾಗೀರಾಗಿದ್ದ ಹುಲಿಹೈದರ ಸಂಸ್ಥಾನವೆಂದು ಕರೆಯಲ್ಪಟ್ಟಿದೆ. ಕನಕಗಿರಿಯ ಪಾಳೆಯ ಪಟ್ಟನ್ನು ಹೈದರಾಬಾದ್ ನಿಜಾಮನು ಹಿರೇ ನಾಯಕನಿಂದ ವಶಪಡಿಸಿಕೊಂಡ ನಂತರ ಅವನು ೨ ನೇ ಮಗ ರಂಗನಾಥಪ್ಪ ನಾಯಕ ನಿಜಾಮನ ವಿರುದ್ಧ ಬಂಡೇಳಲು ಅವನಿಗೆ ನಿಜಾಮನು ಕನಕಗಿರಿಯನ್ನು ಹೊರತುಪಡಿಸಿ ೧೬ ಹಳ್ಳಿಗಳ ಜಾಗೀರನ್ನು ನೀಡಿದನು. ರಂಗನಾಥಪ್ಪ ನಾಯಕ ಹುಲಿಹೈದರ ಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು ೧೮೩೩ ರಿಂದ ಆಡಳಿತ ಪ್ರಾರಂಭಿಸುತ್ತಾನೆ. ಕನಕಗಿರಿ ಗ್ರಾಮ ನಿಜಾಮನ ಅಧೀನದಲ್ಲಿದ್ದರು ಅಲ್ಲಿ ಕನಕಾಚಲಾಪತಿ ದೇವರ ಜಾತ್ರೆ ನಡೆಸುವ ಅಧಿಕಾರ ಬಿಟ್ಟುಕೊಟ್ಟಿದ್ದನು. ರಂಗನಾಥಪ್ಪ ನಾಯಕನ ನಂತರ ಹಿರಿಯ ಮಗ ರಂಗಪ್ಪನಾಯಕ ಪಟ್ಟಕ್ಕೆ ಬರುತ್ತಾನೆ. ಈತನು ಪುತ್ರ ಸಂತಾನವಿಲ್ಲದೆ ಮರಣಹೊಂದಲು ಹಿರಿಯ ರಾಣಿ ವೆಂಕಟಮ್ಮ ಮೈದುನ ಸೋಮಸಾಗರದ ಕನಕಪ್ಪ ನಾಯಕನ ಮಗ ಉಡಸಿನಾಯಕನನ್ನು ದತ್ತು ತೆಗೆದುಕೊಂಡಳು. ಉಡಸಿನಾಯಕನ ನಂತರ ಅವನ ಮಗ ರಾಜ ರಂಗಪ್ಪ ಅಧಿಕಾರಕ್ಕೆ ಬಂದರೂ ಚಿಕ್ಕವಯಸ್ಸಿನಲ್ಲಿ ನಿಧನನಾದನು, ರಾಣಿ ಗೌರಮ್ಮ ಮೈದುನನ ಮಗ ರಂಗಪ್ಪನಾಯುಕನನ್ನು ದತ್ತು ತೆಗೆದುಕೊಂಡಳು. ಆದರೆ ಅರಸ ಅಲ್ಪ ಪ್ರಾಯದವನಾಗಿರುವುದರಿಂದ ಸರಿಯಾದ ಆಡಳಿತ ನಡೆಸಲು ಸಾಧ್ಯವಿಲ್ಲಾವೆಂದು ಹೈದರಾಬಾದ ನಿಜಾಮ ಸಂಸ್ಥಾನವನ್ನು ಸ್ವಾಧೀನಪಡಿಸಿಕೊಂಡನು. ರಾಣಿ ಗೌರಮ್ಮ ಹಾಗೂ ಆಕೆಯ ದತ್ತುಪುತ್ರ ರಾಜ ರಂಗಪ್ಪನಾಯಕನನ್ನು ವರ್ಷಾಶನ ಗೊತ್ತುಪಡಿಸಿ ಹೈದರಾಬಾದಿನಲ್ಲಿ ಇರಿಸಲಾಯಿತು(ರಾಣಿ ಗೌರಮ್ಮ ೧೯೫೨ ರಲ್ಲಿ ಹೈದರಾಬಾದಿನಲ್ಲಿ ನಿಧನರಾದರು) ನಂತರ ರಾಜ ರಂಗಪ್ಪನಾಯಕನಿಗೆ ಸಂಸ್ಥಾನ ಬಿಟ್ಟುಕೊಡಲಾಯಿತು. ಆದರೆ ಆ ಹೊತ್ತಿಗೆ ಅಂದರೆ ೧೯೪೮ ರಲ್ಲಿ ಹೈದರಾಬಾದ್ ವಿಮೋಚನೆಯೊಂದಿಗೆ ಹುಲಿಹೈದರ ಸಂಸ್ಥಾನ ಭಾರತ ಒಕ್ಕೂಟದಲ್ಲಿ ವಿಲೀನವಾಯಿತು.

ನಿಜಾಮರ ಆಳ್ವಿಕೆ

ಮೊಗಲ್ ಸುಬೇದಾರಿ ಹೈದರಾಬಾದನ ಸುಬೇದಾರ ಒಂದನೇ ಅಸಫ್ಜಾಹ,ಮೀರ್ ಕಮರುದ್ದೀನ್ ನು, ೧೭೨೪ ರಲ್ಲಿ ಸ್ವಾತಂತ್ರ ಘೋಷಿಸಿಕೊಂಡನು. ಸ್ವತಂತ್ರ ಹೈದರಾಬಾದ್ ರಾಜ್ಯ ಸ್ಥಾಪಿಸಿದನು. ಇವನ ವಂಶದ ಅರಸರನ್ನು ನಿಜಾಮರು ಎಂದು ಕರೆಯಲಾಗಿದೆ.೧೭೯೯ ರಲ್ಲಿ ನಡೆದ ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಟಿಪ್ಪು ಮಡಿದ ನಂತರ ಆನೆಗುಂದಿ

ಸಹಿತ ಗಂಗಾವತಿ ಹೈದರಾಬಾದ್ ನಿಜಾಮನ ಪಾಲಾಯಿತು. ೧೯೪೮ ರಲ್ಲಿ ಹೈದರಾಬಾದ್ ರಾಜ್ಯ ವಿಮೋಚನೆವರೆಗೂ ಗಂಗಾವತಿ ತಾಲೂಕ ನಿಜಾಮನ ಆಳ್ವಿಕೆಯನ್ನು ಕಂಡಿತು.

ತಾಲೂಕು ಆಡಳಿತ ಕೇಂದ್ರವಾಗಿದ್ದ ಗಂಗಾವತಿಯಲ್ಲಿ ಇಂದಿನ ನ್ಯಾಯಾಲಯ ಕಟ್ಟಡ, ಹಳೇ ತಹಶೀಲ್ ಕಾರ್ಯಾಲಯ, ಅಂಚೆ ಕಚೇರಿ ಪ್ರವಾಸಿ ಮಂದಿರ ಮತ್ತು ಕೆಲವು ಶಾಲಾ ಕಟ್ಟಡಗಳು ನಿಜಾಮರ ಕಾಲದ ನಿರ್ಮಾಣಗಳಾಗಿವೆ. ಅದೇ ರೀತಿ ತಾಲೂಕಿನ ಸಂಗಾಪುರ, ಬೂದಗುಂಪ(ತಹನಿಯಮದರಸಾ), ಮುಕ್ಕುಂಪಿ ,ಆಗೋಲಿ, ಕನಕಗಿರಿ, ಸಿದ್ದಾಪುರ ಗಳಲ್ಲಿ ಶಾಲಾ ಕಟ್ಟಡಗಳು ,ಬಾವಿಗಳು ನಿಜಾಮ ಅಧಿಕಾರಿ ಲಿಯೋನಾರ್ಡ್ ಯನ್ ರಿಂದ ನಿರ್ಮಿಸಿದವು ಕಂಡುಬರುತ್ತವೆ. ಅರಸ ಜಗದೇಕಲಲ್ಲ ನೊಳಂಬ ಪರ್ಮಾವಡಿ ಉಯಾದಿತ್ಯನು (ಕ್ರಿ. ಶ.೧೦೭೧-೧೦೪೪) ಕಂಪನಿಯ ಜೊತೆಗೆ ವಿಪ್ರ ನಾರಾಯಣವನ್ನು (ಗಂಗಾವತಿ ತಾಬಳಿ ತುಂಗಭದ್ರಾ ನದಿ ತೀರದಲ್ಲಿರುವ ಇಂದಿನ ವಿಪ್ರ ಎಂಬ ಹಾಳು ಗ್ರಾಮ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಗಂಗಾವತಿ ಆಳುತ್ತಾನೆ. ವಿಪ್ರದ ಶಿವದೇವಾಲಯ, ಬನಶಂಕರಿ ದೇವಾಲಯ, ದೇವಘಾಟದ ಸೋಮೇಶ್ವರ ದೇವಾಲಯ, ಗಜಾನನ ಹಾಗೂ ಇತರ ದೇವಾಲಯಗಳು ವಿರುಪಾಪುರ ಆಂಜನೇಯ ಮತ್ತು ರಾಮಲಿಂಗೇಶ್ವರ ದೇವಾಲಯಗಳು ನೊಳಂಬ ಪಲ್ಲವರ ನಿರ್ಮಾಣವಾಗಿವೆ. ಇವೆಲ್ಲವೂ ಅವರ ಸಾರ್ವಭೌಮರಾದ ಕಲ್ಯಾಣ ಚಾಲುಕ್ಯರ ವಾಸ್ತು ಶೈಲಿಯಲ್ಲಿದೆ. ವಿಪ್ರದ ಶಿವ ದೇವಾಲಯ, ರಾಮಲಿಂಗೇಶ್ವರ ದೇವಾಲಯ ವಾಸ್ತುಶಿಲ್ಪದ ವಿಶೇಷತೆಯಿಂದ ಗಮನಸೆಳೆಯುತ್ತದೆ. ಗರ್ಭಗೃಹ ಮಾತ್ರ ಉಳಿದಿರುವ ರಾಮಲಿಂಗೇಶ್ವರ ದೇವಾಲಯ ವಾಸ್ತುಶಿಲ್ಪ ವಿಶೇಷತೆಯಿಂದ ಗಮನಸೆಳೆಯುತ್ತದೆ. ಕ್ರಿ ಶ.೧೦೫೬ ಕಾಲದ ಇವರ ಎರಡು ಶಿಲಾಶಾಸನಗಳಿವೆ.

ಹೈದರಾಬಾದ ವಿಮೋಚನಾ ಚಳವಳಿ

ಭಾರತಕ್ಕೆ ಬಂದ ಸ್ವಾತಂತ್ರ್ಯ ನಿಜಾಮನಿಂದ ತಮಗೂ ಮುಕ್ತಿಯನ್ನು ದೊರಕಿಸಿ ಕೊಡುತ್ತದೆಂದು ಹೈದರಾಬಾದ ರಾಜ್ಯದ ಜನತೆ ಭಾವಿಸಿದ್ದರು. ಆದರೆ ನಿಜಾಮನು ಭಾರತ ಒಕ್ಕೂಟದಲ್ಲಿ ಕೂಡದೆ ಸ್ವತಂತ್ರವಾಗಿ ಉಳಿಯುವುದಾಗಿ ಘೋಷಿಸಿದಾಗ ಹತಾಶೆಗೊಳಗಾದ ಜನತೆ ಮತ್ತೊಂದು ಸ್ವಾತಂತ್ರ್ಯಕ್ಕಾಗಿ ಚಳುವಳಿ ಪ್ರಾರಂಭಿಸಿದರು. ಗಂಗಾವತಿ ತಾಲೂಕಿನಲ್ಲಿ ಆರ್.ಎಂ ಗಂಗಾವತಿ, ಕೇಶವರಾವ್ ದೇಶಪಾಂಡೆ, ಕಿಶನ್ ರಾವ್ ದೇಸಾಯಿ, ಗುಂಜಳ್ಳಿ ಬಸಣ್ಣ, ಕಾರಟಗಿ ರುದ್ರಪ್ಪ, ಕನಕಗಿರಿ ಹಂಪಯ್ಯ, ನಂದಿಹಳ್ಳಿ ರುದ್ರಗೌಡ, ಜಯತೀರ್ಥ ರಾಜಪುರೋಹಿತ ,ಬಸಪ್ಪ ಆನೆಗುಮದಿ,ಬಿ ಮರಿಯಪ್ಪ ರಾಮಭಟ್ಟ ಜೋಶಿ, ಜಿ ಮಹಾದೇವಪ್ಪ, ರಾಯಚೂರು ಶಿವಯ್ಯ,ಅಯೋಧ್ಯಾ ರಾಮಾಚಾರ್ಯ ಮುಂತಾದವರು ಚಳವಳಿಯನ್ನು ತಾಲೂಕಿನಾದ್ಯಂತ ಸಂಘಟಿಸಿದರು.

೧೯೪೭ ಸೆಪ್ಟೆಂಬರ್ ೨ ರಂದು ರಾಷ್ಟ್ರಧ್ವಜ ದಿನಾಚರಣೆಯನ್ನು ಅಕ್ಟೋಬರ್ ೨ ರಂದು ನಿಜಾಮನ ದಬ್ಬಾಳಿಕೆಗೆ ವಿರೋಧಿಸಿ ದಿನಾಚರಣೆಗಳನ್ನು ಆಚರಿಸಲಾಯಿತು. ವಿದ್ಯಾರ್ಥಿಗಳು ಕೂಡ ಶಾಲೆಗಳನ್ನು ಬಹಿಷ್ಕರಿಸಿ ಹೋರಾಟದಲ್ಲಿ ಧುಮುಕಿದರು. ಜನತೆಯ ಹೋರಾಟದ ಫಲವಾಗಿ ಭಾರತ ಸರ್ಕಾರ ಹೈದರಾಬಾದ್ ವಿರುದ್ಧ ಪೊಲೀಸ್ ಕಾರ್ಯಾಚರಣೆಯನ್ನು ನಡೆಸಿತು. ಪರಿಣಾಮವಾಗಿ ೧೯೪೮ ಸೆಪ್ಟೆಂಬರ್ ೧೭ ರಂದು ಹೈದರಾಬಾದ್ ರಾಜ್ಯ ನಿಜಾಮನಿಂದ ವಿಮೋಚನೆ ಪಡೆಯಿತು.

ಪ್ರೇರಕ ಅಂಶಗಳು

ಸ್ವತಂತ್ರ ಪೂರ್ವದಲ್ಲಿ ಗಂಗಾವತಿ ಭಾಗದಲ್ಲಿ ರಾಜಕೀಯ ಪ್ರಜ್ಞೆ ಮತ್ತು ದೇಶಭಕ್ತಿ ಮೂಡಲು ಹಲವು ಸಂಗತಿಗಳು ಪ್ರೇರಕವಾದವು. ಮುಖ್ಯವಾಗಿ ಹೈದರಾಬಾದ ರಾಜ್ಯದ ಕಾಂಗ್ರೆಸ್ ಧುರೀಣರಾದ ಜನಾರ್ಧನರಾವ್ ದೇಸಾಯಿ, ರಾಘವೇಂದ್ರಾಚಾರ ಜಾಗಿರ್ದಾರ್(ಸಣ್ಣಾಚಾರಿ), ಕುಕುನೂರ, ವಿದ್ಯಾನಂದ ಗುರುಕುಲದ ಸಂಸ್ಥಾಪಕರಾದ ರಾಘವೇಂದ್ರರಾವ್ ದೇಸಾಯಿ ಮುಂತಾದವರು ಗಂಗಾವತಿಗೆ ಆಗಾಗ ಭೇಟಿ ನೀಡಿ ಇಲ್ಲಿನ ಕಾಂಗ್ರೆಸ್ ಕಾರ್ಯಕರ್ತರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ರಾಯರ ಓಣಿಯಲ್ಲಿ ನಡೆಯುತ್ತಿದ್ದ ಗಜಾನನ ಉತ್ಸವವು ಚಳವಳಿಗಾರರಿಗೆ ಒಂದು ಒಳ್ಳೆಯ ವೇದಿಕೆಯಾಗಿತ್ತು.

ಈ ಉತ್ಸವಕ್ಕೆ ಪ್ರಮುಖ ರಾಜಕೀಯ ಧುರೀಣರನ್ನು ಆಹ್ವಾನಿಸಲಾಗುತ್ತಿತ್ತು. ವಿಶೇಷವಾಗಿ ಕಸಬೆ ಪಾಂಡುರಂಗರಾವ್, ಕೀರ್ತನ ಕೇಸರಿ ಜಯರಾಮಾಚಾರ ಕೊಪ್ಪಳ ,ಕೊತ್ಲಾಚಾರ ಮುಂತಾದವರು ಆಹ್ವಾನಿತರಾಗಿದ್ದು, ಇವರು ನೀಡಿದ ಉಪನ್ಯಾಸಗಳು ಸ್ಥಳೀಯರಲ್ಲಿ ರಾಷ್ಟ್ರಪ್ರೇಮ ಹಾಗೂ ರಾಜಕೀಯ ಪ್ರಜ್ಞೆಯನ್ನು ಮೂಡಿಸಲು ಪ್ರೇರಕವಾದ ಎಂದು ಹೇಳಬಹುದು

ಪ್ರಮುಖ ಚಳುವಳಿಕಾರರು

ಗಂಗಾವತಿ ತಾಲೂಕಿನಲ್ಲಿ ಅನೇಕ ಚಳುವಳಿಗಾರರು ಇದ್ದಾರೆ. ಅವರಲ್ಲಿ ಪ್ರಮುಖರಾದವರೆಂದರೆ ಸರ್ವಶ್ರೀ ಆರ್.ಎಂ. ಗಂಗಾವತಿ, ಕೇಶವ ರಾವ್ ದೇಶಪಾಂಡೆ, ಸುಗಂಧಿ ಪಂಪಣ್ಣ ಮಾಸ್ತರ್, ಎಸ್. ಗುರುರಾಜರಾವ್ ಹೊಸಳ್ಳಿ, ಮುಕ್ಕುಂದಿ ವೆಂಕೋಬ ಚಾರ, ಕಾರಟಗಿ ರುದ್ರಪ್ಪ ,ಅಕ್ಬರ್ ಪ್ರಹ್ಲಾದರಾವ್, ಕನಕಗಿರಿ ಹಂಪಯ್ಯ ರುದ್ರಗೌಡ ,ತಿರುಮಲರಾವ್ ಅಕ್ಬರ್, ಹೊನ್ನಳ್ಳಿ ,ಲಕ್ಷ್ಮಣರಾವ್, ಅಡವಿರಾವ್.ಜಂತಕಲ್ ಡಾ ರಾಮರಾವ್, ಜಯತೀರ್ಥ ಪುರೋಹಿತ.ಜೈ ವೆಂಕೋಬ ಚಾರ .ಬಿ.ಎನ್. ಅಂಗಡಿ ಭೋಗೇಶ್ವರ್ ಅಕಬರ್, ಗುರುರಾಜ ನವಲಿ ,ಕೆಂಪಯ್ಯ ,ಲಿಂಗಯ್ಯ, ಕೇಶವರಾದ ಶ್ರೀಖಂಡೆ, ಯರಡೋಣಿ ವೆಂಕೋಬಾಚಾರ, ಒಡೆಯರ ಕನಕಪ್ಪಾಚಾರ, ಭೀಮಸೇನರಾವ್ ಬೆಣಕಲ್, ಬಸಪ್ಪ ಆನೆಗುಂದಿ, ಈರಣ್ಣ ಆನೆಗುಂದಿ, ಮಾಧವಾಚಾರ

ಜಾಗಿರದಾರ,ಮುಸ್ಟೂರು ಶ್ರೀನಿವಾಸರಾವ್, ರಾಮಭಟ್ಟ ಜೋಶಿ, ರಾಯಚೂರು ಶಿವಯ್ಯ, ಸುಗಂಧಿ ಅನಂತಪ್ಪ,ಎಂ. ಅಮರಪ್ಪ,ಬಿ. ಮರಿಯಪ್ಪ, ಜಿ ಮಹಾದೇವಪ್ಪ, ಬಾವಿಕಟ್ಟಿ ಜಗದೀಶಪ್ಪ ಮತ್ತು ಇತರರು ಪ್ರಮುಖರಾಗಿದ್ದಾರೆ.

ಗುಡಿ ಕೈಗಾರಿಕೆ ಸ್ಥಾಪನೆ

ಸ್ವದೇಶಿ ಚಳುವಳಿಯ ಅಂಗವಾಗಿ ಸ್ಥಳೀಯ ಕಾರ್ಯಕರ್ತರು ಗಂಗಾವತಿಯಲ್ಲಿ ಕೆಲವು ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಿ, ದೇಶಿ ವಸ್ತುಗಳನ್ನು ಉತ್ಪಾದಿಸಿ ಮಾರಾಟ ಮಾಡುತ್ತಾರೆ. ಕಿಶನ್ ರಾವ್ ದೇಸಾಯಿ ಅವರ ನೇತೃತ್ವದಲ್ಲಿ ಕಾಗದ ತಯಾರಿಕೆ ನಡೆದ ಬಗ್ಗೆ ತಿಳಿಯುತ್ತದೆ. ಗುರುರಾಜ್ ಕೋಟೆಯವರ ನೇತೃತ್ವದಲ್ಲಿ ಚಾಪೆ ತಯಾರಿಕೆ ಮತ್ತು ಶಿಲ್ಪಗಳ ಕೆತ್ತನೆ ಕಾರ್ಯ ನಡೆಸಲಾಯಿತು. ರಾಘವೇಂದ್ರಾಚಾರ್ಯ ಅಯೋಧ್ಯ ಹಾಗೂ ಕೃಷ್ಣ ಚಾರ ಜೋಶಿಯವರು ಆದಿ ಬಟ್ಟೆಗಳ ತಯಾರಿಕೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಒಕ್ಕೂಟ ಸೇರಿದ ದಿನಾಚರಣೆ

ಗಂಗಾವತಿಯ ಎಲ್ಲಾ ರಾಜಕೀಯ ಚಟುವಟಿಕೆಗಳಲ್ಲಿ ಅಗ್ರ ಪಾತ್ರವಹಿಸಿದ್ದ ಆರ್.ಎಂ.ಗಂಗಾವತಿಯವರು ಹಾಗೂ ಗಣ್ಯ ವಕೀಲರಾಗಿದ್ದ ಕೇಶವರಾವ್ ಶ್ರೀಖಂಡೆಯವರು ಅಗಸ್ಟ ೭,೧೯೪೭ ರಂದು ಗಂಗಾವತಿಯಲ್ಲಿ ಒಕ್ಕೂಟ ಸೇರಿರಿ ದಿನಾಚರಣೆಯನ್ನು ಆಚರಿಸಿದರು. ಅದರ ನಿಮಿತ್ತ ಹರತಾಳ, ಸತ್ಯಾಗ್ರಹ ನಡೆಸಿದ ಅವರನ್ನು ಬಂಧಿಸಿ ಸೆರೆಮನೆಗೆ ಕಳುಹಿಸಲಾಯಿತು.

ಸ್ವಾತಂತ್ರ್ಯ ದಿನಾಚರಣೆ

೧೯೪೭ ಆಗಸ್ಟ ೧೫ ರಂದು ಭಾರತಕ್ಕೆ ಸ್ವಾತಂತ್ರ್ಯ ನಿಜಾಮನು ತನ್ನ ರಾಜ್ಯದಲ್ಲಿ ಸ್ವಾತಂತ್ರೋತ್ಸವ ಆಚರಣೆಯನ್ನು ನಿಷೇಧಿಸಿದ್ದನು. ಆದರೂ ಎರಡೋಣಿ ವೆಂಕೋಬ ಚಾರ್ಯರು ಮರಳಿ ಗ್ರಾಮದಲ್ಲೂ ಮತ್ತು ಬೆಣಕಲ್ ಭೀಮಸೇನರಾವರವರ ಕಾರಟಗಿ ಗ್ರಾಮದಲ್ಲೂ ಸ್ವಾತಂತ್ರ್ಯ ದಿನಾಚರಣೆಯನ್ನು ಸತ್ಯಾಗ್ರಹ ಮಾಡಿದರು ಅವರನ್ನು ಬಂಧಿಸಲಾಯಿತು. ಭೀಮಸೇನ್ ರಾವರನ್ನು ಗುಲ್ಬರ್ಗ ಜೈಲಿಗೆ ಕಳುಹಿಸಲಾಯಿತು, ಜೈಲಿನಲ್ಲಿ ನಡೆದ ಪೋಲೀಸರ ಅತ್ಯಾಚಾರಕ್ಕೆ ಇವರು ಬಲಿಯಾದರು.

ರಾಷ್ಟ್ರಧ್ವಜ ದಿನಾಚರಣೆ

೧೯೪೭ ಸಪ್ಟೆಂಬರ್ ೨ ರಂದು ಗಂಗಾವತಿಯಲ್ಲಿ ರಾಷ್ಟ್ರಧ್ವಜ ದಿನಾಚರಣೆಯನ್ನು ನಡೆಸಲಾಯಿತು. ದಿನಾಂಕ ೨೧ ರಂದು ಉತ್ಸಾಹಿ ಬಾಲಕ ಇಂಟರ್ಮೀಡಿಯೇಟ್ ವಿದ್ಯಾರ್ಥಿ

ವೆಂಕಣ್ಣ ಉಜ್ವಲ್ ಭಾಷಣ ಮಾಡಿದನು. ಪೋಲಿಸ್ ಇನ್ಸೆಕ್ಟರ್ ಈತನನ್ನು ಸಹಿತ ಜಿ. ವೆಂಕೋಬಚಾರ್ಯ ಮತ್ತು ಪ್ರಹ್ಲಾದರಾವ್ ಅಕ್ಬರನನ್ನು ಕೂಡ ಬಂಧಿಸಿ ಕರೆದೊಯ್ದರು.

ದಬ್ಬಾಳಿಕೆ ವಿರೋಧಿ ದಿನಾಚರಣೆ

೧೯೪೭ ಅಕ್ಟೋಬರ್ ೨ ರಂದು ಗಂಗಾವತಿಯಲ್ಲಿ ನಿಜಾಮನ ದಬ್ಬಾಳಿಕೆ ವಿರೋಧಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಾದ ಎಂ.ವೆಂಕನಗೌಡ, ಎಂ. ರುದ್ರಗೌಡ ನಂದಿಹಳ್ಳಿ, ಎನ್. ನರಸಿಂಹಾಚಾರ್ಯ,ಎನ್. ಅನಂತರಾವ್ ಮತ್ತು ಟಿ. ನಾರಾಯಣರಾವ್ ರವರು ಸತ್ಯಾಗ್ರಹ ಸೆರೆಮನೆ ಸೇರಿದರು.

ಚಳುವಳಿಯಲ್ಲಿ ವಿದ್ಯಾರ್ಥಿಗಳು

ವಿಮೋಚನಾ ಚಳುವಳಿಯಲ್ಲಿ ಗಂಗಾವತಿಯ ವಿದ್ಯಾರ್ಥಿಗಳು ಅತ್ಯಂತ ಆಸಕ್ತಿಯಿಂದ ಭಾಗವಹಿಸಿದ್ದಾರೆ. ರಾಯಚೂರಿನ ವಿದ್ಯಾರ್ಥಿ ಮುಖಂಡರಾದ ಕೆ.ಮಹಾಂತಯ್ಯ ಸ್ವಾಮಿ ಹಿರೇಮಠ ಹಾಗೂ ನೀಲಕಂಠಯ್ಯ ಗೊರೇಬಾಳ ಇವರುಗಳು ಗಂಗಾವತಿಗೆ ಬಂದು ವಿದ್ಯಾರ್ಥಿಗಳನ್ನು ಸಂಘಟಿಸಿದರು. ಈಗಿನ ಸರಕಾರಿ ಜೂನಿಯರ್ ಕಾಲೇಜು ಹಿಂದಿನ ಗುಡ್ಡದಲ್ಲಿ ಒಂದು ಗುಪ್ತ ಸಭೆಯಲ್ಲಿ ಕರೆದು ಚಳುವಳಿಯಲ್ಲಿ ಗಂಗಾವತಿಯ ವಿದ್ಯಾರ್ಥಿಗಳು ಭಾಗವಹಿಸುವಂತೆ ಪ್ರೇರೇಪಿಸಿದರು. ಹೈದರಾಬಾದ್ ವಿಮೋಚನೆಯಾಗುವವರೆಗೂ ಶಾಲೆಗಳನ್ನು ವಹಿಸಬೇಕೆಂದು ನಿರ್ಣಯಿಸಲಾಯಿತು. ಅದರಂತೆ ಮರುದಿನ ಎಲ್ಲಾ ವಿದ್ಯಾರ್ಥಿಗಳು ಶಾಲೆಗೆ ಹೋಗಿ ಪ್ರಾರ್ಥನೆಯನ್ನು ಮಾಡಿದ ನಂತರ ಹೈದರಾಬಾದ್ ವಿಮೋಚನೆಯಾಗುವವರೆಗೂ ಶಾಲೆಗಳನ್ನು ಬಹಿಷ್ಕರಿಸಬೇಕೆಂದು ನಿರ್ಣಯಿಸಲಾಯಿತು. ಅದರಂತೆ ಮರುದಿನ ಎಲ್ಲಾ ವಿದ್ಯಾರ್ಥಿಗಳು ಶಾಲೆಗೆ ಪ್ರಾರ್ಥನೆಯನ್ನು ಮಾಡಿದ ನಂತರ ಹೈದರಾಬಾದ್ ವಿಮೋಚನಾ ಚಳುವಳಿಯ ಜಿಂದಾಬಾದ್ ಎಂದು ಕೂಗುತ್ತಾ ಶಾಲೆಗಳನ್ನು ಬಹಿಷ್ಕರಿಸಿ ಹೊರ ಬಂದರು.

ಅತಿ ಚಿಕ್ಕ ವಯಸ್ಸಿನಲ್ಲೇ ಚಳುವಳಿಗೆ ಧುಮುಕಿದ ಬಾಲಕ ಬಸಪ್ಪ ಎನ್.ಅಂಗಡಿಯವರು ಬರಗೂರಿನಲ್ಲಿ ಮತ್ತು ನಂತರ ಡಾ. ರಾಮರಾಯ ರೊಂದಿಗೆ ಕಾರಟಗಿಯಲ್ಲಿ ಸತ್ಯಾಗ್ರಹ ಮಾಡಿದಾಗ ನಿಜಾಂ ಪೊಲೀಸರು ಇವರನ್ನು ಗಂಗಾವತಿ ಜೈಲಿನಲ್ಲಿ ಮೂರು ತಿಂಗಳು ರಿಮ್ಯಾಂಡ್ ನಲ್ಲಿಟ್ಟರು. ನಂತರ ಇವರನ್ನು ರಾಯಚೂರು ಜೈಲಿಗೆ ಸ್ಥಳಾಂತರಿಸಲಾಯಿತು. ಇತರ ವಿದ್ಯಾರ್ಥಿಗಳಾಗಿ ಎಣ್ಣೆ ವೆಂಕಣ್ಣ ,ರುದ್ರಗೌಡ ಕಾರಟಗಿ, ಭೀಮಸೇನರಾವ್ ಗೋಗಿ, ವೆಂಕಟಾಚಾರ್ಯ ನಾಗರಹಳ್ಳಿ ,ಹೇರೂರ ರಾಮರಾವ್, ನರಸಿಂಹಾಚಾರ ನವಲಿ ,ನವಲಿ ಗುರುರಾಜ್, ಅದಬರ ನಾಗೇಶರಾವ್, ಪ್ರಹ್ಲಾದರಾವ್ ಅದಬರ, ಕಲ್ಯಾಣ್ ರಾವ್, ಕುಲಕರ್ಣಿ ರಾಧಾ, ಕಿಶನ್ ಸಿಂಗ್ ಸುಗಂಧಿ

ಪಂಪಣ್ಣ, ವೆಂಕನಗೌಡ ತಾವರಗೇರಿ, ಶ್ರೀ ರಾಮಾಚಾರ್ಯ ಅಯೋಧ್ಯೆ ಮುಂತಾದವರು ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದರು.

ಭೂಗತ ಹೋರಾಟ

ನಿಜಾಂ ಸರಕಾರದ ದಬ್ಬಾಳಿಕೆಯ ವಿರುದ್ಧ ಗಂಗಾವತಿಯಲ್ಲಿ ರಾಮಭಟ್ಟ ಜೋಶಿಯವರ ನೇತೃತ್ವದಲ್ಲಿ ಭೂಗತ ಚಳವಳಿ ಪ್ರಾರಂಭವಾಯಿತು. ಈ ಚಳವಳಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರಾದ ಬಿ. ಮರಿಯಪ್ಪ ,ಜಿ .ಮಹಾದೇವಪ್ಪ ,ಕೋಪ್ರೇಶಾಚಾರ ರಾಜಪುರೋಹಿ, ರಾಚಪ್ಪ ,ಅರಳಿ ,ಕೋದಂಡರಾಮಪ್ಪ, ರಾಮಾಚಾರ, ವಿಜಯೇಂದ್ರ ಚಾರ, ಹನುಮಂತಪ್ಪ, ಬಿ ಜಗದೀಶಪ್ಪ ಗುಂಡೂರ, ತಿರುಮಲರಾವ್, ಕೃಷ್ಣಚಾರ ಜೋಶಿ, ಆನೆಗೊಂದಿಯ ಸದಾಶಿವ ರಾಜ, ರಾಮರಾಜು ಜಾಗಿರದಾರ, ಶಿವಯ್ಯ ಶೆಟ್ಟಿ ,ಹಂಪಯ್ಯ ಕನಕಗಿರಿ ಮತ್ತಿತರು ಭೂಗತ ಚಳುವಳಿಯಲ್ಲಿ ತೊಡಗಿಕೊಂಡರು. ಇವರು ಗಂಗಾವತಿ ತಾಲೂಕಿನ ಹಳ್ಳಿಗಳಿಗೆ ಸಂಚರಿಸಿ ನಿಜಾಮ ಸರಕಾರದ ದಬ್ಬಾಳಿಕೆಯ ವಿರುದ್ಧ ಜನರಿಗೆ ಎಚ್ಚರಿಸಿದರು.

ಸರಕಾರಕ್ಕೆ ಮಾಲ ಗುಜಾರಿ ,ಲೇವಿ ಹಾಗೂ ಇತರ ತೆರಿಗೆಗಳನ್ನು ಕಟ್ಟ ಕೂಡದೆಂದು ತಿಳಿಸಲಾಯಿತು. ಪರಿಣಾಮವಾಗಿ ಅನೇಕ ಹಳ್ಳಿಗಳಲ್ಲಿ ಚಳುವಳಿಯ ತೀವ್ರಗೊಂಡಿತು. ಅವುಗಳಲ್ಲಿ ನವಲಿ ಗ್ರಾಮದ ಚಳುವಳಿ ಗಮನಾರ್ಹವಾಗಿದೆ.

ನವಲಿ ಘಟನೆ

ಕಾರಟಗಿ ತಾಲೂಕಿನ ನವಲಿ ಗ್ರಾಮವು ನಿಜಾಮ ಸರಕಾರಕ್ಕೆ ಲೇವಿ ಹಾಗೂ ಮಾಲ ಗುಜಾರಿ ಕೊಡುವುದಿಲ್ಲವೆಂದು ಬಂಡೆದ್ದರು. ಇದರ ಮುಖಂಡತ್ವವನ್ನು ವಿರುಪಾಕ್ಷಗೌಡ ಚಳ್ಳೂರು, ರಾಘವೇಂದ್ರ ರಾವ್ ರವರ ಮೇಲೆ ಕೇಸ್ ಹಾಕಲಾಯಿತು, ಉಳಿದವರು ಭೂಗತರಾದರು. ಆಗ ಪೋಲೀಸರು ಅವರ ಮೇಲೆ ಗೋಲಿಬಾರನ್ನು ಮಾಡಿದರು. ಗೋಲಿಬಾರ್ ನಲ್ಲಿ ರೈತ ಮುಖಂಡ ಮಾಕಣ್ಣ ಕಂಬ್ಳಿ ಗುಂಡು ಬಡಿದು ಮೃತಪಟ್ಟನು, ಇನ್ನೊಬ್ಬ ರೈತ ದೀಮ್ಲಮ್ಯೊಪ್ಪಣಿವಗೂ ಗುಂಡಿನ ಏಟು ತಗುಲಿ ಆಸ್ಪತ್ರೆಗೆ ಒಯ್ಯುವಾಗ ನಡುದಾರಿಯಲ್ಲೆ ಮರಣ ಹೊಂದಿದನೆಂದು ಹೇಳಲಾಗುತ್ತಿದೆ. ಮಾಕಣ್ಣಾ ಕಂಬಳಿ ಮೃತಪಟ್ಟ ಸ್ಥಳದಲ್ಲಿ ಕಟ್ಟೆಯನ್ನು ಕಟ್ಟಿದ್ದು ಅಲ್ಲಿ ಪ್ರತಿವರ್ಷ ಧ್ವಜಾರೋಹಣ ಮಾಡಲಾಗುತ್ತಿದೆ.

ರಜಾಕಾರರು ಮತ್ತು ಚಳವಳಿಗಾರರು

ನಿಜಾಮ ಸತ್ತೆಯನ್ನು ಉಳಿಸಿಕೊಳ್ಳುವುದಕ್ಕಾಗಿಯೇ ಹುಟ್ಟಿದ ರಾಜಕಾರ ಸಂಘಟನೆ ಚಳುವಳಿಗಾರರ ವಿರುದ್ಧ ಉಗ್ರ ಕ್ರಮಗಳನ್ನು ತೆಗೆದುಕೊಳ್ಳುತ್ತಿತ್ತು. ಕಾಂಗ್ರೆಸ್ಸಿನ ಮನೆಗೆ ಹೋಗಿ

ಹಿಂಸೆ ಕೊಡುವುದು, ಬೆದರಿಕೆ ಹಾಕುವುದು ಮಾಡುತ್ತಿದ್ದರು. ಅವರ ಕಿರುಕುಳವನ್ನು ತಾಳಲಾರದ ಅನೇಕ ಜನರು ತಮ್ಮ ಮನೆಗಳನ್ನು ತೊರೆದು ನೆರೆಯ ಭಾರತ ಸರಕಾರದ ಕಂಪ್ಲಿ ,ಕಮಲಾಪುರ ಮತ್ತು ಹೊಸಪೇಟೆಗೆ ವಲಸೆ ಹೋಗಿದ್ದರು. ಕಾಂಗ್ರೆಸ್ಸಿಗರಾದ ಅಯೋಧ್ಯಾ ರಾಘವೇಂದ್ರಾಚಾರದ ಹೊಲದಲ್ಲಿನ ಕಬ್ಬು ಮತ್ತು ನೆಲ್ಲನ್ನು ಕಟಾಕಾರರು ಸಂಪೂರ್ಣ ದೋಚಿದರು. ರಾಮಭಟ್ಟ ಜೋಶಿಯವರ ಪತ್ನಿ ಪದ್ಮಾವತಿ ಬಾಯಿ ಯನ್ನು ಕೊಪ್ಪಳದ ಜೈಲಿನಲ್ಲಿ ಬಂಧಿ ನೀಡಲಾಯಿತು. ಆನೆಗುಂದಿಯಲ್ಲಿ ನಡುಗಾಲ ಸರಕಾರದ ಮಂತ್ರಿಗಳ ಹಾಗೂ ಸ್ಥಾನಿಕ ನಾಜರ್ ರ ಹೆಸರುಗಳನ್ನು ಹಾಳೆಯ ಮೇಲೆ ಬರೆದು ಕತ್ತಿಗಳಿಗೆ ಅಚಿಟಸಿದ್ದರಿಂದ ಕುಪಿತಗೊಂಡ ರಾಜಾಕಾತರು ಅಲ್ಲಿಯ ಚಳುವಳಿಗಾರರಾದ ಅನಂತಕೃಷ್ಣರ ಮನೆಯನ್ನು ಪೂರ್ತಿ ಲೂಟಿ ಮಾಡಿದರು.

ನಂತರ ಅವರನ್ನು ಗಂಗಾವತಿ, ರಾಯಚೂರು, ಗುಲ್ಬರ್ಗಾ ಜೈಲಿನಲ್ಲಿ ಬಂಧನದಲ್ಲಿರಿಸಲಾಗಿತ್ತು. ಸರಿ ಹೋದಾಗ ಕೆಲವು ಮಹಿಳೆಯರು ತಾವು ಸಂತೆಯಲ್ಲಿ ತಂದಿದ್ದ ಈಳಿಗಗಳನ್ನು ಹೊರತೆಗೆದು ರಜಾಕಾರರ ಮೇಲೆ ಸಲ ಗುನ್ನಾಳಿನ ಪುರುಷೋತ್ತಮರಾಯರ ಹೊರಜಗುಲಿಯಲ್ಲಿ ಮಲಗಿದ್ದಾರ ಕನಕಗಿರಿಯ ಜಯತೀರ್ಥ ರಾಜಪುರೋಹಿತರು ಬಡಿಗೆಯಿಂದ ಅವನ ತಲೆ ಒಡೆದು ಪರಾರಿಯಾಗುತ್ತಾರೆ. ಇನ್ನೊಮ್ಮೆ ಗೌರಿಪುರ ದಲ್ಲಿ ಭಾಷಣ ಮಾಡುತ್ತಿದ್ದ ಅವರನ್ನು ಕುಷ್ಟಗಿ ಪೊಲೀಸರು ಎನ್ನುತ್ತಾರೆ, ಆಗ ಉಪ್ಪಲದಿನ್ನಿ ಯ ಮಡಿವಾಳಪ್ಪ ನೆಂಬ ರೈತನು ರಾಜ ಪುರೋಹಿತರನ್ನು ತನ್ನ ಮನೆಯಲ್ಲಿ ಮಲಗಿಸಿಕೊಂಡು ಪೊಲೀಸರಿಗೆ ತನ್ನ ಮಗನೆಂದು ಸುಳ್ಳು ಹೇಳಿ ಪಾರು ಮಾಡುತ್ತಾನೆ.

ಶಿಬಿರಗಳು

ರಜಾಕಾರರ ದುಷ್ಕೃತ್ಯಗಳು ನಡೆಯದಂತೆ ನೋಡಿಕೊಳ್ಳಲು ಹಾಗೂ ನಿಜಾಮ ಸರಕಾರದ ವಿರುದ್ಧ ಪ್ರತಿರೋಧಕ ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ನಿಜಾಮ ಕರ್ನಾಟಕ ಸರಹದ್ದಿನ ಅನೇಕ ಸ್ಥಳಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಶಿಬಿರಗಳನ್ನು ಪ್ರಾರಂಭಿಸಲಾಯಿತು. ವಿಶೇಷವಾಗಿ ಗಂಗಾವತಿಯ ಚಳುವಳಿಗಾರರು ಸಿರುಗುಪ್ಪ ಮತ್ತು ಕಂಪ್ಲಿಗಳಲ್ಲಿ ಶಿಬಿರಗಳನ್ನು ತೆರೆದರು. ಸಿರುಗುಪ್ಪ ಶಿಬಿರದಲ್ಲಿ ಅಕಬರ್ ತಿರುಮಲರಾವ್ ರವರು ಮುಖಂಡರಾಗಿದ್ದು, ಬಿ .ಮರಿಯಪ್ಪನವರು ಶಿಬಿರಾರ್ಥಿಪತಿ ಗಳಾಗಿದ್ದರು. ಬಿ.ಎನ್.ಅಂಗಡಿ, ಭೀಮಸೇನ ರಾವ್ ಜೋಶಿ,ಬೋಗೇಶ್ ರಾವ್ ಅಕಬರ, ರಾಯಚೂರು ಶಿವಯ್ಯ ಮುಂತಾದವರು ಶಿಬಿರದ ಸದಸ್ಯರಾಗಿದ್ದರು. ಕಂಪ್ಲಿ ಶಿಬಿರದಲ್ಲಿ ಕೇಶವರಾವ್ ಶ್ರೀಖಂಡೆ, ಗೌಳಿ ಮಹಾದೇವಪ್ಪ, ಎಸ್. ಗುರುರಾಜರಾವ್, ಕಾರಟಗಿ ರುದ್ರಪ್ಪ ,ಕನಕಗಿರಿ ಹಂಪಯ್ಯ, ಆರ್.ಎಂ. ಗಂಗಾವತಿ.

ನಂದಿಹಳ್ಳಿ ರುದ್ರಗೌಡ, ಮುಕ್ಕುಂದಿ ವೆಂಕೋಬಾ ಚಾರ, ಅಕಬರ ಪ್ರಹ್ಲಾದರಾವ್, ರಾಮಭಟ್ಟ ಜೋಶಿ, ಎಸ್. ಪಂಪಣ್ಣ ರಾಮರಾವ್ ಮುಂತಾದವರಿದ್ದರು.

ರಾತ್ರೋರಾತ್ರಿ ನಿಜಾಮ ಇಲಾಖೆಯಿಂದ ಗುಪ್ತವಾಗಿ ರಜಾಕಾರರ ಚಟುವಟಿಕೆಗಳು ಬಗೆಗೆ ಸಮಾಚಾರ ಸಂಗ್ರಹಿಸುವುದು, ಕೇಂದ್ರ ಸರ್ಕಾರ ನಿಜಾಮ ರಾಜ್ಯದ ಮೇಲೆ ಹಾಕಿದ ಆರ್ಥಿಕ ದಿಗ್ಬಂಧನ ಯಶಸ್ವಿ ಮಾಡಲು ಜೀವನಾವಶ್ಯಕ ವಸ್ತುಗಳು ಅಲ್ಲಿಗೆ ಹೋಗದಂತೆ ನದಿಯಗುಂಟ ಪಹರೆ ಕಾಯುವುದು, ಜಾತ್ರೆ, ಸಂತೆ ಗ್ರಾಮಗಳಿಗೆ ತೆರಳಿ ಆರ್ಥಿಕ ದಿಗ್ಬಂಧನ ಯಶಸ್ವಿ ಮಾಡಲು ವಿನಂತಿಸಿಕೊಳ್ಳುವುದು ಮತ್ತು ಕೇಂದ್ರ ಸರ್ಕಾರದ ಸೈನ್ಯದೊಂದಿಗೆ ಸಹಕರಿಸುವುದು ಶಿಬಿರದ ಮುಖ್ಯ ಕಾರ್ಯ ಯೋಜನೆಗಳಾಗಿದ್ದವು. ನಂತರ ಹೊಸಪೇಟೆಯಲ್ಲಿಯೂ ಸಹ ಶಿಬಿರ ಪ್ರಾರಂಭವಾಯಿತು. ಅದರ ಮುಖಂಡತ್ವವನ್ನು ಕೋದಂಡ ರಾಮಪ್ಪನವರು ವಹಿಸಿದ್ದರು. ಅಲ್ಲಿ ಆನೆಗುಂದಿ ಸದಾಶಿವ ರಾಜು, ರಾಮರಾಜು ಜಾಗಿರದಾರ ಇನ್ನಿತರ ಕಾರ್ಯಕರ್ತರಿದ್ದರು. ಚಿಂತಾಮಣಿಯಲ್ಲಿ ಬೀಡುಬಿಟ್ಟಿದ್ದ ರಜಾಕಾರರ ಪಡೆಯ ಮೇಲೆ ಬಾಂಬ್ ಹಾಕುವ ಪ್ರಯತ್ನವನ್ನು ಆನೆಗುಂದಿಯ ವೆಂಕಟರಾಜು ರವರು ನಡೆಸಿದ್ದು ಸ್ಮರಣೀಯ, ಹಾಗೆಯೇ ಅಯೋಧ್ಯ ,ಆನೆಗುಂದಿ ಕರೋಡಗಿರಿ ಸುಡುವ ಪ್ರಯತ್ನಗಳು ನಡೆದಿವು.

ಜನತೆಯ ಹೋರಾಟದ ಫಲವಾಗಿ ಭಾರತ ಸರ್ಕಾರವು ಹೈದರಾಬಾದ್ ವಿರುದ್ಧ ಪೊಲೀಸ್ ಕಾರ್ಯಾಚರಣೆಯನ್ನು ನಡೆಸಿ,೧೯೪೮ ಸೆಪ್ಟೆಂಬರ್ ೧೭ ರಂದು ವಿಮೋಚನೆ ನಡೆಯಿತು.[೧೦]

ಕೊನೆಟಿಪ್ಪಣಿಗಳು

೧. ಕೋಲ್ಕಾರ್ ಶರಣಬಸಪ್ಪ., ೨೦೧೦, *ಗಂಗಾವತಿ ತಾಲೂಕು ದರ್ಶನ*, ಬಸವ ಪ್ರಕಾಶನ, ಕಲಬುರ್ಗಿ, ಪು. ಸಂ. – ೮
೨. ಅದೇ ಪು. ಸಂ. – ೧೦
೩. ಅದೇ ಪು. ಸಂ. – ೯
೪. ಅದೇ ಪು. ಸಂ. – ೧೫
೫. ಅದೇ ಪು. ಸಂ. – ೧೧
೬. ಅದೇ ಪು. ಸಂ. – ೧೩
೭. ಡಾ. ಆರ್. ಗೋಪಾಲ್ (ಸಂ)., ೨೦೧೦, ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಗಳ ನಿರ್ದೇಶನಾಲಯ ವಸ್ತು ಪ್ರದರ್ಶನ ಆವರಣ, ಮೈಸೂರು, ಪು. ಸಂ. ೩೨
೮. ಅದೇ ಪು. ಸಂ. – ೩೪
೯. ಕೋಲ್ಕಾರ್ ಶರಣಬಸಪ್ಪ., ೨೦೧೦, *ಗಂಗಾವತಿ ತಾಲೂಕು ದರ್ಶನ*, ಬಸವ ಪ್ರಕಾಶನ, ಕಲಬುರ್ಗಿ, ಪು. ಸಂ. – ೨೩
೧೦. ಅದೇ ಪು. ಸಂ. – ೨೯

* * *

ಅಧ್ಯಾಯ – ಮೂರು

ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ

ಅಧ್ಯಾಯ – ಮೂರು

ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ

೩.೧ ದೇವಾಲಯಗಳು

ಸಿದ್ದಾಪುರ ಗ್ರಾಮದಲ್ಲಿ ಹಲವಾರು ದೇವಾಲಯಗಳಿವೆ ಅವುಗಳಲ್ಲಿ ಕೃಷ್ಣಾಪುರದ ರಾಮಲಿಂಗೇಶ್ವರ, ಆಂಜನೇಯ, ಸಿದ್ದಾಪುರದ ವೆಂಕಟೇಶ್ವರ, ಈಶ್ವರ, ಶರಣಬಸವೇಶ್ವರ, ವೀರಭದ್ರೇಶ್ವರ, ಕಾಶಿವಿಶ್ವನಾಥ, ದುಗಲಮ್ಮ,ದುರ್ಗಾದೇವಿ ಮುಂತಾದವು ಪ್ರಮುಖವಾಗಿ ಕಾಣಬಹುದು.

೧. ರಾಮಲಿಂಗೇಶ್ವರ ದೇವಾಲಯ

ಗಂಗಾವತಿ ಮಾರ್ಗವಾಗಿ ಸಿದ್ದಾಪುರಕ್ಕೆ ಪ್ರವೇಶ ಮುನ್ನ ಕೃಷ್ಣಾಪುರ ಎಂಬ ಚಿಕ್ಕ ಊರು. ಅದರಲ್ಲಿ ಪ್ರಥಮವಾಗಿ ಎಡಭಾಗದಲ್ಲಿ ರಾಮಲಿಂಗೇಶ್ವರ ದೇವಸ್ಥಾನ ಕಂಡುಬರುತ್ತದೆ. ಇದು ಪೂರ್ವಾಭಿಮುಖವಾಗಿದ್ದು ವಿಜಯನಗರ ಕಾಲಮಾನಕ್ಕೆ ಸೇರಿದ್ದಾಗಿದೆ. ಇದು ಸುತ್ತಮುತ್ತಲು ಹೊಲಗದ್ದೆಗಳಿಂದ ಕೂಡಿದೆ.

ರಾಮಲಿಂಗೇಶ್ವರ ದೇವಾಲಯ ಅತಿ ತೀರಾ ಹಳೆಯದಾಗಿದ್ದು ದುರಸ್ತಿಗೊಳಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಮರುನಿರ್ಮಾಣ ಗೊಳಿಸಲಾಗಿದೆ. ಇದು ಗೋಪುರ ಮತ್ತು ಗರ್ಭಗುಡಿಯನ್ನು ಹೊಂದಿದೆ. ಗುಡಿಯ ಮುಂದಿನ ಭಾಗದಲ್ಲಿ ನಂದಿ ವಿಗ್ರಹವಿದೆ. ಗುಡಿಯಲ್ಲಿ ಕಪ್ಪುಕಲ್ಲಿನ ಶಿಲೆಯಲ್ಲಿ ಶಿವಲಿಂಗ ಮೂರ್ತಿಯನ್ನು ಹೊಂದಿದೆ. ಗುಡಿಯ ಅಂಗಳದಲ್ಲಿ ೩ ಮೂರ್ತಿ ಶಿಲ್ಪಗಳಿವೆ. ನಾವು ಪ್ರಾಥಮಿಕ ಶಾಲೆಯಲ್ಲಿ ಓದುವಾಗ ಆಂಧ್ರ ಜನಾಂಗವು ಇಲ್ಲಿ ಪ್ರಸಾದವನ್ನು ಮಾಡಿ ಶಾಲೆಯ

ಮಕ್ಕಳಿಗೆ ಊಟ ಮಾಡಿಸುತ್ತಿದ್ದರು. ಈಗ ಹಬ್ಬದ ದಿನಗಳಲ್ಲಿ ಅಂದರೆ ವರ್ಷದ ಕೊನೆಯ ದಿನಗಳಲ್ಲಿ ಮಹಾಶಿವರಾತ್ರಿ ,ಸಂಕ್ರಮಣ ,ಕಾರ್ತಿಕ ಮಾಸ ,ಶ್ರಾವಣ ಮಾಸ ,ಹಿಂದೂ ಧರ್ಮದ ಸಂಪ್ರದಾಯಗಳ ಪ್ರಕಾರ ಈ ದೇವರಿಗೆ ಪೂಜಾ ಕಾರ್ಯಕ್ರಮವನ್ನು ನೆರವೇರಿಸುತ್ತಾರೆ.

ಗರ್ಭಗೃಹದ ಮೇಲೆ ಶಿಖರವಿದೆ. ದೇವಾಲಯದ ಬಲಬದಿಯ ಹೊಲದಲ್ಲಿ ಒಂದು ಶಿಲಾಶಾಸನವಿದ್ದು ಅದರಲ್ಲಿ ಒಂಭತ್ತು ಸಾಲುಗಳು ಉಳಿದಿದ್ದು ಶಾಸನ ತೃಟಿತ ವಾಗಿರುವುದರಿಂದ ಓದಲು ಸಾಧ್ಯವಾಗುತ್ತಿಲ್ಲ. ಅಕ್ಷರಗಳು ವಿಜಯನಗರ ಕಾಲದವು. ದೇವಾಲಯದ ಮುಂಬದಿಯಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಗ್ರಾಮದಲ್ಲಿ ಗರ್ಭಿಣಿಯರ ಪ್ರಸವ ಸಮಯದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಬೋರಲಾಗಿ ಹಾಕಿದರೆ ಹೆರಿಗೆ ಸುಸೂತ್ರವಾಗಿ ಆಗುತ್ತದೆ ಎಂಬ ನಂಬಿಕೆ ಇದೆ. ಹೆರಿಗೆ ನಂತರ ಶಿಲ್ಪವನ್ನು ಪುನಃ ಎತ್ತಿ ನಿಲ್ಲಿಸಲಾಗುತ್ತಿತ್ತು.[೧]

೨. ಮಾರುತೇಶ್ವರ ದೇವಸ್ಥಾನ (ಕೃಷ್ಣಾಪುರ)

ಮಾರುತೇಶ್ವರ ದೇವಸ್ಥಾನವು ಗಂಗಾವತಿಯ ಮಾರ್ಗದಲ್ಲಿಯೇ ಕೃಷ್ಣಾಪುರದ ಬಲಭಾಗದಲ್ಲಿರುವ ದೇವಾಲಯ ಇದಾಗಿದ್ದು, ೧೯ನೇ ಶತಮಾನಕ್ಕೆ ಸೇರಿದೆ. ೧೯೮೯ ರಲ್ಲಿ ಈ ಮಾರುತೇಶ್ವರ ಮೂರ್ತಿಯನ್ನು ಬೇರೆ ಊರಿನವರು ತೆಗೆದುಕೊಂಡು ಹೋಗುವಾಗ ಈ ಮೂರ್ತಿ ಇಲ್ಲಿಯೇ ಬಿದ್ದಿತ್ತು. ಅದಕ್ಕಾಗಿ ಅದನ್ನು ಇಲ್ಲಿಯೇ ಪ್ರತಿಷ್ಠಾಪನೆ ಮಾಡಲಾಗಿದೆ.

ಈ ದೇವಸ್ಥಾನವು ಗರ್ಭಗುಡಿ ಸುಮಾರು ೯೧೧ ಉದ್ದಗಲ ವಿದ್ದು ಕಳಸವನ್ನು ಹೊಂದಿದೆ. ಮತ್ತು ಗರ್ಭಗುಡಿಯಲ್ಲಿ ಕಲ್ಲಿನ ಶಿಲೆಯ ಹನುಮಂತನ ಮೂರ್ತಿ ಶಿಲ್ಪವನ್ನು ಹೊಂದಿದೆ. ಈ ದೇವಾಲಯವು ಉತ್ತರಾಭಿ ಮುಖವಾಗಿದ್ದು ಮುಂಭಾಗದಲ್ಲಿ ಗರುಡ ಗಂಬವನ್ನು ನಿರ್ಮಿಸಲಾಗಿದೆ. ಸಾಮಾನ್ಯವಾಗಿ ಶನಿವಾರ ವಿಶೇಷವಾಗಿ ಪೂಜೆಯನ್ನು ಮಾಡುತ್ತಾರೆ. ಹಿಂದೂ ಧರ್ಮದ ಸಂಪ್ರದಾಯದ ಪ್ರಕಾರ ಶ್ರಾವಣಮಾಸದಲ್ಲಿ ಗಂಗೆ ಸ್ಥಾನಕ್ಕೆ ಕರೆದುಕೊಂಡು ಹೋಗುವ ಸಂಪ್ರದಾಯವನ್ನು ಆಚರಣೆ ಮಾಡುತ್ತಾರೆ. ಒಂದು ವಿಶೇಷ ಅಭಿಷೇಕವನ್ನು ಮಾಡಿ ಡೊಳ್ಳು ,ಭಜನೆಯ ಮೂಲಕ ಕಳಸ ಕನ್ನಡಿಯ ಮೂಲಕ ಅತಿ ವಿಜೃಂಭಣೆಯಿಂದ ಎಲ್ಲಾ ಭಕ್ತಾದಿಗಳು ಆಚರಿಸುತ್ತಾರೆ.

೩. ಸಂಜೀವಿನಿ ದೇವಸ್ಥಾನ

ಸಂಜೀವಿನಿ ದೇವಸ್ಥಾನ ಆಗಸಿಯ ಪಕ್ಕ ಊರಿನ ಗುಡ್ಡೆ ಕಲ್ಲಿನ ಪಕ್ಕದಲ್ಲಿ ಈ ದೇವಾಲಯವನ್ನು ನಿರ್ಮಿಸಲಾಗಿದೆ. ಇದು ತೀರ ಹಳೆಯ ಕಾಲದ್ದಾಗಿದ್ದು ೧೯ನೇ ಶತಮಾನಕ್ಕೆ ಸೇರಿದೆ. ಅಂದರೆ ೬೦ ರಿಂದ ೭೦ ರಷ್ಟು ಹಳೆಯದಾಗಿದೆ. ಇದು ಕೂಡ ಗರ್ಭಗುಡಿಯ ಸುಮಾರು ೭೯ ಉದ್ದ ಹಗಲ ಹೊಂದಿದೆ. ಈ ಮೂರ್ತಿಶಿಲ್ಪ ಕಲ್ಲಿನ ರೂಪವನ್ನು ಹೊಂದಿದ

ಹನುಮಂತನ ಪ್ರತಿಷ್ಠಾಪಿಸಿದೆ. ಇದನ್ನು ಸಂಜೀವಿನಿ ಎಂಬ ಹೆಸರಿನಿಂದ ಈ ದೇವಾಲಯವನ್ನು ಕರೆಯುತ್ತಾರೆ. ಇತ್ತೀಚಿನ ದಿನಗಳಲ್ಲಿ ಇದನ್ನು ನವೀಕರಿಸಲಾಗಿದೆ. ಗೋಪುರವನ್ನು ಹೊಂದಿದೆ, ಚಿಕ್ಕದಾದ ದೇವಾಲಯ ಇದಾಗಿದೆ.

೪. ವೀರಭದ್ರೇಶ್ವರ ದೇವಸ್ಥಾನ

೧೯ನೇ ಶತಮಾನಕ್ಕೆ ಸೇರಿದ್ದ ಈ ವೀರಭದ್ರೇಶ್ವರ ದೇವಾಲಯವು ಊರಿನ ಮಧ್ಯಭಾಗದಲ್ಲಿ ನಿರ್ಮಾಣ ಮಾಡಲಾಗಿದೆ. ಇದು ಪೂರ್ವಾಭಿಮುಖವಾದ್ದು, ಗರ್ಭಗೃಹ ಸಭಾಮಂಟಪವನ್ನು ಹೊಂದಿದ್ದು, ಗರ್ಭಗೃಹದಲ್ಲಿ ತ್ರಿಭಂಗಿಯಲ್ಲಿ ಇರುವ ವೀರಭದ್ರೇಶ್ವರ ಶಿಲ್ಪವಿದೆ. ಈ ದೇವಸ್ಥಾನವು ಗರ್ಭಗೃಹ ಸುಮಾರು ೯೧೧ ಉದ್ದ ಮತ್ತು ಅಗಲ ಮಂಟಪವನ್ನು ಹೊಂದಿದೆ. ಈ ಮೂರ್ತಿಯು ಚತುರ್ಬಾಹು ಗಳನ್ನು ಹೊಂದಿದ್ದು ಕೈಗಳಲ್ಲಿ ಬಿಲ್ಲು, ಬಾಣ, ಖಡ್ಗ ಹಾಗೂ ಖೇಟಗಳಿವೆ. ಬಲಬದಿಯಲ್ಲಿ ಟಗರಿನ ತಲೆಯನ್ನು ಹೊಂದಿರುವ ದಕ್ಷನುಅಂಜಲಿ ಬದ್ಧನಾಗಿದ್ದಾನೆ. ಈ ದೇವಾಲಯದ ನಂದಿ ಶಿಲ್ಪದ ಬಳಿ ಅಪರೂಪದ ದ್ವಿಬಾಹು ಗಣೇಶನ ಪ್ರಾಚೀನ ಶಿಲ್ಪವಿದೆ. ಈ ದೇವರಿಗೆ ವರ್ಷಕ್ಕೆ ಒಮ್ಮೆ ರುದ್ರಾಭಿಷೇಕವನ್ನೂ ಮಾಡಲಾಗುತ್ತದೆ.ವಿಶೇಷವಾಗಿ ಹಬ್ಬ-ಹರಿದಿನಗಳಲ್ಲಿ ಪೂಜೆಯನ್ನು ಆಚರಿಸಿ ಶ್ರಾವಣಮಾಸದಲ್ಲಿ ಗಂಗೆ ಸ್ಥಾನಕ್ಕೆ ಡೊಳ್ಳು, ಭಜನೆ ಮೂಲಕ ಮಡಿಯಿಂದ ಕರೆದುಕೊಂಡು ಬರುವ ಸಂಪ್ರದಾಯವು ಇದೆ.

೫. ಶರಣಬಸವೇಶ್ವರ ದೇವಸ್ಥಾನ

ಶರಣಬಸವೇಶ್ವರ ದೇವಸ್ಥಾನವು ಪ್ರಾಚೀನ ಕಾಲದ ಇತಿಹಾಸವನ್ನು ಸುಮಾರು ೨೫೦ ವರ್ಷಗಳಷ್ಟು ಹಳೆಯದು, ಈ ದೇವಸ್ಥಾನದ ಸುತ್ತಲೂ ಗೋಡೆಯನ್ನು ಅಥವಾ ಕಾಂಪೌಂಡವನ್ನು ಹೊಂದಿದೆ. ಸುಮಾರು ೧೦೦ ಅಡಿ ಉದ್ದ ಮತ್ತು ೧೦೦ ಅಡಿ ಅಗಲವನ್ನು ಹೊಂದಿದ್ದು, ಹಿಂದೆ ಉಗ್ರಾಣ ಕೋಣೆ ತಂಗುವ ರೂಮಗಳಿದ್ದವು. ಉತ್ತರ ಮತ್ತು ದಕ್ಷಿಣಕ್ಕೆ ಹಾಗೂ ಪೂರ್ವಕ್ಕೆ ೩ ದ್ವಾರಗಳನ್ನು ಹೊಂದಿದೆ. ಉತ್ತರಾಭಿಮುಖವಾಗಿರುವ ದ್ವಾರದಿಂದ ಇದು ಪ್ರಾಚೀನ ದೇವಾಲಯ ವೆಂದು ಗುರುತಿಸಲಿಕ್ಕೆ ಸಾಧ್ಯವಾಗುತ್ತದೆ. ದಕ್ಷಿಣಾಭಿಮುಖವಾಗಿರುವ ದ್ವಾರಕ್ಕೂ ಮಧ್ಯದಲ್ಲಿ ನಂದಿ ವಿಗ್ರಹವನ್ನು ಹೊಂದಿದೆ. ಅದಕ್ಕೂ ಕೂಡ ಪುಟ್ಟದಾದ ಗೋಪುರವನ್ನು ಹೊಂದಿದೆ. ದೇವಸ್ಥಾನದಲ್ಲಿ ವೆಂಕಟೇಶ್ವರ, ಆಂಜನೇಯ ,ಈಶ್ವರ ದೇವರ ಮೂರ್ತಿಯನ್ನು ಕೂಡ ಕಾಣಬಹುದು.

ಆಂಜನೇಯ :- ವೆಂಕಟೇಶ್ವರ ದೇವಾಲಯದ ಸಭಾಮಂಟಪಕ್ಕೆ ಹೊಂದಿಕೊಂಡ ಆಂಜನೇಯ ದೇವಾಲಯವಿದೆ. ಗರ್ಭಗೃಹದಲ್ಲಿ ಬಿಳಿ ಕಣಶಿಲೆಯ ಆಂಜನೇಯ ವಿಗ್ರಹ ಸುಂದರವಾಗಿದೆ .ಇದು ವೀರಾಂಜನೇಯ ರೂಪದ್ದು, ತ್ರಿಭಂಗಿಯಲ್ಲಿರುವ ಆಂಜನೇಯ ಬಲಗೈ ಮೇಲಕ್ಕೆತ್ತಿದ್ದು ಚಪೇಟ ಹಸ್ತ (ಹೊಡೆಯುವ ಸನ್ನಿವೇಶ) ದಲ್ಲಿದ್ದರೆ, ಎಡಗೈಯಲ್ಲಿ ಸೌಗಂಧಿಕಾ

ಪುಷ್ಪ ವಿದೆ. ಕಿವಿಯೋಲೆ ,ಪದಕ ಹಾರ ,ಕೊರಳ ಸರ, ಮುಂಗೈ ಕಡಗ ,ಬುಜ ಆಹಾರ ,ಸೊಂಟಪಟ್ಟಿ, ಕಾಲ್ಗಡಗಗಳಿಂದ ಶೋಭಿತನಾದ ಆಂಜನೇಯ ಸೊಂಟ ಪಟ್ಟಿಯಲ್ಲಿ ಚೂರಿ ಇದೆ. ಎರಡು ಕಾಲುಗಳ ಮಧ್ಯದಲ್ಲಿ ಅಕ್ಷಯಕುಮಾರನು ನೆಲಕ್ಕೆ ಬಿದ್ದಿದ್ದಾನೆ. ಇಲ್ಲಿಯ ಆಂಜನೇಯ ವಿಗ್ರಹದ ಮತ್ತೊಂದು ವೈಶಿಷ್ಟವೆಂದರೆ ಬಾಲಕ್ಕೆ ಗಂಟೆ ಇರುವುದು. ಎಲ್ಲಾ ಆಂಜನೇಯ ವಿಗ್ರಹಗಳಿಗೆ ಈ ರೀತಿ ಇರುವುದಿಲ್ಲ. ಹೀಗೆ ಯಾವ ಆಂಜನೇಯ ವಿಗ್ರಹಗಳ ಬಾಲಕ್ಕೆ ಗಂಟೆಯನ್ನು ಕಟ್ಟಿರುತ್ತದೆಯೋ ಆ ವಿಗ್ರಹವನ್ನು ನೇರವಾಗಿ ವ್ಯಾಸರಾಯರೇ ಪ್ರತಿಷ್ಠಾಪಿಸಿದ್ದು ಎಂಬ ವಿಚಾರವಿದೆ.

ವಿಜಯನಗರದ ಸಾಮ್ರಾಟನಾದ ಕೃಷ್ಣದೇವರಾಯನ ಗುರುಗಳಾಗಿದ್ದ ವ್ಯಾಸರಾಯರು (೧೪೪೭-೧೫೪೮) ದಾಸ ಸಾಹಿತ್ಯ ಪರಂಪರೆಯನ್ನು ಶ್ರೀಪಾದರಾಜರ ತರುವಾಯ ಬೆಳೆಸಿದರು. ಇವರು ಕನಕದಾಸರ ಗುರುಗಳು ಕೂಡ. ವ್ಯಾಸರಾಯರು ಮಧ್ವ ಪರಂಪರೆಯಲ್ಲಿ ಪ್ರಧಾನವಾದ ಆಂಜನೇಯ ಆರಾಧನೆಯನ್ನು ಹೆಚ್ಚು ಪ್ರಚುರ ಪಡಿಸಿದರು. ಏಕೆಂದರೆ ಮಧ್ವಾಚಾರ್ಯರು ಆಂಜನೇಯನ ಅವತಾರ ಎಂಬ ನಂಬಿಕೆಯಿದೆ. ಹಾಗಾಗಿ ಹರಿಸರ್ವೋತ್ತಮ ,ವಾಯು ಜೀವೋತ್ತಮ ಎಂಬ ಘೋಷಣೆಯನ್ನು ಪ್ರಚಲಿತಕ್ಕೆ ತಂದರು. ಇವರು ವಾಯುದೇವರ (ಆಂಜನೇಯನ) ಆರಾಧನೆಗಾಗಿ ವಿಜಯನಗರ ಸಾಮ್ರಾಜ್ಯದಾದ್ಯಂತ ಹಂಪಿಯ ಯಂತ್ರೋದ್ಧಾರಕ ಆಂಜನೇಯ ಶಿಲ್ಪದ ಜೊತೆಗೆ ೭೦೦ ವಿಗ್ರಹಗಳನ್ನು ಪ್ರತಿಷ್ಠಾಪಿಸಿದರು. ಅವುಗಳಲ್ಲಿ ಸಿದ್ಧಾಪುರದ ಆಂಜನೇಯ ವಿಗ್ರಹ ಒಂದಾಗಿದೆ. ಹಾಗಾಗಿ ಇದು ಶ್ರೀ ವ್ಯಾಸರಾಯ ಪ್ರತಿಷ್ಠೆ ಎಂಬ ವಿಶೇಷ ಮಹತ್ವವನ್ನು ಹೊಂದಿದೆ.[೨]

೬. ವೆಂಕಟೇಶ್ವರ ದೇವಸ್ಥಾನ

ಗ್ರಾಮದ ಮಧ್ಯಭಾಗದಲ್ಲಿ ಒಂದೇ ಪ್ರಕಾರದಲ್ಲಿ ವೆಂಕಟೇಶ್ವರ ,ಆಂಜನೇಯ, ಈಶ್ವರ ಹಾಗೂ ಶರಣಬಸವೇಶ್ವರ ದೇವಾಲಯಗಳಿವೆ. ಈ ದೇವಾಲಯಗಳ ಪ್ರಕಾರಕ್ಕೆ ದಕ್ಷಿಣ ಹಾಗೂ ಪೂರ್ವ ದಿಕ್ಕಿನಲ್ಲಿ ಪ್ರವೇಶ ಮಂಟಪಗಳಿವೆ . ಈ ಮಂಟಪಗಳಲ್ಲಿ ಬಳಸಿರುವ ಕಂಬಗಳು ವಿಜಯನಗರ ಕಾಲದ ದೇವಾಲಯಗಳ ಕಂಬಗಳ ಶೈಲಿಯಲ್ಲಿವೆ.ಹಾಗಾಗಿ ಇಲ್ಲಿ ಒಂದು ಪ್ರಾಚೀನ ದೇವಾಲಯವಿದ್ದಿತೆಂದು ಹೇಳಬಹುದು. ಅದರ ಕಂಬಗಳನ್ನು ಪ್ರಸ್ತುತ ಮಂಟಪಗಳ ನಿರ್ಮಾಣದಲ್ಲಿ ಬಳಸಲಾಗಿದೆ. ವೆಂಕಟೇಶ್ವರ ದೇವಾಲಯವನ್ನು ಸಂಪೂರ್ಣ ಆಧುನೀಕರಣ ಗೊಳಿಸಲಾಗಿದೆ. ಗರ್ಭಗೃಹದಲ್ಲಿರುವ ವೆಂಕಟೇಶ್ವರ ಶ್ರೀದೇವಿ ಹಾಗೂ ಭೂದೇವಿಯರ ಶಿಲ್ಪಗಳು ಪ್ರಾಚೀನವೂ. ವೆಂಕಟೇಶ್ವರನು ಚತುರ್ಭುಜ ಗಳನ್ನು ಹೊಂದಿದ್ದು, ಹಿಂದಿನ ಕೈಗಳಲ್ಲಿ ಶಂಖ ,ಚಕ್ರಗಳಿವೆ. ಮುಂದಿನ ಬಲಗೈ ವರದ ಮುದ್ರೆ ಯಲ್ಲಿದ್ದರೆ ಎಡಗೈ ತೊಡೆಯನ್ನು ಸ್ಪರ್ಶಿಸಿದೆ. ಕಿರೀಟ ಮುಕುಟ ದಾರಿಯಾದ ವೆಂಕಟೇಶ್ವರ ಸರ್ವಾಲಂಕಾರ ಭೂಷಿತನಾಗಿದ್ದಾನೆ. ಆತನ ಇಕ್ಕಲಗಳಲ್ಲಿರುವ ಶ್ರೀದೇವಿ, ಭೂದೇವಿಯ ರು ದ್ವಿಬಾಹುಗಳನ್ನು ಹೊಂದಿದ್ದು .ಕೈಯಲ್ಲಿ ಪದ್ಮವನ್ನು ಧರಿಸಿ.

ಮತ್ತೊಂದು ಕೈ ಇಳಿಬಿಟ್ಟಿದೆ. ಕಿರೀಟ ಮುಕುಟ, ಪತ್ರ ಕುಂಡಲ ಸರ್ವ ವಸ್ತ್ರಾಭರಣಗಳಿಂದ ಸುಶೋಭಿಸುತ್ತಿದ್ದಾರೆ. ಶಿಲ್ಪಗಳ ಶೈಲಿಯಿಂದ ಇವು ಕೂಡ ೧೬ ನೇ ಶತಮಾನದವೆಂದು ಹೇಳಬಹುದು. ಮಂತ್ರಾಲಯ ಮಠದ ದಾಖಲೆಗಳ ಪ್ರಕಾರ ಇಲ್ಲಿ ವೆಂಕಟೇಶ್ವರನನ್ನು ಪ್ರತಿಷ್ಠಾಪಿಸಿದವರು ಮಂತ್ರಾಲಯ ಮಠದ ಯತಿಗಳಾಗಿದ್ದ ಶ್ರೀ ಸುರೇಂದ್ರ ತೀರ್ಥರು ರಘುನಂದನ ತೀರ್ಥರಿಂದ ಸನ್ಯಾಸ ದೀಕ್ಷೆ ಪಡೆದು ೧೫೦೪ ರಿಂದ ೨೦ ವರ್ಷಗಳ ಕಾಲ ಪೀಠಾಧಿಪತಿಗಳಾಗಿ ಮಠವನ್ನು ಅಭಿವೃದ್ಧಿಪಡಿಸಿದರು. ಇವರು ೧೫೧೩ ರಲ್ಲಿ ವಿಜಯನಗರವನ್ನು ಕೃಷ್ಣದೇವರಾಯನ ಕಾಲದಲ್ಲಿ ಸಂದರ್ಶಿಸಿ ವಿಜಯ ವಿಠ್ಠಲ ದೇವಾಲಯದ ರಾಮನವಮಿಯನ್ನು ಆಚರಿಸಿದರು. ಆ ಸಂದರ್ಭದಲ್ಲಿ ಅರಸನು ಕೃಷ್ಣನ ಆರಾಧನೆಗಾಗಿ ಹಲವಾರು ಸ್ಥಳಗಳನ್ನು ದಾನವಾಗಿ ನೀಡುತ್ತಾರೆ. ಅವುಗಳಲ್ಲಿ ಮುದಗಲ್ ಬಳಿಯ ಆನೆಹೊಸೂರು, ಕೊಪ್ಪಳದ ಲೇಬಗೇರಿ, ಕುಷ್ಟಗಿಯ ಮಲ್ಲಾಪುರ ಮತ್ತು ಹೊನ್ನಮೆಟ್ಟಿ ,ತೆಕ್ಕಲಕೋಟೆಯ ಹೆರಕಲ್ಲುಗಳ ಜೊತೆಗೆ ಗಂಗಾವತಿಯ ಸಿದ್ದಾಪುರವೂ ಕೂಡ ಒಂದಾಗಿತ್ತು. ಹೀಗಾಗಿ ದಾನವಾಗಿ ಪಡೆದ ಸಿದ್ದಾಪುರ ಗ್ರಾಮಗಳಲ್ಲಿ ಸುರೆಂದ್ರ ತೀರ್ಥರು ವೆಂಕಟೇಶ್ವರ ಶ್ರೀದೇವಿ, ಭೂದೇವಿಯರ ವಿಗ್ರಹಗಳನ್ನು ಪ್ರತಿಷ್ಠಾಪಿಸಿ ದೇವಾಲಯವನ್ನು ನಿರ್ಮಿಸುತ್ತಾರೆ. ಇವರು ೧೫೭೫ ರಲ್ಲಿ ಮಧುರೈನಲ್ಲಿ ಬೃಂದಾವನಸ್ಥರಾದರು. ಸಿದ್ದಾಪುರದ ವೆಂಕಟೇಶ್ವರ ದೇವಾಲಯದ ನಿರ್ಮಾಣ ತಮ್ಮ ಮಠದ ಗುರುಗಳಿಂದಾಗಿದೆ ಎಂಬುದನ್ನು ಅರಿತ ಮಂತ್ರಾಲಯ ಮಠದ ಹಿಂದಿನ ಗುರುಗಳಾಗಿದ್ದ ಶ್ರೀ ಸುಯತೀಂದ್ರ ತೀರ್ಥರು ಗ್ರಾಮಕ್ಕೆ ಬಂದು ದೇವಾಲಯದ ಗೋಪುರವನ್ನು ಪುನರುಜ್ಜೀವನಗೊಳಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

೭. ಈಶ್ವರ ದೇವರು

ಈಶ್ವರ ದೇವಾಲಯ ಗರ್ಭಗೃಹ ಮತ್ತು ಆಯತಾಕಾರದ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಚಿಕ್ಕಪೀಠ,ಪಾಣಿವಟ್ಟಲು ಹೊಂದಿರುವ ಲಿಂಗವಿದೆ. ೧೯೬೫ ರಲ್ಲಿ ಈ ದೇವಾಲಯ ನಿರ್ಮಾಣ ಕಾರ್ಯವನ್ನು ಆರಂಭಿಸಲಾಯಿತು. ದೇವಾಲಯವನ್ನು ಬಾದಾಮಿ ಪ್ರದೇಶದ ಮರಳು ಶಿಲೆಯಿಂದ ಕಟ್ಟಲಾಗಿದೆ. ಇಲ್ಲಿಯೇ ಈಚೆಗೆ ನಿರ್ಮಿಸಿದ ಶರಣಬಸವೇಶ್ವರ ದೇವಾಲಯವಿದ್ದು, ಪ್ರತಿವರ್ಷ ಪುರಾಣ ಹಾಗೂ ಜಾತ್ರೆ ನಡೆಯುತ್ತದೆ. ಈಶ್ವರ ದೇವರ ಜಾತ್ರೆಯು ಅತಿ ವಿಜೃಂಭಣೆಯಿಂದ ಎಳ್ಳಮಾವಾಸ್ಯೆ ಮೂರು ದಿನ ಮುಂಚೆಯೇ ಮಾಡುತ್ತಾರೆ .ಒಂದು ತಿಂಗಳ ಪರ್ಯಂತ ಶರಣಬಸವೇಶ್ವರ ಪುರಾಣವನ್ನು ಮಾಡಿ ನಂತರದಲ್ಲಿ ಜಾತ್ರೆಯ ಆಚರಣೆಯನ್ನು ಮಾಡುತ್ತಾರೆ. ಹಿಂದಿನ ದಿನಗಳಲ್ಲಿ ಸಾಮೂಹಿಕ ವಿವಾಹ ನಡೆಸುತ್ತಿದ್ದರು ಹಾಗೆಯೇ ಸಾಂಸ್ಕೃತಿಕ ಕಾರ್ಯವನ್ನು ಮಾಡುತ್ತಾರೆ. ಮತ್ತು ಜಗದ್ಗುರು ಪಟ್ಟಾಚಾರ್ಯ ರಿಂದ ಬುಕ್ಕಸಾಗರದ ಕರಿಸಿದ್ದೇಶ್ವರ ಮತ್ತು ಹೆಬ್ಬಾಳ ನಾಗಭೂಷಣ ಶಿವಾಚಾರ್ಯ ದಿಂದಾಗಿ ಭಾಷಣವನ್ನು ಮಾಡುತ್ತಾರೆ, ಆಶೀರ್ವಚನವನ್ನು ಹೇಳುವುದು ಸನ್ಮಾನ ಕಾರ್ಯಕ್ರಮವನ್ನು ಮಾಡುತ್ತಾರೆ. ಈಶ್ವರ ದೇವಸ್ಥಾನ ಗರ್ಭಗುಡಿಯು ೯' ಹೊಂದಿದೆ. ಮುಂದೆ ನಂದಿವಿಗ್ರಹ .ಗಣೇಶ್ವರ ಪುಷ್ಪ ಮೂರ್ತಿ ಇದೆ.

ದೇವಾಲಯದಲ್ಲಿ ಶರಣಬಸವ ಮೂರ್ತಿಯು ಉತ್ತರಾಭಿಮುಖವಾಗಿದ್ದು, ಗರ್ಭಗುಡಿಯು ಸುಮಾರು ೧೧೯ ಉದ್ದಗಲವನ್ನು ಹೊಂದಿದ್ದು, ಅದರ ಪಕ್ಕದಲ್ಲಿ ದೊಡ್ಡದಾದ ಆಲದ ಮರದ ಕಟ್ಟೆ ಇದೆ. ಅದರಲ್ಲಿ ಚಿಕ್ಕ ಮೂರ್ತಿ ಶಿಲ್ಪವಿದೆ ಮತ್ತು ದೇವರ ಮೂರ್ತಿ ಪ್ರವೇಶದ್ವಾರದ ಮತ್ತು ಹೊರಭಾಗದಲ್ಲಿ ವೀರಗಲ್ಲು (ಗರುಡಗಂಭ) ದೇವಸ್ಥಾನದ ಸ್ಥಾಪನೆಯ ಬಗ್ಗೆ ಕೆತ್ತನೆಯು ವಿವರಗಳು ಮತ್ತು ಒಳಭಾಗದಲ್ಲಿ ದೇವಸ್ಥಾನದ ಕಂಬಗಳು ಮತ್ತು ಮೇಲ್ಛಾವಣಿಯಲ್ಲಿ ಜಂತೆಗಳು ದ್ರಾವಿಡ ಶೈಲಿಯನ್ನು ಹೊಂದಿದೆ. ಇದು ಈ ಊರಿನ ದೇವಸ್ಥಾನದಲ್ಲಿ ಪ್ರಮುಖವಾದ ಮತ್ತು ಪ್ರಾಚೀನವಾದ ದೇವಾಲಯ ಇದಾಗಿದೆ. ಈ ದೇವರಿಗೆ ವಿಶೇಷ ದಿನಗಳಲ್ಲಿ ಧಾರ್ಮಿಕ ಹಬ್ಬ ಆಚರಣೆ ದಿವಸಗಳಲ್ಲಿ ವಿಶೇಷ ಪೂಜಾ ಕಾರ್ಯಗಳನ್ನು ಮಾಡಲಾಗುತ್ತದೆ.[೩]

೮. ಕಾಶಿ ವಿಶ್ವನಾಥ ದೇವಾಲಯ

ಈ ದೇವಸ್ಥಾನವು ೧೦೦ ಅಡಿ ಉದ್ದ ಮತ್ತು ಅಗಲ ವಿಸ್ತೀರ್ಣವನ್ನು ಹೊಂದಿದ್ದು, ಪೂರ್ವ ಮತ್ತು ಉತ್ತರಾಭಿಮುಖವಾಗಿ ದ್ವಾರಗಳನ್ನು ಹೊಂದಿದೆ. ಹೊಸ ಊರಿನ ಹತ್ತಿರದ ದೇವಸ್ಥಾನವಾಗಿದೆ. ಇದು ಸ್ಮಶಾನದ ಪಕ್ಕದಲ್ಲಿಯೇ ಎಸ್.ಎಚ್. ರೋಡ್ ಇದೆ ಅದರ ಪಕ್ಕದಲ್ಲಿಯೇ ಈ ದೇವಸ್ಥಾನವಿದೆ. ಕಲ್ಲಿನ ಗೋಪುರ ೯ ಚೌಕಾಕಾರವಾಗಿದ್ದು ಮುಂದೆ ಸಭಾಂಗಣವನ್ನು ಹೊಂದಿದೆ. ಈ ದೇವಾಲಯವನ್ನು ಹೈದರಾಬಾದಿನ ನಿಜಾಮ ಅರಸ ಕಟ್ಟಿಸಿದ್ದಾನೆ. ತುಂಗಭದ್ರಾ ಅಣೆಕಟ್ಟು ನಿರ್ಮಾಣದಿಂದಾಗಿ ಹಿನ್ನೀರಿನಲ್ಲಿ ಮುಳುಗಿದ್ದ ಗ್ರಾಮಗಳ ಪೈಕಿ ಕೋರಗಲ್ ಗ್ರಾಮದ ಜನರಿಗಾಗಿ ಸಿದ್ದಾಪುರದಲ್ಲಿ ಕಾಲೋನಿಯನ್ನು ನಿರ್ಮಿಸಲಾಯಿತು. ಈಗ ವಲಸೆಬಂದ ಜನರಿರುವ ಈ ಭಾಗವನ್ನು ಹೊಸೂರು ಎಂದು ಕರೆಯುತ್ತಾರೆ.

ವಲಸೆ ಬಂದ ಪ್ರತಿ ಕುಟುಂಬಕ್ಕೆ ನಿಜಾಮ ಸರಕಾರ ೫ ಎಕರೆ ಜಮೀನು ಹಾಗೂ ಒಂದು ಮನೆಯನ್ನು ನೀಡಿದೆ. ಜನರಿಗಾಗಿ ಕಾಶಿ ವಿಶ್ವನಾಥ ದೇವಾಲಯವನ್ನು ಕೂಡ ಕಟ್ಟಿಸಿ ಕೊಡಲಾಯಿತು. ಈ ದೇವಾಲಯವು ಗರ್ಭಗೃಹ, ಆಯತಾಕಾರದ ತೆರೆದ ಸಭಾಮಂಟಪವನ್ನು ಹೊಂದಿದೆ. ದೇವಾಲಯ ವಿಶೇಷ ವಾಸ್ತುಶೈಲಿಯನ್ನು ಹೊಂದಿದೆ. ಗರ್ಭಗೃಹದ ಗೋಡೆಗಳ ಮೇಲೆ ದೇವಕೋಷ್ಠ ಮಾದರಿಗಳು ಅವುಗಳ ಮೇಲೆ ಬೌದ್ಧ ಚೈತ್ಯಾಕೃತಿಗಳ ಅಲಂಕರಣೆ ಗಳಿವೆ. ಗರ್ಭಗೃಹದ ಮೇಲೆ ಸ್ತೂಪಿಯೇ ಪ್ರಧಾನವಾದ ಶಿಖರವಿದೆ. ಅಷ್ಟಭುಜಾಕೃತಿಯ ಸ್ತೂಪಿಯ ಮೇಲೂ ಚೈತ್ಯಾಕೃತಿಯ ಅಲಂಕಾರಗಳಿವೆ. ಸಭಾಮಂಟಪದಲ್ಲಿ ಎರಡು ಬದಿಗೆ ತಲಾ ೪ ರಂತೆ ೮ ಸ್ತಂಭಗಳಿವೆ. ಚೌಕ ಕಾಂಡಗಳ ಸ್ತಂಭಗಳ ಮೇಲ್ಭಾಗ ರಾಷ್ಟ್ರಕೂಟರ ಕಾಲದ ಕಂಬಗಳಂತೆ ಇವೆ. ಈ ದೇವಾಲಯವನ್ನು ನಿರ್ಮಿಸಿ ಸುಮಾರು ೭೦ ವರ್ಷಗಳಾಗಿವೆ. ದೇವಾಲಯದ ಲಿಂಗವನ್ನು ಕೊಪ್ಪಳದ ಗವಿಮಠದ ಶಿವಶಾಂತವೀರ ಸ್ವಾಮಿಗಳು ಪ್ರತಿಷ್ಠಾಪಿಸಿದ್ದಾರೆ.

೯. ದುಗಲಮ್ಮ ದೇವಾಲಯ

ಹಳೆ ಹೊರಬಾಗದ ಒಂದನೇ ವಾರ್ಡ್ ನಲ್ಲಿ ದುರ್ಗಮ್ಮ ದೇವಿಯ ದೇವಾಲಯವಿದೆ. ಈಕೆ ಗ್ರಾಮದೇವತೆ. ಗರ್ಭಗೃಹದಲ್ಲಿ ಶಂಖ,ಚಕ್ರದಾರಿ ಯಾಗಿರುವ ದೇವಿಯ ವಿಗ್ರಹವು ಆಕರ್ಷಕವಾಗಿದ್ದು, ೧೬ನೇ ಶತಮಾನದಷ್ಟು ಪ್ರಾಚೀನವಾಗಿದೆ. ದೇವಿಯ ವಿಗ್ರಹ ಗ್ರಾಮದ ಬಳಿಯ ಹೊಲದಲ್ಲಿ ಮಡಿಕೆ (ರೆಂಟೆ) ಹೊಡೆಯುವಾಗ ಸಿಕ್ಕಿತ್ತು ಎಂದು ಹೇಳುತ್ತಾರೆ. ಈ ದೇವಾಲಯದ ಗರ್ಭಗೃಹದ ಮೇಲಿನ ಕಳಸದ ಮೇಲೆ "ಮಪನ್ ಮಗ ಹನುಮನಗೌಡ ತನ್ನ ಭಕ್ತಿಯಿಂದ ಕೊಡಿಸಿದ್ದನು. ವಿರೋಧಿನಾಮ ಸಂ!!ರ ಮಾಘ ಬ!! ೧೪ ಮಂಗಳವಾರ ಸಂ!!೧೨೯೯ ಫಸಲಿ ಶಾಲಿವಾಹನ ಶಕೆ ೧೮೧೧ ಎಂದು ಬರೆದಿದೆ. ಇದು ಕ್ರಿ.ಶ.೧೮೮೯ ಕ್ಕೆ ಸರಿಯಾಗುತ್ತದೆ. ಈ ಗುಡಿಯ ಎಡಭಾಗದಲ್ಲಿ ಗಿಡದ ಕಟ್ಟೆಯಮೇಲೆ ವೆಂಕಟೇಶ್ವರ ಶಿಲ್ಪವಿದ್ದು ತೀರ ಅಸ್ಪಷ್ಟ ಕೆತ್ತನೆಯಿದು,ನಾಲ್ಕು ಕೈಗಳಿದ್ದು ಹಿಂದಿನ ಕೈಯಲ್ಲಿ ಶಂಖ, ಚಕ್ರಗಳಿವೆ. ಜನ ಇದನ್ನು ಸುಂಕ್ಲಮ್ಮ ಎಂದು ಪೂಜಿಸುತ್ತಿದ್ದಾರೆ.

೧೦. ಬಾಬು ಸುಭಾನಿ ಮಸೀದಿ

ಬಾಬುಸುಭಾನಿ ದರ್ಗಾ ಈ ಮಸೀದಿಯು ಧಾರ್ಮಿಕ ಕೇಂದ್ರವಾಗಿದ್ದು, ಇದು ಕೂಡ ಸಂಜೀವಿನಿ ಗುಡಿ ಹತ್ತಿರವೇ ಇದೆ. ಸುಮಾರು ೪೦ ರಿಂದ ೫೦ ವರ್ಷಗಳ ಹಿಂದೆ ನಿರ್ಮಾಣವಾಗಿದೆ. ೩೦x೪೦ ಪೂಟು ಹಗಲು ಉದ್ದದ ಒಂದು ಕೋಣೆಯಾಗಿದ್ದು ಮುಂದೆ ಕಟ್ಟೆಯನ್ನು ಅದರ ಪಕ್ಕದಲ್ಲಿ ದೊಡ್ಡದಾದ ಬೇವಿನ ಮರವಿದೆ ಹಾಗೂ ಅದರ ಸುತ್ತಲೂ ಕಟ್ಟೆಯನ್ನು ಕಟ್ಟಲಾಗಿದೆ. ಗುರುವಾರದ ದಿನದಂದು ಪೂಜೆಯನ್ನು ಆಚರಣೆ ಮಾಡುವುದು ಸಂಪ್ರದಾಯವಿದೆ. ಹಾಗೂ ಮೊಹರಂ ಹಬ್ಬದಲ್ಲಿ ಇಲ್ಲಿಯೇ ದೇವರು ಕೂಡಿಸುವ ಸಂಪ್ರದಾಯವು ಕೂಡ ಇದೆ.

೧೧. ಗೂಳಿ ಬಸವೇಶ್ವರ ದೇವಸ್ಥಾನ

ಈ ದೇವಸ್ಥಾನವು ಊರಿನ ಮಧ್ಯಭಾಗದಲ್ಲಿದ್ದು ಪುಟ್ಟದಾದ ದೇವಸ್ಥಾನ ಇದಾಗಿದೆ. ಇದು ೯x೫ ಪೀಟ ಗರ್ಭಗುಡಿಯನ್ನು ಹೊಂದಿದೆ. ಚಿಕ್ಕಮುಟ್ಟ ಬಸವಣ್ಣ ಗಳ ೨ ಸಮಾಧಿಗಳು ಮತ್ತು ಪುಟ್ಟದಾದ ಉಟಕನೂರು ತಾತಪ್ಪನ ಗದ್ದಿಗೆ ಇದ್ದು ಹಾಗೂ ಕಲ್ಲಿನ ವಿಗ್ರಹವನ್ನು ಹೊಂದಿದೆ.ಮತ್ತು ಸುಮಾರು ೮೦x೮೦ ಪೀಟು ಉದ್ದ ಕಲ್ಯಾಣ ಮಂಟಪ ವನ್ನು ಹೊಂದಿದೆ. ಮತ್ತು ಸುತ್ತಮುತ್ತಲು ಚಿಕ್ಕಮುಟ್ಟ ಸಮಾರಂಭಗಳನ್ನು ಇದೇ ಕಲ್ಯಾಣ ಮಂಟಪದಲ್ಲಿ ನಡೆಯುತ್ತವೆ.

೧೨. ಮೌನಲಿಂಗೇಶ್ವರ ದೇವಾಲಯ

ಮೌನ ಲಿಂಗೇಶ್ವರ ದೇವಾಲಯವು ಊರಿನ ಹತ್ತಿ ಕೆಳಗಡೆ ಇರುವಂತಹ ದೇವಾಲಯ ಅತೀ ಚಿಕ್ಕ ದೇವಸ್ಥಾನ ಇದಾಗಿದೆ. ಇದರ ವಿಸ್ತೀರ್ಣ ೯೯ ಉದ್ದ-ಅಗಲ ಗರ್ಭಗುಡಿಯನ್ನು ಹೊಂದಿದ್ದು ಮುಂದೆ ಸಭಾಂಗಣವನ್ನು ಹೊಂದಿದೆ. ಇದು ಪ್ರಸ್ತುತವಾಗಿ ನಿರ್ಮಾಣಗೊಂಡ ದೇವಸ್ಥಾನವಾಗಿದೆ. ಇದರ ಸುತ್ತಲೂ ಹೊಲಗಳು ಇರುವುದನ್ನು ನೋಡಬಹುದು. ಅತೀ ಹೆಚ್ಚಾಗಿ ಅಕ್ಕಸಾಲಿಗರು ಅಥವಾ ವಿಶ್ವಕರ್ಮ ಜನಾಂಗದವರು ಈ ದೇವಾಲಯದ ಆರಾಧಕರಾಗಿದ್ದಾರೆ ಮತ್ತು ಶ್ರಾವಣ ಮಾಸದಲ್ಲಿ ಈ ದೇವರನ್ನು ವಿಜ್ರಂಭಣೆಯಿಂದ ಗಂಗೆಸ್ಥಾನಕ್ಕೆ ಕರೆದುಕೊಂಡು ಬರುತ್ತಾರೆ. ಮತ್ತು ಪ್ರಸಾದ ಸೇವೆಯನ್ನು ಮಾಡುತ್ತಾರೆ.ಹೆಣ್ಣುಮಕ್ಕಳು ಕಳಸ ಕುಂಭವನ್ನು ಹಿಡಿಯುವುದರ ಮೂಲಕ ಸಂಭ್ರಮಿಸುವುದನ್ನು ನೋಡಬಹುದು.[೪]

ಈಳಿಗನೂರು

ಆಂಜನೇಯ ದೇವಸ್ಥಾನ

ಆಂಜನೇಯ ದೇವಾಲಯ ತೀರಾ ಹಿಂದಿನ ಕಾಲದ್ದು. ಸುಮಾರು ೧೦೦ ವರ್ಷದಷ್ಟು ಹಳೆಯದು ಎಂದು ಊಹಿಸಬಹುದಾಗಿದೆ. ಈ ಗುಡಿಯು ಗ್ರಾಮದ ಮಧ್ಯದಲ್ಲಿದ್ದು, ಉತ್ತರಾಭಿಮುಖವಾಗಿ ಪ್ರತಿಷ್ಠಾಪನೆಗೊಂಡಿದೆ. ಆಂಜನೇಯ ದೇವಸ್ಥಾನದ ವಿಸ್ತೀರ್ಣ ೨೧೪೦ ಉದ್ದ ಅಗಲ ಗರ್ಭಗುಡಿಯನ್ನು ಹೊಂದಿದ್ದು ,ಮುಂದೆ ಸಭಾಂಗಣವನ್ನು ಹೊಂದಿದೆ. ಆಂಜನೇಯ ಮೂರ್ತಿಯು ೬ ಫೀಟ ಇದ್ದು. ಅಲ್ಲದೆ ದೇವರ ಗುಡಿಯು ಕಲ್ಲಿನಿಂದ ನಿರ್ಮಾಣವಾಗಿದ್ದು ಗೋಪುರ ಮತ್ತು ಗರ್ಭಗುಡಿಯನ್ನು ಒಳಗೊಂಡಿದೆ. ಒಳಗಡೆ ಮೂರ್ತಿಯು ಕಲ್ಲಿನ ಮೂರ್ತಿಶಿಲ್ಪ ಉತ್ತಮ ರೂಪದಲ್ಲಿದೆ. ಆಂಜನೇಯ ವಿಗ್ರಹ ಸುಂದರವಾಗಿದೆ ಇದು ವೀರಾಂಜನೇಯ ರೂಪದ್ದು, ತ್ರಿಭಂಗಿಯಲ್ಲಿರುವ ಆಂಜನೇಯ ಬಲಗೈ ಮೇಲಕ್ಕೆತ್ತಿದ್ದು ಚಪೇಟ ಹಸ್ತ (ಹೊಡೆಯುವ ಸನ್ನಿವೇಶ)ದಲ್ಲಿದ್ದರೆ, ಎಡಗೈಯಲ್ಲಿ ಗಜವನ್ನು ಹಿಡಿದಿದ್ದಾನೆ. ಸೊಂಟದ ಪಟ್ಟಿಯನ್ನು ಕೂಡ ಹೊಂದಿದ್ದಾನೆ. ಎರಡು ಕಾಲುಗಳ ಮಧ್ಯದಲ್ಲಿ ಅಕ್ಷಯಕುಮಾರ ನು ನೆಲಕ್ಕೆ ಬಿದ್ದಿದ್ದಾನೆ. ಇಲ್ಲಿಯ ಆಂಜನೇಯ ವಿಗ್ರಹದ ಮತ್ತೊಂದು ವೈಶಿಷ್ಟವೆಂದರೆ ಬಾಲಕ್ಕೆ ಗಂಟೆ ಇರುವುದು. ಎಲ್ಲಾ ಆಂಜನೇಯ ವಿಗ್ರಹಗಳಿಗೆ ಈ ರೀತಿ ಇರುವುದಿಲ್ಲ. ಹೀಗೆ ಯಾವ ಆಂಜನೇಯ ವಿಗ್ರಹಗಳ ಬಾಲಕ್ಕೆ ಗಂಟೆಯನ್ನು ಕಟ್ಟಿರುತ್ತದೆಯೋ ಆ ವಿಗ್ರಹಗಳನ್ನು ನೇರವಾಗಿ ವ್ಯಾಸರಾಯರೇ ಪ್ರತಿಷ್ಠಾಪಿಸಿದ್ದು ಎಂಬ ವಿಚಾರವಿದೆ.

ವಿಜಯನಗರದ ಸಾಮ್ರಾಟನಾದ ಕೃಷ್ಣದೇವರಾಯನ ಗುರುಗಳಾಗಿದ್ದ ವ್ಯಾಸರಾಯರು (೧೪೪೭-೧೫೪೮) ದಾಸ ಸಾಹಿತ್ಯ ಪರಂಪರೆಯನ್ನು ಶ್ರೀಪಾದರಾಜರ ತರುವಾಯ ಬೆಳೆಸಿದರು. ಇವರು ಕನಕದಾಸರ ಗುರುಗಳು ಕೂಡ. ವ್ಯಾಸರಾಯರು ಮಧ್ವ ಪರಂಪರೆಯಲ್ಲಿ ಪ್ರಧಾನವಾದ

ಆಂಜನೇಯ ಆರಾಧನೆಯನ್ನು ಹೆಚ್ಚು ಪ್ರಚುರಪಡಿಸಿದರು. ಏಕೆಂದರೆ ಮಧ್ವಾಚಾರ್ಯರು ಆಂಜನೇಯ ಅವತಾರವೆಂಬ ನಂಬಿಕೆ ಇದೆ. ಹಾಗಾಗಿ ಹರಿಸರ್ವೋತ್ತಮ ,ವಾಯು ಜೀವೋತ್ತಮ ಎಂಬ ಘೋಷಣೆಯನ್ನು ಪ್ರಚಲಿತಕ್ಕೆ ತಂದರು. ಇವರು ವಾಯುದೇವರ (ಆಂಜನೇಯ) ಆರಾಧನೆಗಾಗಿ ವಿಜಯನಗರ ಸಾಮ್ರಾಜ್ಯದಾದ್ಯಂತ ಹಂಪಿಯ ಯಂತ್ರೋದ್ಧಾರಕ ಆಂಜನೇಯ ಶಿಲ್ಪದ ಜೊತೆಗೆ ೨೦೦ ವಿಗ್ರಹಗಳನ್ನು ಪ್ರತಿಷ್ಠಾಪಿಸಿದರು. ಇವುಗಳಲ್ಲಿ ಈಳಿಗನೂರು ಆಂಜನೇಯ ವಿಗ್ರಹವೂ ಒಂದಾಗಿದೆ. ಹಾಗಾಗಿ ಇದು ಶ್ರೀ ವ್ಯಾಸರಾಯ ಪ್ರತಿಷ್ಠೆ ಎಂಬ ವಿಶೇಷ ಮಹತ್ವವನ್ನು ಹೊಂದಿದೆ.

ಈ ದೇವಸ್ಥಾನದ ಬಲಗಡೆ ಈಶ್ವರ ದೇವಾಲಯ, ಶಾಸನವನ್ನು ಕಾಣಬಹುದು. ಈ ದೇವಸ್ಥಾನದ ಮುಂದೆ ಪಾದಗಟ್ಟೆ ಮತ್ತು ವಿಜಯ ಸ್ತಂಭವನ್ನು ಕಾಣಬಹುದು. ಚಟ್ಟ ಅಮಾವಾಸ್ಯೆ ಮಾಡಿ ಐದು ದಿನ ಉಚ್ಚೆಯ್ಯ ಎಳೆದು,ಮರುದಿನ ವಿಜೃಂಭಣೆಯಿಂದ ರಥವನ್ನು ಎಳೆಯುವರು. ಗಂಗೆ ಸ್ಥಾನಕ್ಕೆ ಡೊಳ್ಳು, ಭಜನೆ, ಕಳಸ ಮೂಲಕ ಮಡಿಯಿಂದ ಕರೆದುಕೊಂಡು ಬರುವ ಸಂಪ್ರದಾಯದವು ಇದೆ. ಸುತ್ತಮುತ್ತಲಿನ ಗ್ರಾಮಸ್ಥರು ಈ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ.

ದ್ಯಾವಮ್ಮ ದೇವಸ್ಥಾನ, ಶರಣಬಸವೇಶ್ವರ ದೇವಸ್ಥಾನ, ಗಾಳೆಮ್ಮ ದೇವಸ್ಥಾನ, ಅಡವಿಸಿದ್ದೇಶ್ವರ ಮಠ,ದುರ್ಗಮ್ಮ ದೇವಸ್ಥಾನವನ್ನು ಈ ಊರಿನಲ್ಲಿ ಕಾಣಬಹುದು.

ದೇವಸ್ಥಾನಗಳು

ಉಳೇನೂರಿನ ಶಿವಲಿಂಗವು ಹಳೆಯ ಊರಿನ ಮಧ್ಯದ ಪಾಳು ಬಿದ್ದಿರುವ ಜಾಗದಲ್ಲಿದೆ. ಈ ಶಿವಲಿಂಗದ ಸುತ್ತಲೂ ಗಿಡಗಂಟೆಗಳಿಂದ ಸುತ್ತುವರೆದಿದ್ದು, ಕಲ್ಲಿನ ಕಟ್ಟೆಯ ಮೇಲೆ ಪ್ರತಿಷ್ಠಾಪನೆಗೊಂಡಿದೆ. ಇದು ಸುಮಾರು ೨೦೦ ವರ್ಷಗಳ ಇತಿಹಾಸ ಹೊಂದಿದೆ. ಅಲ್ಲದೆ ಈ ಜಾಗದಲ್ಲಿ ಕೆಲವು ಹಿಂದಿನ ಕಾಲದ ಶಿಲಾಶಾಸನಗಳ ಕೆಲವು ಮೂರ್ತಿಗಳು ಒಂದೇ ಸ್ಥಳದಲ್ಲಿವೆ. ಈ ಶಿವಲಿಂಗವು ಕಲ್ಲಿನ ದಾಗಿದ್ದು ಮತ್ತು ಸುಣ್ಣದಿಂದ ಲೇಪನವಾಗಿದೆ.[೫]

೧. ಉಳೇನೂರು ಮಠ

ಉಳೇನೂರು ಮಠ ಈ ಮಠಕ್ಕೆ ೨೦೦ ವರ್ಷಗಳ ಇತಿಹಾಸವಿದೆ. ಇಲ್ಲಿ ಹಳೆಯ ಕಾಲದ ಶಿಲಾಶಾಸನಗಳು ದೊರೆತ್ತಿವೆ. ಈ ಮಠವು ಪ್ರಾಚೀನ ಕಾಲದ ಧಾರ್ಮಿಕ ಕೇಂದ್ರವಾಗಿದ್ದು, ಊರಿನ ಒಳಭಾಗದಲ್ಲಿದೆ. ಈ ಮಠವು ಹಿಂದಿನ ಕಾಲದಲ್ಲಿ ಭಕ್ತರಿಗೆ ಆಶ್ರಯ ತಾಣವಾಗಿತ್ತು. ಮಠವು ಸಂಪೂರ್ಣವಾಗಿ ಕಲ್ಲಿನಿಂದ ನಿರ್ಮಾಣಗೊಂಡಿದ್ದು, ಅಲ್ಲದೆ ಅನೇಕ ರೀತಿಯ ಮೂರ್ತಿ ಶಿಲ್ಪಗಳನ್ನು ಒಳಗೊಂಡಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ಮಠವು ತುಂಗಭದ್ರ ನದಿಯ

ಪ್ರವಾಹದಿಂದ ಸಂಪೂರ್ಣವಾಗಿ ನಶಿಸಿ ಹೋಗಿವೆ. ಕೆಲವೊಂದು ಅವಶೇಷಗಳು ಮೂರ್ತಿಶಿಲ್ಪಗಳು ಈ ಭಾಗದಲ್ಲಿ ಕಂಡುಬರುತ್ತವೆ.

೨. ಬಸವಣ್ಣ ದೇವರ ಗುಡಿ

ಉಳೆನೂರು ಗ್ರಾಮದ ಹಳೆಯ ಜಾಗದಲ್ಲಿರುವ ಈ ದೇವಸ್ಥಾನವು ನಂದಿ ಬಸವ ಮೂರ್ತಿ ಮತ್ತು ಶಿವಲಿಂಗ ಮೂರ್ತಿಯನ್ನು ಒಳಗೊಂಡಿದೆ. ಈ ದೇವರ ಗುಡಿಯು ದಕ್ಷಿಣಾಭಿಮುಖವಾಗಿ ನಿರ್ಮಾಣಗೊಂಡಿದೆ.ಅಲ್ಲದೆ ಸುಮಾರು ೪೦ ವರ್ಷಗಳಷ್ಟು ಹಳೆಯದಾಗಿದೆ. ಈ ದೇವರ ಗುಡಿಯ ಸಂಪೂರ್ಣವಾಗಿ ಕಲ್ಲಿನಿಂದ ನಿರ್ಮಾಣಗೊಂಡಿದ್ದು, ಗುಡಿಯ ಭಾಗಕ್ಕೆ ಬಿಳಿಯ ಸುಣ್ಣವನ್ನು ಹಚ್ಚಲಾಗಿದೆ. ದೇವಸ್ಥಾನದ ಮುಂಭಾಗದಲ್ಲಿ ಗರುಡ ಗಂಬವನ್ನ ಕಲ್ಲಿನಿಂದ ಕೆತ್ತಲಾಗಿದೆ. ಈ ಗರುಡ ಗಂಭವೂ ಕಟ್ಟೆಯ ಮೇಲೆ ನಿರ್ಮಾಣಗೊಂಡಿದ್ದು ಸಂಪೂರ್ಣವಾಗಿ ಸುಣ್ಣದಿಂದ ಕೂಡಿದೆ.

೩. ಸುಂಕ್ಲಮ್ಮ ಕಟ್ಟೆ

ಇದೊಂದು ಶಾಸ್ತ್ರ ಪಂಥಾಚರಣೆಯ ದೇವಸ್ಥಾನವಾಗಿದ್ದು. ಈ ದೇವಸ್ಥಾನವು ಕಟ್ಟೆಯ ಕಾಲದಲ್ಲಿ ನಿರ್ಮಾಣಗೊಂಡಿದೆ. ಅಲ್ಲದೆ ಅನೇಕ ರೀತಿಯ ಭಕ್ತಿ ಭಾವನೆಗಳ ಈ ದೇವರು ಸಾಕ್ಷಿಯಾಗಿವೆ. ಈ ದೇವರು ಜನರ ಭಾವನೆಗಳಿಗೆ ಸಾಕ್ಷಿಯಾಗಿದೆ.

೪. ದ್ಯಾವಮ್ಮ ದೇವಸ್ಥಾನ

ಈ ದೇವರು ಉಳೇನೂರು ಗ್ರಾಮದ ಆದಿ ದೇವತೆಯಾಗಿದ್ದು ಜನರ ಭಕ್ತಿಗೆ ಪಾತ್ರವಾದದ್ದಾಗಿದೆ. ಈ ದೇವಸ್ಥಾನವು ಸಂಪೂರ್ಣವಾಗಿ ಹೊಸದಾಗಿ ನಿರ್ಮಾಣಗೊಂಡಿದ್ದಾಗಿದೆ. ಅಲ್ಲದೆ ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿದ್ದು ಆಧುನಿಕ ಶೈಲಿಯಲ್ಲಿ ಈ ದೇವಸ್ಥಾನವನ್ನು ನಿರ್ಮಿಸಲಾಗಿದೆ. ಈ ದೇವಸ್ಥಾನವು ಗೋಪುರವನ್ನು ಒಳಗೊಂಡಿದ್ದು ಗುಡಿಯನ್ನು ಹಾಗೂ ಗರ್ಭಗುಡಿಯನ್ನು ಒಳಗೊಂಡಿದೆ. ಗರ್ಭಗುಡಿಯ ಒಳಭಾಗದಲ್ಲಿ ದ್ಯಾವಮ್ಮ ದೇವರ ಮೂರ್ತಿಯು ಹೊಸದಾಗಿ ನವೀಕರಿಸಲಾಗಿದೆ. ಈ ಮೂರ್ತಿಯು ಕಟ್ಟಿಗೆಯಿಂದ ನಿರ್ಮಿಸಲಾಗಿದೆ. ಈ ಮೂರ್ತಿಗೆ ಬೆಳ್ಳಿಯ ಕಿರೀಟ ಆಹಾರಗಳನ್ನು ಹಾಕಲಾಗಿದೆ ಮತ್ತು ಬೆಳ್ಳಿಯಿಂದ ನಿರ್ಮಿಸಿದ ಸಿಂಹದ ಮೇಲೆ ಕುಳಿತ ದ್ಯಾವಮ್ಮ ದೇವಿ ಶಿಲ್ಪವನ್ನು ಸಂಪೂರ್ಣವಾಗಿ ಬೆಳ್ಳಿಯಿಂದ ಮಾಡಲಾಗಿದೆ.

ಜಾತ್ರೆ

ಈ ದೇವಿಯ ಜಾತ್ರೆಯು ತುಂಬಾ ವಿಶೇಷವಾಗಿದ್ದು, ಜಾತ್ರೆಯೂ ೫ ವರ್ಷ ಅಥವಾ ೧೨ ವರ್ಷಗಳಿಗೊಮ್ಮೆ ತುಂಬಾ ವಿಜೃಂಭಣೆಯಿಂದ ಮಾಡುತ್ತಾರೆ. ಈ ಜಾತ್ರೆಯಲ್ಲಿ ಪ್ರಾಣಿಗಳ

ಬಲಿದಾನ ನಡೆಯುತ್ತವೆ. ದೇವಿಯ ನೈವೇದ್ಯದ ರೂಪದಲ್ಲಿ ಪ್ರಾಣಿಗಳನ್ನು ಬಲಿಕೊಡುವ ಸಂಪ್ರದಾಯವಿದೆ.[೬]

ಬೆನ್ನೂರು

೧. ಕೆಂಚಮ್ಮ ಗುಡಿ

ಕೆಂಚಮ್ಮ ದೇವರ ಗುಡಿಯು ತೀರ ಹಿಂದಿನ ಕಾಲದ್ದು ಸುಮಾರು ೧೦೦ ವರ್ಷದಷ್ಟು ಹಳೆಯದೆಂದು ಊಹಿಸಬಹುದಾಗಿದೆ. ಈ ಗುಡಿಯು ಗ್ರಾಮದ ಮಧ್ಯದಲ್ಲಿದ್ದು ಪೂರ್ವಾಭಿಮುಖವಾಗಿ ಪ್ರತಿಷ್ಠಾಪನೆಗೊಂಡಿದೆ. ಅಲ್ಲದೆ ದೇವರ ಗುಡಿಯು ಕಲ್ಲಿನಿಂದ ನಿರ್ಮಾಣವಾಗಿದ್ದು, ಗೋಪುರ ಮತ್ತು ಗರ್ಭಗುಡಿಯನ್ನು ಒಳಗೊಂಡಿದೆ. ಒಳಗಡೆ ಮೂರ್ತಿಯು ಕಲ್ಲಿನ ಮೂರ್ತಿಶಿಲ್ಪ ಉತ್ತಮ ರೂಪದಲ್ಲಿದ್ದು ಚಿಕ್ಕ ಚಿಕ್ಕ ವಿಗ್ರಹಗಳನ್ನು ಪಕ್ಕದಲ್ಲಿ ಒಂದು ಮಣ್ಣಿನ ಬಿಂದಿಗೆಗೆ ಪೂಜಿಸಿರುವುದನ್ನು ದೇವಸ್ಥಾನದಲ್ಲಿ ನೋಡಬಹುದು. ಭಕ್ತರ ದರ್ಶನಕ್ಕೆ ಲಭ್ಯವಿದೆ. ಹೊರಗಡೆ ಕಟ್ಟೆಯನ್ನು ಒಳಗೊಂಡಿದೆ.

೨. ಬೀರಲಿಂಗೇಶ್ವರ ದೇವಸ್ಥಾನ

ಬೀರಲಿಂಗೇಶ್ವರ ದೇವಸ್ಥಾನವು ೧೫೦ ವರ್ಷಗಳಷ್ಟು ಹಳೆಯದಾಗಿದ್ದು ,ಇಲ್ಲಿನ ಜನರ ಧಾರ್ಮಿಕ ಭಾವನೆಗಳಿಗೆ ಸಾಕ್ಷಿಯಾಗಿದೆ. ಅಲ್ಲದೆ ಈ ದೇವಸ್ಥಾನವು ಕಲ್ಲಿನ ರೂಪದಲ್ಲಿದ್ದು ಗೋಪುರ ಮತ್ತು ಗರ್ಭಗುಡಿಯನ್ನು ಒಳಗೊಂಡಿದೆ. ಒಳ ಭಾಗದಲ್ಲಿ ಕಲ್ಲಿನ ಮೂರ್ತಿಯನ್ನು ಹೊಂದಿದೆ. ಈ ಕಲ್ಲಿನ ಮೂರ್ತಿ ಶಿಲ್ಪವು ರೂಪದ ಶೈಲಿಯಲ್ಲಿದೆ. ಹಬ್ಬ ಹರಿದಿನಗಳಲ್ಲಿ ದೇವರಿಗೆ ವಿಶೇಷ ಪೂಜೆಯನ್ನು ಸಲ್ಲಿಸಲಾಗಿದೆ.

ಜಾತ್ರೆ

ಬೀರಲಿಂಗೇಶ್ವರ ದೇವರ ಜಾತ್ರೆಯು ಭಾರತ ಹುಣ್ಣಿಮೆಯ ದಿವಸದಂದು ಈ ದೇವರ ಜಾತ್ರೆಯು ತುಂಬಾ ವಿಜೃಂಭಣೆಯಿಂದ ಜರುಗುತ್ತದೆ. ಜಾತ್ರೆಯ ಸಮಯದಲ್ಲಿ ಈ ದೇವರ ಗುಡಿಗೆ ವಿಶೇಷ ರೀತಿಯ ಅಲಂಕಾರ ಮತ್ತು ಮೂರ್ತಿಶಿಲ್ಪಕ್ಕೆ ಪೂಜೆ-ಮನಸ್ಕಾರ, ಅಭಿಷೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಹಾಗೂ ಗ್ರಾಮದ ಭಕ್ತರು ಈ ದೇವಾಲಯಕ್ಕೆ ವಿಶೇಷ ರೀತಿಯಲ್ಲಿ ಹರಕೆಗಳನ್ನು ಮತ್ತು ಬೇಡಿಕೆಗಳನ್ನು ಈಡೇರಿಸುವಂತೆ ಕೇಳಿಕೊಳ್ಳುತ್ತಾರೆ. ಅವುಗಳು ಯಶಸ್ವಿಯಾಗಿವೆ ಎನ್ನುವುದು ಭಕ್ತರ ಅಭಿಪ್ರಾಯವಾಗಿದೆ. ವಿಶಿಷ್ಟ ರೀತಿಯಲ್ಲಿ ಪ್ರದಕ್ಷಿಣೆಗಳು ಮತ್ತು ಸಾಷ್ಟಾಂಗ ನಮಸ್ಕಾರಗಳನ್ನು ತಮ್ಮ ಭಕ್ತಿಗೆ ಅನುಗುಣವಾಗಿ ಸಲ್ಲಿಸುತ್ತಾರೆ.

೩. ಮಾರೆಮ್ಮನ ಗುಡಿ

ಮಾರೆಮ್ಮ ದೇವಸ್ಥಾನವು ಊರಿನ ಒಳಭಾಗದಲ್ಲಿದ್ದು, ಹಲವು ವಿಶೇಷಗಳನ್ನು ಒಳಗೊಂಡಿದೆ. ಹಾಗೂ ಈ ದೇವಸ್ಥಾನವು ಸುಮಾರು ನೂರು ವರ್ಷಗಳಷ್ಟು ಹಳೆಯದೆಂದು ಊಹಿಸಲಾಗಿದೆ.

ಈ ದೇವಸ್ಥಾನವು ಗುಡಿ ಮತ್ತು ಗೊಪುರಗಳನ್ನು ಒಳಗೊಂಡಿದೆ. ಗರ್ಭಗುಡಿಯನ್ನು ಒಳಗೊಂಡಿದ್ದು, ಮೂರ್ತಿಶಿಲ್ಪವು ಕಲ್ಲಿನ ರೂಪವನ್ನು ಪಡೆದುಕೊಂಡಿದೆ. ಕೆಲವು ಹಬ್ಬ-ಉತ್ಸವ ದಿನಗಳಂದು ವಿಶೇಷ ರೀತಿಯಾಗಿ ಅಲಂಕಾರ ಮಾಡಿ ದೇವರಿಗೆ ಪೂಜೆ ಸಲ್ಲಿಸಲಾಗುತ್ತದೆ.

೪. ಹನುಮದೇವರ ಗುಡಿ

ಈ ದೇವರ ಗುಡಿಯು ಸುಮಾರು ೯೦ ವರ್ಷಗಳಷ್ಟು ಹಳೆಯದೆಂದು ಊಹಿಸಲಾಗಿದೆ. ಈ ದೇವಸ್ಥಾನವು ಉತ್ತರಾಭಿಮುಖವಾಗಿ ಪ್ರತಿಷ್ಠಾಪನೆಗೊಂಡಿದ್ದು, ಈ ಗುಡಿಯು ಸಂಪೂರ್ಣ ಕಲ್ಲಿನಿಂದ ನಿರ್ಮಾಣವಾಗಿದೆ. ಈ ಗುಡಿಯು ಆಧುನಿಕ ರೂಪವನ್ನು ಪಡೆದುಕೊಂಡಿದೆ. ಈ ದೇವಸ್ಥಾನವು ಗರ್ಭಗುಡಿ ಮತ್ತು ಗೋಪುರವನ್ನು ಒಳಗೊಂಡಿದೆ. ಗರ್ಭಗುಡಿಯ ಒಳಗಡೆ ಮೂರ್ತಿಯು ಕಲ್ಲಿನ ಹನುಮಂತದೇವರು ನಿಂತಿರುವ ಸ್ಥಿತಿಯನ್ನು ಒಳಗೊಂಡ ಮೂರ್ತಿ ಇದಾಗಿದೆ. ಈ ದೇವರ ಕಾರ್ಯಕ್ರಮವು ವಿಶೇಷ ದಿನಗಳಲ್ಲಿ ಅಂದರೆ, ಕಾರ್ತಿಕ ಮಾಸ, ಶ್ರಾವಣ ಮಾಸ, ಶಿರಾತ್ರಿ, ಸಂಕ್ರಮಣ ಹೀಗೆ ಈ ಹಬ್ಬಗಳಲ್ಲಿ ವಿಶೇಷ ಆಕರ್ಷಕ ರೀತಿಯಲ್ಲಿ ಪೂಜೆ-ಮುನಸ್ಕಾರಗಳನ್ನು ಮಾಡಲಾಗುತ್ತದೆ.

೫. ಕಲ್ಲೇಶ್ವರ ಗುಡಿ

ಕಲ್ಲೇಶ್ವರ ದೇವಸ್ಥಾನವು ಬೆನ್ನೂರು ಗ್ರಾಮದ ಜನರ ಆರಾಧ್ಯ ದೈವವಾಗಿದೆ. ಈ ದೇವಸ್ಥಾನವು ಊರಿನ ಮಧ್ಯಭಾಗದಲ್ಲಿದ್ದು, ಉತ್ತರಾಭಿಮುಖವಾಗಿ ನಿರ್ಮಾಣಗೊಂಡಿದೆ. ಇದು ಸುಮಾರು ೫೦ಂಸು ಶತಮಾನದಷ್ಟು ಹಳೆಯದಾಗಿದೆ ಡಂದು ಊಹಿಸಬಹುದಾಗಿದೆ. ಅಲ್ಲದೆ ಈ ದೇವರು ಸಂಪೂರ್ಣವಾಗಿ ಕಲ್ಲಿನಿಂದ ನಿರ್ಮಾಣವಾಗಿದ್ದು, ಗರ್ಭಗುಡಿ ಮತ್ತು ಕಲ್ಲಿನ ಗೋಪುರವನ್ನು ಒಳಗೊಂಡಿದೆ. ಪ್ರತಿವರ್ಷ ಈ ದೇವರಿಗೆ ಸೇವೆಯನ್ನು ಭಕ್ತಿಯಿಂದ ಹಲವು ರೀತಿಯಲ್ಲಿ ಮಾಡಲಾಗುತ್ತದೆ.

ಜಾತ್ರೆ

ಕಲ್ಲೇಶ್ವರ ದೇವರಿಗೆ ಪ್ರತಿವರ್ಷ ಮಾರ್ಚ್ ತಿಂಗಳಿನಲ್ಲಿ ಜಾತ್ರೆ ನಡೆಸಲಾಗುತ್ತದೆ. ಸ್ಥಳೀಯರು ಪುರಾಣ, ಮಂಗಳಾರತಿ ಮತ್ತು ಸಾಮೂಹಿಕ ವಿವಾಹಗಳನ್ನು ಮಾಡಿ ಈ ದೇವರ ಕೃಪೆಗೆ ಪಾತ್ರರಾಗುತ್ತಾರೆ. ಗ್ರಾಮದ ಜನರಿಂದ ಜಾತ್ರೆಯಲ್ಲಿ ವಿಶೇಷ ರೀತಿಯ ಕಾರ್ಯಕ್ರಮಗಳನ್ನು

ಹಮ್ಮಿಕೊಳ್ಳಲಾಗುತ್ತದೆ. ಜಾತ್ರೆಯ ವಿಶೇಷವಾಗಿ ಮಂಗಳಾರತಿ, ಅಭಿಷೇಕ ಮತ್ತಿತರ ಮುಂತಾದ ಪೂಜಾಕಾರ್ಯಗಳನ್ನು ಭಕ್ತರು ಮಾಡುತ್ತಾರೆ. ಈ ದೇವರಿಗೆ ಬೇಡಿಕೆಗಳು, ಹರಕೆಗಳು, ಸಾಂಪ್ರದಾಯಿಕ, ಧಾರ್ಮಿಕ ಈ ರೀತಿಯ ಕಾರ್ಯಕ್ರಮಗಳನ್ನು ಮತ್ತು ಆಚರಣೆಗಳನ್ನು ಹಲವು ರೀತಿಯಲ್ಲಿ ಭಕ್ತರೆಲ್ಲ ಸೇರಿ ಈ ಜಾತ್ರೆಯನ್ನು ಯಶಸ್ವಿಯಾಗಿ ನಡೆಸುತ್ತಾರೆ ಎಂದು ಹೇಳಬಹುದು.

ವೀರಗಲ್ಲುಗಳು

ಕರ್ನಾಟಕದಲ್ಲಿ ವೀರಗಲ್ಲುಗಳು ಮಹಾಸತಿಗಲ್ಲುಗಳು ಹಾಗೆಯೇ ನಿಶಿಧಿಕಲ್ಲುಗಳಿಗೆ ಕೊರತೆಯೇನಿಲ್ಲ. ಇದು ಕರ್ನಾಟಕ ಚರಿತ್ರೆಯ ವಿಶೇಷವೂ ಹೌದು. ಕನ್ನಡನಾಡಿನ ಜನರು ಸಾಮಾನ್ಯವಾಗಿ ಶುರರಾಗಿದ್ದಿರಬೇಕೆಉ. ನಾಡಿನ ಇತಿಹಾಸವು ಇದಕ್ಕೆ ಸ್ಪಷ್ಟವಾದ ಸಾಕ್ಷಿಯಾಗಿದೆ. ಅದು ಆ ಕಾರಣದಿಂದಲೇ ವೀರಗಲ್ಲುಗಳನ್ನು ಕರ್ನಾಟಕದಾದ್ಯಂತ ಕಾಣುತ್ತೇವೆ. ವೀರಗಲ್ಲುಗಳ ಜೊತೆ ಮಾಸ್ತ ಅಥವಾ ಮಹಾಸತಿ ಕಲ್ಲುಗಳು ಅಂದರೆ, ಮೃತ್ಯುವಶನಾದ ಪತಿಯನ್ನು ಹಿಂಬಾಲಿಸಿ ಸಹಗಮನ ಮಾಡಿದ ಮಹಾಸತಿಯರ ಸ್ಮಾರಕಕ್ಕಾಗಿ ನಿಲ್ಲಿಸಿದ ಕಲ್ಲುಗಳಿವು. ಊರಿನ ಹಿತಕ್ಕಾಗಿಯೋ, ದುಷ್ಟ ಶಿಕ್ಷೆಗಾಗಿಯೋ, ಸ್ವಾಮಿನಿಷ್ಠೆಯಿಂದಲೋ ಹೋರಾಡಿ ಮಡಿದ ವೀರಪುರುಷರ ಸ್ಮಾರಕಕ್ಕಾಗಿ ರಚಿತವಾದ ಶಾಸನವುಳ್ಳವು ಈ ವೀರಗಲ್ಲುಗಳು.

ಈ ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು ವಿಶಿಷ್ಟ ಬಗೆಯ ಸ್ಮಾರಕಗಳು. ವೀರಗಲ್ಲುಗಳಲ್ಲಿ ಕಲ್ಲಿನ ಮೇಲಿರುವ ಶಿಲ್ಪವು ಪರಾಕ್ರಮದ ಸಂಕೇತದಂತೆ ತೋರುತ್ತದೆ. ಹೋರಾಟ ನಡೆದು ಅದರಲ್ಲಿ ನಾಯಕನು ಬಿದ್ದಂತೆಯೂ ಸ್ವರ್ಗದಿಂದ ಅಪ್ಸರೆಯರು ಬಂದು ಅವನನ್ನು ವಿಮಾನದಲ್ಲಿಟ್ಟು ಕೊಂಡೊಯ್ಯುತ್ತಿರುವಂತೆಯೂ ಇರುವ ಶಿಲ್ಪದಿಂದ ವೀರಗಲ್ಲುಗಳು ಅಲಂಕೃತವಾಗಿರುತ್ತವೆ. ಅನಂತರ ಅದರ ಕೆಳಗೆ ಶಾಸನವಿರುತ್ತದೆ. ಇದು ಸಾಮಾನ್ಯವಾಗಿ ವೀರಗಲ್ಲುಗಳ ಸಾಮಾನ್ಯರೂಪ. ಸಾಮಾನ್ಯ ಗದ್ಯದ ನೇರನಿರೂಪಣೆಯಲ್ಲಿರುವ ವೀರಗಲ್ಲುಗಳೇ ಹೆಚ್ಚು. ಇವುಗಳಲ್ಲಿ ಸಾಮಂತ ರಾಜನ ಅಥವಾ ಚಕ್ರವರ್ತಿಯ ನಾಮನಿರ್ದೇಶನ ಮತ್ತು ಶಾಸನ ರಚಿತವಾದ ಕಾಲ ಮೊದಲು ಬರುತ್ತದೆ. ಅನಂತರ ವೀರಗಲ್ಲಿನ ನಾಯಕ ಎದುರಿಸಬೇಕಾಗಿ ಬಂದ ಹೋರಾಟದ ಸ್ವರೂಪವನ್ನು ಮತ್ತು ಅವನು ಅದನ್ನು ಎದುರಿಸಿ ಸುರಲೋಕ ಪ್ರಾಪ್ತಿಯಾದ ಬಗ್ಗೆ ನಿರೂಪಣೆ ಇರುತ್ತದೆ.

ಸಿದ್ದಾಪುರದಲ್ಲಿ ಮೂರು ವೀರಗಲ್ಲುಗಳು ಕಂಡುಬಂದಿದ್ದು, ಅದರಲ್ಲಿ ಮೊದಲನೆಯದು ವೆಂಕಟೇಶ್ವರ ದೇವಾಲಯದ ಪ್ರಾಂಗಣದಲ್ಲಿದೆ. ಯುದ್ಧದಲ್ಲಿಯೋ ಅಥವಾ ಗ್ರಾಮದ ರಕ್ಷಣೆಗಾಗಿ ನಡೆದ ಕಾಳಗದಲ್ಲೋ ವೀರಾವೇಷದಿಂದ ಹೋರಾಡಿ ಮಡಿದ ವೀರನ ನೆನಪಿಗಾಗಿ ಈ ವೀರಗಲ್ಲು ಮೂರ್ತಿಶಿಲ್ಪವನ್ನು ಹಾಕಿಸಲಾಗಿದೆ. ಶಿಲ್ಪದ ಕೆಳಭಾಗದಲ್ಲಿ ವೀರನು ಖಡ್ಗ ಹಿಡಿದು ಹೋರಾಡುತ್ತಿರುವ ದೃಶ್ಯವಿದೆ. ಮಧ್ಯಭಾಗದಲ್ಲಿ ಯುದ್ಧದಲ್ಲಿ ಮಡಿದ ವೀರನನ್ನು (ಆತ್ಮವನ್ನು)

ಇಬ್ಬರು ದೇವಕನ್ಯೆಯರು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯವಿದೆ. ಮೇಲಿನ ಭಾಗದಲ್ಲಿ ವೀರನು ಸ್ವರ್ಗಲೋಕದಲ್ಲಿ ಶಿವಸಾನಿಧ್ಯದಲ್ಲಿ ಇರುವ ದೃಶ್ಯವಿದೆ. ಶಿಲ್ಪದ ಲಕ್ಷಣಗಳಿಂದ ಇದು ೧೬ ನೇ ಶತಮಾನದ್ದು, ಉಳಿದೆರಡು ವಿರಗಲ್ಲುಗಳು ಹಳ್ಳದ ಬಳಿ ಗಂಗಾವತಿ ರಸ್ತೆಯ ಬಲಬದಿಯಲ್ಲಿವೆ. ಮೊದಲನೆಯದು ವೀರನಮಾಸ್ತಿಗಲ್ಲು (೨.೬ X ೧.೧೦ ಫೀಟ್) ಬಿಳಿ ಕಣಶಿಲೆಯದ್ದು. ಇದರಲ್ಲಿ ವೀರನು ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ಡಾಲನ್ನು ಹಿಡಿದು ನಿಂತಿದ್ದಾನೆ. ಅವನ ಬಲಭಾಗದಲ್ಲಿ ಸತಿಯ ಚಿತ್ರವಿದೆ. ಯುದ್ಧದಲ್ಲಿ ವೀರನು ಮಡಿದ ಸುದ್ದಿಯನ್ನು ಕೇಳಿ ಅವನ ಮಡದಿ ಗಂಡನ ಶವದೊಡನೆ ಚಿತೆಯೇರಿ ಸತ್ತು ಹೋಗಿದ್ದಾಳೆ. ಹಾಗಾಗಿ ವೀರ ಹಾಗೂ ಸತಿಯರ ನೆನಪಿಗಾಗಿ ಹಾಕಿಸಿದ ವಿರಮಾಸ್ತಿಗಲ್ಲು ಇದು. ಈ ಶಿಲ್ಪದ ಬಳಿ ಮತ್ತೊಂದು ವೀರಗಲ್ಲಿದೆ (೨.೮ X ೨.೬ ಫೀಟ್). ಇದರಲ್ಲಿ ಖಡ್ಗ, ಡಾಲು ಹಿಡಿದು ನಿಂತ ವೀರನೊಬ್ಬನ ಚಿತ್ರವಿದೆ. ಇದೂ ಕೂಡ ಯುದ್ಧದಲ್ಲಿ ಮಡಿದ ವೀನೊಬ್ಬನ ಮಡಿದ ನೆನಪಿಗಾಗಿ ಹಾಕಿಸಿದ್ದು, ಇಲ್ಲಿಯ ವೀರರ ವೇಷಭೂಷಣಗಳು ಆಯಾ ಕಾಲದಲ್ಲಿ ರೂಢಿಯಲ್ಲಿದ್ದ ಪದ್ಧತಿಯನ್ನು ಪ್ರತಿಬಿಂಬಿಸುತ್ತವೆ. ಈ ವೀರಗಲ್ಲುಗಳ ಕಾಲ ೧೬ ನೇ ಶತಮಾನವಾಗಿದೆ.

ಸಿದ್ದಾಪುರ ಗ್ರಾಮವನ್ನು ಒಳಗೊಂಡಂತೆ ಇದರ ಪಕ್ಕದಲ್ಲಿ ಇರುವ ಇತರ ಕೆಲ ಗ್ರಾಮಗಳಲ್ಲಿಯೂ ಕೂಡ ವೀರಗಲ್ಲುಗಳ ಇರುವಿಕೆಯನ್ನು ಕಾಣಬಹುದು. ಅದರಲ್ಲಿ ಬರಗೂರು ಗ್ರಾಮವೂ ಒಂದು.

ಬರಗೂರು ಗ್ರಾಮದಲ್ಲಿ ವಿಶ್ವಕರ್ಮರ ಮನೆಯ ಹತ್ತಿರ ಒಂದು ವೀರಗಲ್ಲು ಕಂಡುಬಂದಿದೆ. ಇದನ್ನು ಬಿಳಿಕಣಶಿಲೆಯಿಂದ ತುಂಬಾ ಒರಟಾಗಿ ಕೆತ್ತಲಾಗಿದೆ. ಈ ಶಿಲ್ಪದ ಮೇಲ್ಭಾಗದಲ್ಲಿ ಬಿಲ್ಲು ಹಿಡಿದು ನಿಂತ ಮೂರು ಜನ ವೀರರು ಹಾಗೂ ಕೆಳಭಾಗದ ಮಧ್ಯದಲ್ಲಿ ಡಾಲು ಹಿಡಿದು ವೀರನೊಂದಿಗೆ ಅವನ ಎರಡೂ ಬದಿಯಲ್ಲಿರುವ ಇಬ್ಬರು ಭರ್ಜಿ ಹಿಡಿದು ಹೋರಾಡುತ್ತಿರುವ ದೃಶ್ಯದ ಶಿಲ್ಪಗಳಿವೆ. ಇದರಿಂದ ಇದು ಯುದ್ಧದಲ್ಲಿ ಶತೃಗಳೊಂದಿಗೆ ಅಥವಾ ಗ್ರಾಮದ ಮೇಲೆ ದಾಳಿ ಮಾಡಿದ ಕಳ್ಳರೊಂದಿಗೆ ಕಾದಾಡಿ ಮಡಿದ ಗ್ರಾಮದ ವೀರನೊಬ್ಬನ ಸ್ಮರಣಾರ್ಥ ಹಾಕಿಸಿದ ವೀರಗಲ್ಲು ಇದಾಗಿದೆ. ಶಿಲ್ಪಗಳ ಲಕ್ಷಗಳ ಆಧಾರದ ಮೇಲೆ ಇದು ೧೭ ನೇ ಶತಮಾನಕ್ಕೆ ಸೇರುತ್ತದೆಂದು ಹೇಳಬಹುದಾಗಿದೆ.[೬]

ಶಾಸನಗಳು

ಕೊಪ್ಪಳ ಪರಿಸರದಲ್ಲಿ ಸುಮಾರು ೨೦೦ ಶಾಸನಗಳನ್ನು ಈವರೆಗೆ ವಿದ್ವಾಂಸರು ಪತ್ತೆಹಚ್ಚಿದ್ದಾರೆ. ಸ್ವತಂತ್ರ ಪೂರ್ವದಲ್ಲಿ ಕೊಪ್ಪಳವು ಜಿಲ್ಲಾ ಕೇಂದ್ರವಾಗಿತ್ತು. ನಂತರ ಕೊಪ್ಪಳವು ರಾಯಚೂರು ಜಿಲಲೆಯ ಒಂದು ತಾಲೂಕು ಕೇಂದ್ರವಾಯಿತು. ೧೯೯೮ ರ ಕರ್ನಾಟಕ ಜಿಲ್ಲಾ ಮರುವಿಂಗಡಣಾ ಸಂದರ್ಭದಲ್ಲಿ ಕೊಪ್ಪಳವು ಮತ್ತೆ ಜಿಲ್ಲಾ ಕೇಂದ್ರವಾಗಿ ಪರಿವರ್ತನೆಯಾಯಿತು.

ಇಂದು ಈ ಜಿಲ್ಲೆಯಲ್ಲಿ ಕೊಪ್ಪಳ, ಗಂಗಾವತಿ, ಯಲಬುರ್ಗಾ, ಕುಷ್ಟಗಿ, ಕಾರಟಗಿ ಮತ್ತು ಕನಕಗಿರಿ ಸೇರಿ ಒಟ್ಟು ಆರು ತಾಲೂಕುಗಳಿವೆ. ತುಂಗಭದ್ರಾ ಆಣೆಕಟ್ಟು ಕಟ್ಟಿದ ಮೇಲೆ ಗಂಗಾವತಿ ತಾಲೂಕಿನ ಬಹುತೇಕ ಪ್ರದೇಶವು ನೀರಾವರಿ ಪ್ರದೇಶವಾಗಿದೆ. ಇದಕ್ಕೂ ಮೊದಲು ಹುಲಗಿ ಬಳಿಯ ತುಂಗಭದ್ರ ನದಿಯ ಸೀಳುನಾಲೆ ಮತ್ತು ಸಣಾಪುರದ ಪ್ರಾಚೀನ ನಾಲೆಗಳು ಕೃಷಿಗೆ ನೆರವಾಗುತ್ತಿದ್ದವು. ಉಳಿದಂತಿರುವ ಬಯಲು ಭೂಮಿ ಒಣಪ್ರದೇಶವಾಗಿರುವುದರಿಂದ ಪ್ರಾಚೀನ ಕಾಲಘಟ್ಟದಿಂದಲೂ ಇಲ್ಲಿ ಜನವಸತಿ ಕಡಿಮೆ ಇತ್ತು. ಆ ಕಾರಣಕ್ಕಾಗಿ ಶಾಸನಗಳು, ಸ್ಮಾರಕಗಳು, ಇನ್ನಿತರ ಚರಿತ್ರೆಯ ಅವಶೇಷಗಳು ಉಳಿದಿರುವುದು ತಿಳಿದುಬರುತ್ತದೆ.

ಜಿಲ್ಲಾ ಕೇಂದ್ರವಾದ ಇಲ್ಲಿನ ಕೊಪ್ಪಳವು ಪೂರ್ವ, ಪಶ್ಚಿಮ, ದಕ್ಷಿಣ ದಿಕ್ಕುಗಳಲ್ಲಿ ಬೆಟ್ಟಗಳಿಂದ ಆವೃತವಾಗಿದೆ. ಇಲ್ಲಿ ಕಟ್ಟಿದ ಕೋಟೆಗಗಳು ಮತ್ತು ಅಗ್ರಹಾರಗಳು ವಾಸಯೋಗ್ಯವಾಗಿ ಬೌದ್ಧಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಆಧ್ಯಾತ್ಮಿಕ ಕೇಂದ್ರಗಳಾಗಲು ನೆರವಾಗಿವೆ. ರಾಜರು ಹೊರಡಿಸಿದ ಆಜ್ಞೆಗಳು, ಅನುಶಾಸನಗಳು ಈ ಪ್ರದೇಶದಲ್ಲಿ ಹೇರಳವಾಗಿ ದೊರೆಯುತ್ತವೆ.

ಶಾಸನಗಳನ್ನು ವಿಭಾಗವಾರು ಹಂಚಿಕೆ ಮಾಡಲಿಕ್ಕೆ ಮತ್ತು ಅವುಗಳನ್ನು ಅಧ್ಯಯನದ ಅನುಕೂಲಕ್ಕಾಗಿ ವಿಂಗಡಿಸಿಕೊಳ್ಳಲು ಐದು ತೆರನಾದ ಶಾಸನಗಳನ್ನು ಕನ್ನಡನಾಡಿನಲ್ಲಿ ಕಾಣಬಹುದು. ಕೊಪ್ಪಳದಲ್ಲಿ ಈ ಐದು ಬಗೆಯ ಶಾಸನಗಳನ್ನು ಕಾಣಬಹುದು. ಅವುಗಳೆಂದರೆ,

೧. ದೇವಸ್ಥಾನದ ದತ್ತಿ ಶಾಸನಗಳು

೨. ವಿದ್ಯಾದಾನದ ಶಾಸನಗಳು

೩. ವೀರಗಲ್ಲು, ಮಾಸ್ತಿಗಲ್ಲು ಮತ್ತು ನಿಷಿಧಿಗಲ್ಲು ಶಾಸನಗಳು

೪. ಧರ್ಮಗುರುಗಳು ಅಥವಾ ವಿಶಿಷ್ಟ ಜನರಿಗೆ ಕೊಟ್ಟ ದಾನಧರ್ಮದ ಶಾಸನಗಳು

೫. ಮೂರ್ತಿಗಳ ಮೇಲಿನ ಶಾಸನಗಳು

ಈ ಐದು ಭಾಗಗಳನ್ನು ನಾವು ನೋಡಿದರೆ ಮುಖ್ಯವಾಗಿ ಮೂರು ಅಂಶಗಳನ್ನು ಇಲ್ಲಿ ಗಮನಿಸಬಹುದು. ದೇವಸ್ಥಾನಕ್ಕಾಗಿಯೋ, ವಿದ್ಯೆಗಾಗಿಯೋ ಅಥವಾ ವಿಶಿಷ್ಟ ವ್ಯಕ್ತಿಗಳಿಗಾಗಿ ಕೊಟ್ಟ ದಾನಶಾಸನಗಳು ಒಂದುಬಗೆಯದು. ಇವು ಧರ್ಮದ ಧರ್ಮದ ದೃಷ್ಟಿಯಿಂದ ಪ್ರೇರಿತವಾದ ಶಾಸನಗಳು. ವೀರಪುರುಷ, ಸ್ಮಾಎಕ ಮೊದಲಾದ ಸ್ಮಾರಕಗಳು ಜನತೆಯ ವೀರಜೀವನವನ್ನು ಪ್ರತಿಬಿಂಬಿಸುವ ಸಂಕೇತಗಳು. ಹೀಗೆ ಪರಾಕ್ರಮ ಮತ್ತು ಧರ್ಮ ಇವೆರಡೂ ಶಾಸನ ಸಂಸ್ಕೃತಿಯ ಎರಡು ಕಣ್ಣುಗಳಂತೆ ಕಂಗೊಳಿಸುತ್ತವೆ.

ಶಾಸನಗಳಿಂದ ಅಂದಿನ ರಾಜಕೀಯ, ಧಾರ್ಮಿಕ, ಸಾಮಾಜಿ, ಸಾಂಸ್ಕೃತಿ ಮತ್ತು ಹಲವು ಬಗೆಯ ಅರಸೊತ್ತಿಗೆಯ ಏಳು-ಬೀಳುಗಳನ್ನು ಅದರ ಹಿನ್ನೆಲೆಯಲ್ಲಿ ರೂಪಿತವಾದ ಜನಜೀವನದ ಸ್ಥಿತಿಗತಿಯನ್ನು, ಕಷ್ಟ-ಸುಖದ ಮೂಲ ಸ್ವರೂಪವ್ನು ತಿಳಿಸುತ್ತವೆ. ವ್ಯಾಪಾರ-ವಾಣಿಜ್ಯ, ರಾಜನ ದಿಗ್ವಿಜಯ ಪರ್ಜೆಗಳ ಅಭಿವದ್ಧಿಯನ್ನು ಕಾಯ್ದುಕೊಂಡು ಬಂದಿರುವುದನ್ನು ಅರಿಯಲು ಸಾಧ್ಯವಾಗುತ್ತದೆ.

ಇತಿಹಾದ ಪುನರ್ ನಿರ್ಮಾಣಕ್ಕೆ ಮತ್ತು ಅಂದಿನ ಸ್ಥಿತಿಗತಿಯನ್ನು ಮುಂದಿನ ಪೀಳಿಗೆಗೆ ತಿಳಿಸುವುದಕ್ಕೆ ಪ್ರಾಥಮಿಕ ಆಕರವಾಗಿರುವುದನ್ನು ನಾವು ಶಾಸನಗಳಿಂದ ತಿಳಿಯಬಹುದು. ಅದರ ಜೊತೆಗೆ ಕನ್ನಡ ಸಾಹಿತ್ಯ ಕಲಾಕೃತಿಗಳು, ನಾಣ್ಯಗಳು, ಪರದೇಶದ ಯಾತ್ರಿಕ ವರದಿಗಳು, ಭೂಮಿಯ ಅಗೆತದಿಂದ ಹೊರಬಿದ್ದ ಅಂಶಗಳು ಇವೆಲ್ಲವೂ ಸಹಾಯಕವಾದರೂ ಕರ್ನಾಟಕ ರಾಜಕೀಯ ಮತ್ತು ಸಾಮಾಜಿಕ ಪರಂಪರೆಯನ್ನು ತಿಳಿಯುವಂಥದ್ದು. ಮುಖ್ಯವಾಗಿ ಶಾಸನಗಳಿಂದಲೇ ಇತರ ಆಧಾರಗಳನ್ನು ತುಂಬಿಕೊಡಲಾರದ ಕೆಲವು ಅಂಶಗಳನ್ನು ಇಲ್ಲಿನ ಶಾಸನ ಸಂಪತ್ತು ಒದಗಿಸಿಕೊಟ್ಟಿತು.

ಶಾಸನ – ೧

ಕಪ್ಪು ಕಲ್ಲಿನ ಶಾಸನವು ನೂರರಿಂದ ಎರಡುನೂರು ಕಾಲದ ಪೂರ್ವದ್ದಾಗಿದೆ ಎಂದು ಊಹಿಸಲಾಗಿದೆ. ಅಲ್ಲದೇ ಈ ಶಾಸನದ ಮೇಲೆ ಕೆಲವೊಂದು ಬರಹಗಳಿವೆ. ಇವುಗಳು ವಿಜಯನಗರ ಶೈಲಿಯನ್ನು ಹೊಂದಿವೆ. ಇದು ಊರ ಒಳಗಿನ ಗ್ರಾಮದ ಹಿಂಭಾಗದಲ್ಲಿ ಕಂಡುಬರುತ್ತದೆ. ಆದರೆ ಈ ಶಾಸನವು ದೇವರ ಸ್ವರೂಪವೆಂದು ನಂಬಿ ಭಕ್ತಿಯಾಧಾರಿತವಾಗಿ ಅದರ ಮೇಲೆ ಎಣ್ಣೆಯನ್ನು ಸುರಿದು ಪೂಜೆಯನ್ನು ಮಾಡುತ್ತಾ ಬಂದಿದ್ದಾರೆ.

ಶಾಸನ – ೨

ಈ ಬಿಳಿಯ ಕಲ್ಲಿನ ಶಾಸನವು ಗ್ರಾಮದ ಹಳೆ ಭಾಗದಲ್ಲಿದ್ದು, ಕೆಲವು ಶಾಸನ ಮತ್ತು ಮೂರ್ತಿಶಿಲ್ಪಗಳ:ನ್ನು ಒಳಗೊಂಡಿದೆ. ಈ ಶಾಸನವು ಸುಮಾರು ೨೦೦ ವರ್ಷಗಳಷ್ಟು ಹಳೆಯದೆಂದು ಊಹಿಸಲಾಗಿದೆ. ಅಲ್ಲದೇ ಈ ಶಾಸನದ ಮೇಲೆ ಅಕ್ಷರಗಳ ಮತ್ತು ನಾಗರಹಾವಿನ ಚಿತ್ರವನ್ನು ಈ ಕಲ್ಲಿನ ಶಾಸನವು ಸುಣ್ಣದ ಬಣ್ಣವನ್ನು ಹೊಂದಿದೆ.

ಸಿದ್ದಾಪುರ ಗ್ರಾಮದಲ್ಲಿ ಮೇಲಿನ ಎರಡು ಶಾಸನಗಳು ದೊರೆತಂತೆ ಪಕ್ಕದ ಗ್ರಾಮಗಳಲ್ಲಿಯೂ ಕೆಲ ಶಿಲಾಶಾಸನಗಳು ದೊರೆತಿರುವುದು ಅಧ್ಯಯನದಿಂದ ಕಂಡುಬಂದ ವಿಷಯವಾಗಿದೆ. ಅದರಲ್ಲಿ ನ ಪ್ರಮುಖವಾದವುಗಳು ಈ ಕೆಳಕಂಡಂತಿವೆ.

ಬರಗೂರು ಗ್ರಾಮದ ಮರಿಯಮ್ಮ ದೇವಾಲಯದ ಹತ್ತಿರ ನೆಲದಲ್ಲಿ ಹೂತಿರುವ ಒಂದು ಶಿಲಾಶಾಸನ ಕಂಡುಬರುತ್ತದೆ. ಇದನ್ನು ಕೆಂಪುಕಣಶಿಲೆಯಿಂದ ಕೆತ್ತಲಾಗಿದ್ದು, ೬ ಸಾಲುಗಳಿಂದ ಕೂಡಿದೆ. ಅದರ ಪಾಠ ಇಂತಿದೆ.

ಶ್ರೀ ವಿರೂಪಾಕ್ಷ ಶ್ರೀ ಮತುಪ್ರಮಾ

ಡಿತ ಸಂವತ್ಸರ ಮಾರ್ಗಶಿರಸು

ಧ ಪಂಚಮೆಯಲು ಬರಗೂರ ಗೌಡ

ಶಾನುಭೋಗರು ಪಂಡಿತಾರಾಧ್ಯ ಶಿವಪ್ಪ

ದೇವರಿಗೆ ವಿಭೂತಿ ಮೊದಲಾಗಿ ಶರಣು

ಮಾಡಿದ ಮಠ ಮಾನ್ಯ

ಈ ರೀತಿಯಲ್ಲಿ ಆಧುನಿಕ ಕಾಲದ ಅಧ್ಯಯನದ ಮೂಲಕ ವೈಶಿಷ್ಟ್ಯತೆಯನ್ನು ತಿಳಿಯಲಾಗಿದೆ. ಅಂದರೆ ಪ್ರಮಾಡಿತ ಸಂವತ್ಸರದ ಮಾರ್ಗಶಿರ ಶುದ್ಧ ಪಂಚಮಿಯಲ್ಲಿ ಬರಗೂರ ಗ್ರಾಮದ ಗೌಡ ಮತ್ತು ಶಾನುಭೋಗರು ಸ್ವಾಮಿಗಳಾದ ಪಂಡಿತಾರಾಧ್ಯ ಶಿವಪ್ಪ ದೇವರಿಗೆ ಮಠವನ್ನು ದಾನಗೈಯ್ಯುತ್ತಾರೆ. ಶಾಸನದ ಕೆಳಗೆ ಮಧ್ಯಭಾಗದಲ್ಲಿ ಈಶ್ವರ ಹಾಗೂ ಅದರ ಎರಡೂ ಬದಿಯ ಮೇಲ್ಭಾಗದಲ್ಲಿ ಚಂದ್ರ, ಸೂರ್ಯ, ರೇಖಾಚಿತ್ರಗಳಿವೆ. ಈ ಶಾಸನದಲ್ಲಿ ವರ್ಷದ ಉಲ್ಲೇಖವಿಲ್ಲ. ಇದೇ ರೀತಿಯ ಶಾಸನಗಳು ಪಕ್ಕದ ಉಳೇನೂರು, ಅಯೋಧ್ಯೆ, ಮುಷ್ಟೂರು ಗ್ರಾಮಗಳಲ್ಲಿವೆ. ಉಳೇನೂರು ಶಾಸನ ಶ್ರೀ ಬಸವಲಿಂಗಾಯ ನಮಃಎಂದು ಪ್ರಾರಂಭಿಸಿದ್ದ ಮಲ್ಲಿಕಾರ್ಜುನ ಒಡೆಯ ಪುರ ಮಾನ್ಯವ್ವನು ಶಾಸನವು ಚೆನ್ನಮಲ್ಲಿಕಾರ್ಜುನ ಒಡೆಯರಿಗೆ ಸಲ್ಲಿಸಿದ ದಾನದ ಬಗ್ಗೆ ಮುಷ್ಟೂರು ಶಾಸನವು ಶ್ರೀ ವಿಠ್ಠಲ ದೇವರ ಅಮೃತ ಪಡಿಗೆ ಸಲ್ಲುವ ಮುಷ್ಟೂರು, ಕುಂಟೋಜಿ ಗ್ರಾಮ ಎಂದು ಉಲ್ಲೇಖಿಸುತ್ತದೆ.[೯]

೩.೩ ಸ್ಮಾರಕಗಳು

ಪುಷ್ಕರಣಿ ಅಥವಾ ಸೊಸೆಯಂದಿರ ಬಾವಿ

ಸಿದ್ಧಪುರ ಗ್ರಾಮದ ಉತ್ತರ ದಿಕ್ಕಿಗೆ ರಾಯಚೂರು ರಸ್ತೆಗೆ ಹೊಂದಿಕೊಂಡಂತೆ ಒಂದು ಪುರಾತನ ಬಾವಿಯಿದೆ. ಬಾವಿಯ ಕಟ್ಟಿದ ಹಾಗೂ ಅದರ್ಲಿರುವ ಶಿಲ್ಪಗಳನ್ನು ಗಮನಿಸಿ ಇದು ವಿಜಯನರ ಸಾಮ್ರಾಜ್ಯದ ಕಾಲದ್ದೆಂದು ಸ್ಪಷ್ಟವಾಗುತ್ತದೆ (೧೫ ನೇ ಶತಮಾನ). ಮದುವೆಯಾದ

ಬಳಿಕ ಗ್ರಾಮಕ್ಕೆ ನಡೆಯಲು ಬರುವ ಸೊಸೆಯಂದಿರು ಮೊದಲಿಗೆ ಈ ಬಾವಿಗೆ ಬಂದು ಗಂಗೆಪೂಜೆ ಮಾಡುತ್ತಿದ್ದರಂತೆ ಅದಕ್ಕಾಗಿ ಇದು ಸೊಸೆಯಂದಿರ ಬಾವಿಯೆಂದು ಕರೆಯುವರು. ಹಾಗೂ ವರ್ಷಪೂರ್ತಿ ನೀರು ತುಂಬಿರುತ್ತಿದ್ದುದರಿಂದ ಸೌಸರಬಾವಿ ಎಂದೂ ಕರೆಯಲಾಗುತ್ತದೆ. ಇದಕ್ಕೆ ಸಪ್ತಬಾವಿಯೆಂದೂ ಹೆಸರಿದೆ. ಚೌಕವಿನ್ಯಾಸದ ಈ ಬಾವಿಯು ತುಂಬಾ ಆಕರ್ಷಕವಾಗಿದೆ. ೨೦ X ೬೦ ಮೀ. ಅಳತೆಯ ಬಾವಿಯ ನಾಲ್ಕೂ ಕಡೆ ಅಳತೆಗಲ್ಲುಗಳಿಂದ ಕಟ್ಟಲಾಗಿದೆ. ಬಾವಿಗೆ ದಕ್ಷಿಣ ಬದಿಯಲ್ಲಿ ಪ್ರವೇಶವಿದ್ದು ೧೫ ಮೆಟ್ಟಿಲುಗಳಿವೆ. ಬಾವಿಯ ಎಡಭಾಗದಲ್ಲಿ ಚಿಕ್ಕ ಮೆಟ್ಟಿಲದಾರಿಯಿದೆ. ನೆಲಮಟ್ಟದಲ್ಲಿ ಬಾವಿಗೆ ಹೊಂದಿಕೊಂಡಂತೆ ಎಡಭಾಗದಲ್ಲಿ ಕಂಬಗಳ ವರಾಂಡವಿದೆ. ಇಲ್ಲಿ ೬ ಕಂಬಗಳಿದ್ದು, ಮಧ್ಯದಲ್ಲಿ ೧೦ ಅಡಿಯ ೭ ಅಂಕಣಗಳಿವೆ. ಈ ವರಾಂಡದ ಎರಡೂ ಬದಿಗೆ ಚಿಕ್ಕ ಕೋಣೆಗಳಿದ್ದು, ಅವುಗಳ ಮೂಲಕ ಬೇರೆಡೆ ತೆರಳಲು ದಾರಿ ಇತ್ತು ಎಂದು ಹೇಳಲಾಗುತ್ತದೆ.

ಬಾವಿಯ ಉತ್ತರ ಭಾಗದಲ್ಲಿ ಮೇಲೆ ಏತದ ಕಟ್ಟೆಯಿದೆ. ಇದರಿಂದ ಸುತ್ತಲಿನ ತೋಟ–ಗದ್ದೆಗಳಿಗೆ ಈ ಬಾವಿಯಿಂದ ನೀರನ್ನು ಹಾಯಿಸಲಾಗುತ್ತಿತ್ತು ಎಂಬುದು ತಿಳಿಯುತ್ತದೆ. ಮೆಟ್ಟಿಲುಗಳ ಬಳಿಯ ಗೋಡೆಯಲ್ಲಿ ಮಿಥುನ ಶಿಲ್ಪಗಳು, ಶಿವಲಿಂಗವನ್ನು ಪೂಜಿಸುತ್ತಿರುವ ಪುರುಷಮೃಗ, ಹನುಮಂತ ಹಾಗೂ ನಾಗಸರ್ಪದ ಶಿಲ್ಪಗಳಿವೆ. ಪ್ರಸ್ತುತ ಈ ಬಾವಿ ಒತ್ತುವರಿ ಹಾಗೂ ನಿರ್ಲಕ್ಷ್ಯಕ್ಕೊಳಪಟ್ಟಿದೆ.[೧೦]

ಉಳೇನೂರಿನ ಹಳೇಬಾವಿ

ಈ ಬಾವಿಯು ಉಳೇನೂರು ಗ್ರಾಮದ ಹಳೇ ಊರಿನಲ್ಲಿದೆ. ಇದು ಪ್ರಾಚೀನ ಕಾಲದ ಬಾವಿಯಾಗಿದ್ದು, ಸ್ಥಳೀಯರು ಈ ಬಾವಿಗೆ ನಮ್ಮ ಪೂರ್ವಕಾಲದ್ದು ಎಂದು ಹೇಳುತ್ತಾರೆ. ಅಲ್ಲದೇ ಈ ಬಾವಿಯು ಸುಮಾರು ೨೦೦ ವರ್ಷಗಳಷ್ಟು ಹಿಂದಿನದೆಂದು ಊಹಿಸಲಾಗಿದೆ. ಈ ಬಾವಿಯು ಬಂಡೆ ಕಲ್ಲುಗಳಿಂದ ಆವೃತವಾಗಿದ್ದು, ಕಲ್ಲಿನ ಬಾವಿಯೊಂದಿಗೆ ಹಾಗೂ ತುಂಬಾ ಹಳೆಯ ಗಿಡಗಂಟಿಗಳಿಂದ ಬೆಳೆದು ಪಾಳುಬಿದ್ದ ಸ್ಥಿತಿಯಲ್ಲಿದೆ.

ಇದರ ಜೊತೆಗೆ ಗ್ರಾಮದಲ್ಲಿ ಮತ್ತೊಂದು ಬಾವಿ ಕಂಡುಬಂದಿದ್ದು, ಇದು ಗ್ರಾಮದ ಮಧ್ಯಭಾಗದಲ್ಲಿ ಕಂಡುಬರುತ್ತದೆ. ಬಾವಿಯು ಇಡೀ ಗ್ರಾಮಕ್ಕೇ ಕುಡಿಯುವ ನೀರನ್ನು ಒದಗಿಸಿ ಸದಾ ಜೀವಂತವಾಗಿರುತ್ತಿತ್ತು. ಆದರೆ ಪ್ರಸ್ತುತ ಬಾವಿಯು ಯಾವುದೇ ಸರಿಯಾದ ನಿರ್ವಹಣೆಯಿಲ್ಲದೆ ಪಾಳುಬಿದ್ದು ಸಂಪೂರ್ಣ ಹಾಳಾದ ಸ್ಥಿತಿಯಲ್ಲಿರುವುದು ವಿಷದನೀಯ.

ಕೊನೆಟಿಪ್ಪಣಿಗಳು

೧. ಕೋಲ್ಕಾರ್ ಶರಣಬಸಪ್ಪ., ೨೦೧೦, *ಗಂಗಾವತಿ ತಾಲೂಕು ದರ್ಶನ*, ಬಸವ ಪ್ರಕಾಶನ, ಕಲಬುರ್ಗಿ, ಪು. ಸಂ. – ೧೫
೨. ಅದೇ ಪು. ಸಂ. – ೧೮
೩. ಕೋಲ್ಕಾರ ಶರಣಬಸಪ್ಪ, ೨೦೦೨, ಅಕ್ಷಯ ಗಂಗಾವತಿ ತಾಲೂಕು ಪ್ರಥಮ ಸಾಹಿತ್ಯ ಸಮ್ಮೇಳನ ಸಂಚಿಕೆ, ಕನ್ನಡ ಸಾಹಿತ್ಯ ಪರಿಷತ್, ಗಂಗಾವತಿ, ಪು. ಸಂ. – ೩೨
೪. ಅದೇ ಪು. ಸಂ. – ೨೨
೫. ಅದೇ ಪು. ಸಂ. – ೨೬
೬. ಕೋಲ್ಕಾರ ಶರಣಬಸಪ್ಪ, ೨೦೧೦, ಅಂತರಗಂಗೆ ಗಂಗಾವತಿ ತಾಲೂಕು ದ್ವಿತೀಯ ಸಾಹಿತ್ಯ ಸಮ್ಮೇಳನ ಸಂಚಿಕೆ, ಕನ್ನಡ ಸಾಹಿತ್ಯ ಪರಿಷತ್, ಗಂಗಾವತಿ, ಪು. ಸಂ. – ೩೪
೭. *ಕೊಪ್ಪಳ : ಸಾಂಸ್ಕೃತಿಕ ಅಧ್ಯಯನ*, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ಸಂ. –೨೫
೮. ಅದೇ ಪು. ಸಂ. – ೩೪
೯. ಕೋಲ್ಕಾರ್ ಶರಣಬಸಪ್ಪ., ೨೦೧೦, *ಗಂಗಾವತಿ ತಾಲೂಕು ದರ್ಶನ*, ಬಸವ ಪ್ರಕಾಶನ, ಕಲಬುರ್ಗಿ, ಪು. ಸಂ. – ೧೮
೧೦. ಅದೇ ಪು. ಸಂ. – ೫೫

* * *

ಅಧ್ಯಾಯ – ನಾಲ್ಕು
ನಂಬಿಕೆ ಮತ್ತು ಆಚರಣೆಗಳು

ಅಧ್ಯಾಯ – ನಾಲ್ಕು
ನಂಬಿಕೆ ಮತ್ತು ಆಚರಣೆಗಳು

ಪೀಠಿಕೆ

ನಂಬಿಕೆ, ಸಂಪ್ರದಾಯ, ಆಚರಣೆಗಳನ್ನು ತೀರಾ ಒರಟಾಗಿ ವಿಶ್ಲೇಷಿಸಿದರೆ ಮೂಢನಂಬಿಕೆ ಎಂಥದ್ದೋ ಅಜ್ಞಾನ ಎಂರಲೋ ವಿವರಿಸಲಿಕ್ಕೆ ಸಾಧ್ಯವಿದೆ. ಆದರೆ ಈ ನಂಬಿಕೆ, ಸಂಪ್ರದಾಯ ಆಚರಣೆಗಳಿಗೆ ತನ್ನದೇಯಾದ ಒಂದು ಆಂತರ್ಯದ ಅರ್ಥವಿದೆ. ಈ ಅರ್ಥವನ್ನು ಶೋಧಿಸದೇ ಹೋದರೆ ಮೂಢನಂಬಿಕೆ ಎನ್ನುವಂತಹ ಜನಪ್ರಿಯ ಅಭಿಪ್ರಾಯದ ಬೆನ್ನಿಗೆ ಬೀಳುವ ಅಪಾಯವಿದೆ. ನಂಬಿಕೆ ಮತ್ತು ಆಚರಣೆಗಳಲ್ಲಿ ಜನರು ತಮ್ಮ ಬದುಕಿನ ಚೈತನ್ಯವನ್ನು ಕಂಡುಕೊಳ್ಳುತ್ತಾರೆ. ಹೊಸ ಬದುಕಿನ ಭರವಸೆಯನ್ನು ಕಂಡುಕೊಳ್ಳುತ್ತಾರೆ. ತಮ್ಮ ಬದುಕಿನ ನೂರಾರು ತೊಡಕುಗಳಿಗೆ ಪರಿಹಾರವನ್ನು ಕಂಡುಕೊಂಡಿದ್ದಾರೆ. ಹಾಗಾಗಿ ಒಂದು ಆಚರಣಾ ಲೋಕ ಸಮಾಜದ ಸಂಘರ್ಷದ ಕಥನವನ್ನು ಒಡಲೊಳಗಿಟ್ಟುಕೊಂಡೇ ಜೀವಂತವಾಗಿಲರುತ್ತದೆ. ಈ ನೆಲೆಯಲ್ಲಿ ನಂಬಿಕೆ, ಆಚರಣೆಗಳ ಲೋಕವನ್ನು ವಿಶ್ಲೇಷಿಸಲಾಗಿದೆ.

ಸಮಾಜ ಜೀವಿಯಾದ ಮಾನವನ ಬದುಕಿನಲ್ಲಿ ಹಲವಾರು ನಂಬಿಕೆ, ಸಂಪ್ರದಾಯ, ಆಚರಣಾತ್ಮಕ ಸಂಬಂಧಗಳು ಮೇಳೈಸಿಕೊಂಡು ಬಂದಿವೆ. ಮಾನವನ ಜೀವನದಲ್ಲಿ ನಂಬಿಕೆಯ ಪ್ರಾಬಲ್ಯ ಅನನ್ಯವಾದುದು. ನಂಬಿಕೆ ಆಚರಣೆಗಳೆಲ್ಲಾ ಒಂದಕ್ಕೊಂದು ಪರಸ್ಪರ ಸಂಬಂಧವುಳ್ಳವುಗಳು. 'ಸಂಸ್ಕೃತಿ' ಎಂಬ ವಿಶಾಲ ತೆಕ್ಕೆಯೊಳಗೆ ಇಷ್ಟೆಲ್ಲ ಅಡಕವಾಗಿರುತ್ತದೆ. ಬಹುಪಾಲು ನಂಬಿಕೆಗಳಿಗೆ ವೈಚಾರಿಕ .ತಳಹದಿ ಇರುವುದಿಲ್ಲವಾದರೂ ಒಂದು ಮಾನಸಿಕ ಕ್ರಿಯೆಯಾಗಿ ಭಾವ ಮತ್ತು ಇಚ್ಛೆಯ ಸಂಗತಿಗಳನ್ನು ಪ್ರಧಾನವಾಗಿ ಕಾಣಬಹುದು.

ಜಾತ್ರೆ ಮತ್ತು ಉತ್ಸವಗಳ ಮೂಲ ಕಲ್ಪನೆಯು ದೈವದಿಂದ ಬಂದುದಾಗಿದೆ. ದೈವದ ಪರಿಕಲ್ಪನೆ ಮತ್ತು ಅಸ್ತಿತ್ವವು ಮೂಲಭೂತವಾಗಿ ನಂಬಿಕೆಯಿಂದ ಬಂದಿರುವುದಾಗಿದೆ. ಹಾಗಾಗಿ ದೈವದ ಮೂಲ ನಂಬಿಕೆ. ದೈವದ ಬಗೆಗೆ ನಂಬಿಕೆ ಇಲ್ಲದಿದ್ದಲ್ಲಿ ದೈವದ ಅಸ್ತಿತ್ವವೇ ಇರುವುದಿಲ್ಲ. ಹಾಗಾಗಿ ದೈವತ್ವವನ್ನು ಕುರಿತಂತೆ ನಂಬಿಕೆಯೂ ಅತಿ ಮಹತ್ವದ್ದಾಗಿದೆ. "ನಂಬಿಕೆ ಮತ್ತು ಆಚರಣೆಗಳು ಮನುಷ್ಯನ ದಿನನಿತ್ಯದ ಬದುಕಿನ ಎರಡು ಮುಖಗಳು. ನಂಬಿಕೆ ಮಾತಿನ ಮೂಲಕ ವ್ಯಕ್ತಿಗೆ ಸ್ಪರ್ಷ ನೀಡಿದರೆ, ಆಚರಣೆಗಳು ಕ್ರಿಯೆಯ ಮೂಲಕ ವಿಶಿಷ್ಟ ಸ್ಥಾನವನ್ನು ಪಡೆದುಕೊಳ್ಳುತ್ತವೆ."[೧] ಹೀಗೆ ರೂಪಿತವಾದ ಕೃತಿಯನ್ನು ಗಮನಿಸಿದಾಗ ನಂಬಿಕೆ, ಆಚರಣೆಗಳ ಪ್ರಾಮುಖ್ಯತೆಯನ್ನು ಅರಿಯಬಹುದು.

ಜನಸಾಮಾನ್ಯರು ನಿಸರ್ಗದತ್ತವಾಗಿ ತಮಗೆ ಬಂದಿರುವ ಕೊಡುಗೆಯನ್ನು ದೈವದ ಕೊಡುಗೆಯೆಂದು ಭಾವಿಸಿ ಅವುಗಳಿಗೆ ಸಂಬಂಧಿಸಿದ ದೈವಗಳನ್ನು ಸೃಷ್ಟಿಸಿಕೊಂಡು ಅವುಗಳನ್ನು ವಾಸ್ತವವಾಗಿ ಪೂಜಿಸುತ್ತಾ ಬಂದಿದ್ದಾರೆ. ಕೆಲವುದ ದೈವಗಳ ಪ್ರಭಾವ ಹೆಚ್ಚಾಗಬಹುದು. ಇದು ಬಹುಮುಖ್ಯವಾಗಿ ಆ ದೈವದ ಬಗೆಗಿನ ನಂಬಿಕೆಯನ್ನಾಧರಿಸುತ್ತದೆ. ಪ್ರಸ್ತುತ ವರ್ತಮಾನದಲ್ಲೂ ಜನಪದರು ತಮ್ಮ ಪ್ರತಿಯೊಂದು ಕ್ರಿಯೆಗಳನ್ನು ಮಾಡುವಾಗಲೂ ದೈವವನ್ನು ನಂಬಿ ಅದರ ಮೇಲೆ ಭಾರ ಹಾಕಿ ನಡೆಯುವುದುಂಟು. ಹಾಗಾಗಿ ಈ ದೈವ ಸಂಸ್ಕೃತಿಯಲ್ಲಿ ನಂಬಿಕೆಗಳು ಜನಪದರ ಮಾನಸಿಕ ಚಿಕಿತ್ಸಕಗಳಾಗಿ ಕೆಲಸ ಮಾಡುತ್ತವೆ. ಇಂತಹ ಸಂದರ್ಭದಲ್ಲಿ "ಡಾ. ಹಾ.ಮಾ. ನಾಯಕರ ಮನುಷ್ಯ ಕಾಲದ ನಡುವೆ ಸಿಕ್ಕು ಬಾಳುತ್ತಾನೆ, ದೇಶದ ನಡುವೆ ಸಿಕ್ಕು ಬಾಳುತ್ತಾನೆ"[೨] ಎನ್ನುವ ಮಾತನ್ನು ನೆನಪಿಗೆ ತಂದುಕೊಳ್ಳಬಹುದು.

ಜನಪದರ ನಂಬಿಕೆಗಳು ಅಲಿಖಿತ ಹೃದಯಾಂತರ್ಗತ ಕರಾರು ಪತ್ರಗಳಿದ್ದ ಹಾಗೆ. ಜನಪದರಲ್ಲಿ ಈ ನಂಬಿಕೆಗಳು ಮೊದಲಿನಿಂದಲೂ ಸಾಗುತ್ತಾ ಬಂದಿದ್ದು, "ಮುನ್ನೂರ ಮೂವತ್ತು ಕೋಟಿ ದೇವತೆಗಳು ಆಗಿರುವವು" ಎಂಬ ಮಾತನ್ನು ಕೇಳಿರುತ್ತೇವೆ. ಸರ್ವ ವಸ್ತುಗಳಲ್ಲಿಯೂ ಪರಮಾತ್ಮನನ್ನು ಕಾಣುವ ಪ್ರವೃತ್ತಿ ಅವರಲ್ಲಿ ಬೆಳೆದು ಬಂದಿತು. ವಿಶೇಷ ಪೂಜೆ, ಹರಕೆ ಸಂದರ್ಭದಲ್ಲಿ ಪಶುಬಲಿ, ಪ್ರಾಣಿಬಲಿಯನ್ನು ನೀಡುತ್ತಾರೆ. ಮನೆದೈವದ ಹಬ್ಬವನ್ನು ನಿರ್ಧಿಷ್ಟ ಮನೆತನದವರು ಆಚರಿಸಿದರೆ ಗ್ರಾಮ ದೈವದ ಹಬ್ಬವನಮ್ಮು ಊರಿಗೆ ಊರೇ ಸಂಭ್ರಮದಿಂದ ಆಚರಿಸುತ್ತಾರೆ. ವರ್ಷದ ಎಲ್ಲಾ ಕಾಲದಲ್ಲಿ ಕೆಲಸ ಕಾರ್ಯಗಳಲ್ಲಿ ಕಾಲ ಕಳೆಯುವುದರಿಂದ ಇಂತಹ ದೈವ ಸಂಬಂಧಿ ಕಾರ್ಯಗಳು ಸುಖ ನೀಡುತ್ತವೆ.

ನಂಬಿಕೆಗಳ ವಿಚಾರದಲ್ಲಿ ಗಮನಿಸಬಹುದಾದ ಇನ್ನೊಂದು ಸಂಗತಿಯೆಂದರೆ ನಂಬಿಕೆಗಳು ಹುಟ್ಟುತ್ತಲೇ ನಂಬಿಕೆಗಳಾಗಿ ಹುಟ್ಟುವುದಿಲ್ಲ. ಯಾವುದೋ ಒಂದು ಅನುಭವದ ಹಿನ್ನೆಲೆಯಲ್ಲಿ ಮೂಡಿಬಂದ ಜ್ಞಾನವೇ ಹೇಳಿಕೆಯ ರೂಪ ಪಡೆದುಕೊಂಡು ಪರಂಪರೆಯಲ್ಲಿ ನಂಬಿಕೆಯಾಗಿ ಎಲೂಪುಕೊಳ್ಳುತ್ತದೆ. ಸಾಮಾನ್ಯವಾಗಿ ಮನುಷ್ಯ ಯಾವ ವಿಷಯದ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಾನೋ ಅಂತಹ ವಿಷಯದ ಬಗೆಗೆ ಆತಂಕವೂ. ಹೆಚ್ಚಾಗುತ್ತದೆ ಆತಂಕದ ವಿಷಯಗಳಿಗೆ

ಂಬಂಧಿಸಿದಂತೆ ಹೆಚ್ಚಿನ ನಂಬಿಕೆಗಳು ರೂಪಗೊಳ್ಳುತ್ತವೆ. ಮಾನವನು ವಿಕಾಸಗೊಂಡಂತೆ ಆತನ ಜೀವನದಲ್ಲಿ ನಂಬಿಕೆಗಳು ಕೂಡ ನಿತ್ಯ ಕರ್ಮದಲ್ಲಿ ಬಳಸುವಷ್ಟರ ಮಟ್ಟಿಗೆ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ.

"ನಂಬಿಕೆ ಅಥವಾ ನೆಚ್ಚಿಕೆಯ ಒಂದು ಮಾನಸಿಕ ಸ್ಥಿತಿ ಪರಂಪರಾನುಗತವಾಗಿ ಸ್ವೀಕೃತವಾದ ಒಂದು ಭಾವರೂಪ. ಪುನರಾವೃತ್ತಿತ ಹಾಗೂ ಸಾಂಪ್ರದಾಯಿಕ ಅಭಿಪ್ರಾಯೋಕ್ತಿ ವಸ್ತುಸ್ಥಿತಿಯೊಡನೆ ಅಸಂಬದ್ಧವೂ, ಅವೈಜ್ಞಾನಿಕವಾದ ಸಂಬಂಧವಾದ ಹೇಳಿಕೆ".[೩] ಇದನ್ನು ಗಮನಿಸಿದಾಗ ಶುಭ-ಅಶುಭ, ಫಲ-ವಿಫಲ, ಭಯ-ಅಭಯಗಳ ಕುರಿತು ಪ್ರಕಟಪಡಿಸುವ ಕ್ರಿಯೆಯೇ ನಂಬಿಕೆ ಎಂದೆನಿಸುತ್ತದೆ. ನಂಬಿಕೆಗಳು ಸಾಮಾನ್ಯವಾಗಿ ಅವ್ಯಕ್ತವಾಗದ ಅಗತ್ಯತೆಯಿಂದ ರೂಪಗೊಳ್ಳುತ್ತವೆ. ಅಗತ್ಯತಾ ತೀವ್ರತೆಯನ್ನು ಅನುಸರಿಸಿ ನಂಬಿಕೆಯಿಂದ ದೊರೆಯುವ ತೃಪ್ತಿಭಾವನೆಯ ತೀವ್ರತೆ ತೀರ್ಮಾನವಾಗುತ್ತದೆ. ಮಾನವನ ಮನಸ್ಸಿನ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಜನಸಾಮಾನ್ಯರು ಹೆಚ್ಚಾಗಿ ನಂಬಿಕೆಗಳ ಮೂಲ ಸತ್ಯಾಸತ್ಯತೆಯನ್ನು ಪರೀಕ್ಷಿಸಲು ಹೋಗುವುದಿಲ್ಲ. ಬದಲಾಗಿ ಅವು ತಮ್ಮ ದಿನನಿತ್ಯದ ಬದುಕಿಗೆ ಅನುಕೂಲವಾಗುವ ರೀತಿಯಲ್ಲಿದ್ದರೆ ಅವುಗಳಿಗೆ ಹೆಚ್ಚು ಮೊರೆ ಹೋಗುತ್ತಾರೆ.

ನಂಬಿಕೆಗಳು

೧. ಭಕ್ತರು ದೇವರನ್ನು ನಿಷ್ಠೆ ಮತ್ತು ಭಕ್ತಿ ಭಾವದಿಂದ ಪೂಜಿಸಿ ತಮ್ಮ ಕಷ್ಟ ಕಾರ್ಪಣ್ಯಗಳನ್ನು ಪರಿಹರಿಸುವಂತೆ ಬೇಡಿಕೊಂಡರೆ ಖಂಡಿತ ಫಲ ಸಿಗುತ್ತದೆ ಎನ್ನುವ ನಂಬಿಕೆಕಯಿದೆ.

೨. ಮದುವೆಯಾದ ಹೆಂಗಸರಿಗೆ ಬಹಳ ದಿನಗಳವರೆಗೆ ಮಕ್ಕಳಾಗದೇ ಹೋದರೆ ಬನ್ನಿ ಮರವನ್ನು ಬೆಳಗ್ಗೆ ಯಾರೂ ನೋಡದಂತೆ ಮಡಿಯಿಂದ ಪೂಜಿಸಿದರೆ ಮಕ್ಕಳಾಗುತ್ತವೆ ಎಂ ನಂಬಿಕೆಯಿದೆ.

೩. ಇಟಗಿ ಭೀಮವ್ವನ ದರ್ಶನ ಪಡೆದು ಬರುವಾಗ ತೆಂಗಿನಕಾಯಿಯನ್ನು ಕಟ್ಟಿ ಬಂದರೆ ಮಕ್ಕಳ ಫಲ ದೊರೆಯುತ್ತದೆ.

೪. ದನ ಕರು ಹಾಕಿದರೆ ಮೊದಲು ಕರೆದ ಹಾಲಿನಿಂದ ತುಪ್ಪವನ್ನು ತಯಾರಿಸಿ ದೇವರಿಗೆ ಅರ್ಪಿಸಿದರೆ ದನಕರು ಮಾತ್ರವಲ್ಲದೇ ಮನೆಯವರಿಗೂ ಕ್ಷೇಮ.

೫. ದೇವರ ದರ್ಶನ ಜಾತ್ರೆಯು ಮುಗಿದ ಮೇಲೆ ಅಲ್ಲಿರುವ ಸಣ್ಣಪುಟ್ಟ ಅಥವಾ ದೊಡ್ಡ ಮರಗಳಿಗೆ ತೊಟ್ಟಿಲು ಕಟ್ಟಿ ಅದರಲ್ಲಿ ಒಂದು ಕಲ್ಲು ಇರಿಸಿ ಕೈ ಮುಗಿದು ಬಂದರೆ ಮಕ್ಕಳಾಗುತ್ತವೆ.

೬. ಹುಲಿಗೆಯ ಹುಲಿಗೆಮ್ಮನಿಗೆ ನಡೆದುಕೊಂಡರೆ ಕುಷ್ಠರೋಗ ವಾಸಿಯಾಗುತ್ತದೆ.

೭. ಆಂಜನೇಯ ಮತ್ತು ಹೆಣ್ಣು ದೇವರ ಉಪಾಸನೆಯಿಂದ ಮಕ್ಕಳಾಗುತ್ತವೆ.

೮. ಕಾಯಿಲೆಯಾದವರನ್ನು ದೇವಸ್ಥಾನಗಳಲ್ಲಿ ಮಲಗಿಸಿದರೆ ಕಾಯಿಲೆಗಳು ವಾಸಿಯಾಗುತ್ತವೆ.

೯. ಸಾಂಕ್ರಾಮಿಕ ರೋಗಗಳು ಬಂದಾಗ ಊರಿನ ದೇವರುಗಳಿಗೆ ಬೇಡಿಕೊಂಡರೆ ವಾಸಿಯಾಗುತ್ತವೆ.

ಹೀಗೆ ನಂಬಿಕೆಗಳು ಮಾನವನ ಜೀವನದಲ್ಲಿ ಅಸಾಧಾರಣವಾದ ಪಾತ್ರವನ್ನು ವಹಿಸುತ್ತವೆ. ನಂಬಿಕೆಗಳಿಲ್ಲದೆ ಮನುಷ್ಯ ಜೀವಿಸಲಾರ ಎಂಬಷ್ಟರ ಮಟ್ಟಿಗೆ ಜೀವನ ರೂಪಿಇಕೊಂಡಿರುತ್ತಾನೆ. ಜೀವಕ್ಕೆ ಉಸಿರಾಟ ಎಷ್ಟು ಅವಶ್ಯಕವೋ ಅಷ್ಟೇ ಆವಶ್ಯಕವಾದ ಪಾತ್ರವನ್ನು ನಂಬಿಕೆಗಳು ನಿರ್ವಹಿಸುತ್ತಿರುತ್ತವೆ ಎಂಬ ಮಾತು ಸ್ಪಷ್ಟವಾಗಿದೆ.[೪]

ಆಚರಣೆಗಳು

ಮಾನವನು ತನ್ನ ಜೀವನ ಸಂಸ್ಕೃತಿಯಲ್ಲಿ ಆಚರಣೆಗಳಿಗೆ ಹೆಚ್ಚಿನ ಮಹತ್ವವನ್ನು ನೀಡುತ್ತಾ ಬಂದಿದ್ದಾನೆ. ದೈವಾಚರಣೆಯ ಸಂದರ್ಭದಲ್ಲಿ ಎಲ್ಲಾ ಸಮುದಾಯದವರು ಒಂದಾಗಿ ಅನೇಕ ಆಚರಣೆಗಳನ್ನು ಚಾಚೂತಪ್ಪದೇ ನಡೆಸಿಕೊಂಡು ಬರುತ್ತಿದ್ದಾರೆ. ಇದು ಮಾನವನ ಸಂಸ್ಕೃತಿಯ ಅನನ್ಯತೆಯನ್ನು ಬಿಂಬಿಸುತ್ತದೆ. ' ಈ ಆಚರಣೆ ವಿಧಿ–ವಿಧಾನಗಳು ಸಮಾಜವನ್ನು ಒಂದುಗೂಡಿಸುವ, ತಿದ್ದುವ ಹಾಗೂ ವ್ಯಕ್ತಿಗಳು ಅಡ್ಡದಾರಿಗೆ ಹೋಗದಂತೆ ನಿಯಂತ್ರಿಸುವ ಸಾಮರ್ಥ್ಯವನ್ನು ಪಡೆದಿವೆ.'[೫] ಎಂಬ ಅಭಿಪ್ರಾಯವಿದೆ. ಪ್ರಮುಖವಾಗಿ ಈ ಆಚರಣೆಗಳು ಸಮಾಜದ ಉನ್ನತ ಬೆಳವಣಿಗೆಗೆ ಸಹಕಾರಿಯಾಗಿ ನಿಲ್ಲುತ್ತವೆ. ಇಂದು ಆಧುನಿಕತೆ ನಮ್ಮನ್ನು ಎಷ್ಟೇ ಆವಸಿದ್ದರೂ ಈ ಸಂಪ್ರದಾಯ, ಆಚರಣೆ ವಿಧಿ–ವಿಧಾನಗಳಿಂದ ಹೊರಬರಲಾಗಿಲ್ಲ. ಸಾಂಕೇತಿಕವಾಗಿಯಾದರೂ ನಾವು ಆ ಆಚರಣೆಗಳನ್ನು ಮುಂದುವರೆಸುತ್ತಾ ಬರುತ್ತಿದ್ದೇವೆ.

ಇಡೀ ಕರ್ನಾಟಕದಲ್ಲಿ ಮತ್ತು ಆಂಧ್ರಪದೇಶ, ತಮಿಳುನಾಡು, ಕೇರಳದಲ್ಲಿ ಮಾತ್ರ ದೇವತಾರಾಧನೆ ಇಂದಿಗೂ ಜನಪ್ರಿಯವಾಗಿದೆ. ಕರ್ನಾಟಕ ರಾಜ್ಯವೊಂದರಲ್ಲಿಯೇ ಸುಮಾರು ೧೫೦೦ ಗ್ರಾಮದೇವತೆಗಳಿವೆ. ಹಿಂದು ಧರ್ಮದ ಮುಖ್ಯ ದೇವತೆಗಳಿಗಿಂತ ಈ ಗ್ರಾಮ ದೇವತೆಗಳೇ ಜನರಿಗೆ ಹೆಚ್ಚು ಹತ್ತಿರವಾಗಿವೆ. ಮತ್ತು ಜನರ ಕಷ್ಟ–ಸುಖಗಳಿಗೆ ಕಿವಿಗೊಡುತ್ತವೆ. ಜನಪದ ಧರ್ಮದ ಈ ಮೂಲಧಾತುವನ್ನು ನಿರ್ಮಿಸಿದವರು ಈ ಗ್ರಾಮದೇವತೆಗಳೇ ಆಗಿದ್ದಾರೆ.[೬] ಮಾತೃದೇವತಾರಾಧನೆಯ ಮೂಲದಿಂದ ಜನ್ಮತಳೆದ ಗ್ರಾಮದೇವತೆಗಳು ಇಂದಿಗೂ ತಮ್ಮದೇಯಾದ ವಿಶಿಷ್ಟತೆಯನ್ನು ಹೊಂದಿವೆ.

ಭಾರತವು ಶಕ್ತಿ ಉಪಾಸನಾ ಕೇಂದ್ರವಾಗಿ ಪುರಾತನ ಇತಿಹಾಸವನ್ನು ಹೊಂದಿದೆ. ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿರುವ ಸಿದ್ಧಾಪುರ ಪ್ರದೇಶವೂ ಕೂಡ ಒಂದು ರೀತಿಯಲ್ಲಿ ಶಕ್ತಿ ಉಪಾಸನಾ ಕೇಂದ್ರ ಭೂಮಿಯಾಗಿದೆ. ಇಲ್ಲಿನ ದೇವರುಗಳ ಕುರಿತ ಆಚರಣೆಗಳು ಪ್ರಮುಖವಾಗಿ ಮಾನವ ಅಗೋಚರ ಶಕ್ತಿಗಳಿಗೆ ಶರಣಾಗಿ ಅವುಗಳನ್ನು ತೃಪ್ತಿಪಡಿಸಲೆಂದು ಹೆಣಗಾಡಿರುವ ಪ್ರಸಂಗಗಳ ಚಾರಿತ್ರಿಕ ದಾಖಲಾತಿಗಳಾಗಿ ಚಲನಶೀಲವಾಗಿವೆ. ಹಾಗಾಗಿ ಮಾನವನ ಜೀವನದಲ್ಲಿ ದೈನಂದಿನ ಆಚರಣೆಗಳನ್ನು ಮತ್ತು ವಾರ್ಷಿಕಾವರ್ತನ ಆಚರಣೆಗಳನ್ನು ಕಾಣಬಹುದಾಗಿದೆ.

'ಒಂದು ದಿನದ ಹಬ್ಬ ಮೂರು ದಿನ ಅಥವಾ ಹೆಚ್ಚು ದಿನಗಳವರೆಗೆ ಹಾಡು, ಕುಣಿತ, ಮೆರೆತಗಳು ಸೇರಿಕೊಂಡು ಮದ್ದು, ಪಟಾಕಿಗಳ ವೈಭವ ಆಕರ್ಷಕವಾಗಿ, ಅಂಗಡಿ–ಮುಂಗಟ್ಟುಗಳು

ಮತ್ತು ಜಾನುವಾರುಗಳಲ್ಲಿ ಸೇರಿ ಅದಕ್ಕೆ ಜನರು ಮರುಳಾಗಿ ಜನಗಳ ಪರಿಷೆ ಸೇರಿದಾಗ ಅದು ಜಾತ್ರೆ ಎಂಬ ನಾಮಕರಣಕ್ಕೆ ಯೋಗ್ಯವಾಯಿತು. ಕೊನೆಗೆ ರೈತರ ಜೀವನಾಡಿಯಂತಿರುವ ದನಗಳ ಸೇರುವಿಕೆಯಲ್ಲಿ ಸಂಘಟನೆಗೊಂಡಾಗ ಆ ಪದದ ಅರ್ಥ ವಿಶಾಲವಾಯಿತು. ಧಾರ್ಮಿಕ ಸ್ವರೂಪದ ಹಬ್ಬ ಕಾಲಕ್ರಮಣ ಸಾಂಸ್ಕೃತಿಕ ಮಹತ್ವವನ್ನು ಪಡೆದು ಕೊನೆಗೆ ವಾಣಿಜ್ಯದ ಮುಖವನ್ನು ರೂಪಿಸಿಕೊಂಡಾಗ ಜಾತ್ರೆಯಾಯಿತು.[೨] ಹೀಗೆ ರೂಪಗೊಂಡ ಜಾತ್ರೆಯ ಆಚರಣೆಗಳು ಗ್ರಾಮ ದೇವರುಗಳ ಅಧ್ಯಯನಕ್ಕೆ ತುಂಬ ಸಹಕಾರಿಯಾಗುತ್ತವೆ. ಭಯ ಭಕ್ತಿಯಿಂದ ನಡೆಯುವ ಆಚರಣೆಗಳು ಜೀವಂತ ಹಾಗೂ ಅರ್ಥಪೂರ್ಣವಾಗಿ ಕಂಡುಬರುತ್ತವೆ.

ಬಹುಪಾಲು ಆಚರಣೆಗಳು ನಡೆಯುವುದು ಮಳೆಗಾಲದ ಸಂದರ್ಭದಲ್ಲಿ. ಕೃಷಿ ಚಟುವಟಿಗಳು ಮಳೆಗಾಲದಲ್ಲಿ ಆರಂಭವಾಗಿ, ಚಳಿಗಾಲ ಮತ್ತು ಬೇಸಿಗೆಕಾಲ ಬರುವ ಹೊತ್ತಿಗೆ ಮುಕ್ತಾಯವಾಗುತ್ತವೆ. ಈ ಸಂದರ್ಭಗಳು ಜನಸಮುದಾಯಗಳು ಹೆಚ್ಚೆಚ್ಚು ಸಂಪ್ರದಾಯ, ಆಚರಣೆಗಳನ್ನು ಮಾಡುತ್ತಾರೆ. ಇವುಗಳ ಹಿಂದಿನ ಆಶಯ ಧಾನ್ಯ ಸಂಪತ್ತು, ಪಶು ಸಂಪತ್ತು ಸಮೃದ್ಧವಾಗಿ ಜನ, ದನ, ಬೆಳೆಗಳು ರೋಗಮುಕ್ತವಾಗಬೇಕು. ಕಾಡು ಪ್ರಾಣಿಗಳಿಂದ ನಮಗೆ ರಕ್ಷಣೆ ಸಿಗಬೇಕು. ಸಂಸಾರ, ಕೌಟುಂಬಿಕ ಜೀವನ ಪರಸ್ಪರ ಸುಖ–ಸಂತೋಷಗಳಿಂದ ತುಂಬಿರಬೇಕು. ಇಂತಹಯ ವಾಸ್ತವವಾದಿ ಆಶಯಗಳನ್ನು ಇಟ್ಟುಕೊಂಡೇ ಬಹುಪಾಲು ದೇವರುಗಳ ಆಚರಣೆಗಳು ನಡೆಯುತ್ತಿವೆ. ಜನಪದರು ತಾವು ಆಚರಿಕಸುವ ಆಚರಣೆಗಳು ಮೇಲ್ನೋಟಕ್ಕೆ ವೈಭವೀಕರಣದಿಂದ ಕೂಡಿದ್ದರೂ, ಮೂಢನಂಬಿಕೆಯ ತವರುಗಳಂತೆ ಕಂಡರೂ, ಅವರು ತಮ್ಮ ಭಕ್ತಿ ಭಾವಕ್ಕೆ ಅನುಸಾರವಾಗಿ ಚಾಚೂತಪ್ಪದೇ ಅನುಸರಿಸಿಕೊಂಡು ಬರುತ್ತಿದ್ದಾರೆ. ಇಲ್ಲಿನ ಮೂಲ ಆಶಯ ದೇವರು ತಮಗೆ ರಕ್ಷಣೆ ನೀಡಿ ಸುಖ–ಸಂತೋಷವನ್ನು ನೀಡುವುದೇ ಆಗಿರುತ್ತವೆ.

ಜನಪದ ದೇವರುಗಳಿಗೆ ಸಂಬಂಧಿಸಿದ ಆಚರಣೆ ಮತ್ತು ಆರಾಧನೆಗಳಲ್ಲಿ ಅನೇಕ ವಿಸ್ಮಯಕಾರಿ ಅಂಶಗಳು ದೊರಕುತ್ತವೆ. ಪ್ರತಿಯೊಂದು ದೇವರಿಗೂ ವರ್ಷಕ್ಕೊಂದು ಹಬ್ಬ ಜರುಗುತ್ತವೆ. ಇಡೀ ವರ್ಷದಲ್ಲಿ ನಡೆಯುವ ಸಾಮಾನ್ಯ ಪೂಜೆಯ ಜೊತೆಗೆ ಹಬ್ಬದ ಸಂದರ್ಭದಲ್ಲಿ ವಿಶೇಷ ಆರಾಧನೆಗಳು ನಡೆಯುತ್ತವೆ. (ಉದಾ : ಅಭಿಷೇಕ, ಲಕ್ಷದೀಪೋತ್ಸವ) ಈ ಆರಾಧನೆಯ ಭಾಗವಾಗಿ ಅನೇಕ ಆಚರಣೆಗಳನ್ನು ಕಾಣುತ್ತೇವೆ. ಬಹುಪಾಲು ಹಬ್ಬಗಳು ಯುಗಾದಿಯಿಂದ ಪ್ರಾರಂಭವಾಗುತ್ತವೆ. ಸಾಮಾನ್ಯವಾಗಿ ಬೇಸಿಗೆಯ ಕಾಲದಲ್ಲಿ ನಡೆಯುವ ಹಬ್ಬಗಳು ಜಾಸ್ತಿ. ಚೈತ್ರ, ವೈಶಾಖ, (ಫೆಬ್ರವರಿ, ಮಾರ್ಚ್, ಏಪ್ರೀಲ್) ತಿಂಗಳುಗಳಲ್ಲಿ ಕೃಷಿ ಚಟುವಟಿಕೆಗಳು ಮುಗಿದು ಸುಗ್ಗಿ ಸಂಭ್ರಮವಿರುತ್ತದೆ. ಇದು ವಿಶ್ರಾಂತ ಕಾಲವಾಗಿದ್ದು, ಈ ಹೊತ್ತಿನಲ್ಲಿಯೇ ಬಹುಪಾಲು ದೇವರುಗಳ ಹರಕೆ, ಹಬ್ಬಗಳು ಏರ್ಪಡುತ್ತವೆ.

ಶಿಷ್ಟ ದೇವರುಗಳಲ್ಲಿ ಕಂಡುಬರುವಂತೆ ಜನಪದರ ದೇವರುಗಳಲ್ಲಿ ದಿನನಿತ್ಯದ ಪೂಜೆ, ನೇಮಗಳು ಕಂಡುಬರುವುದಿಲ್ಲ. ಅಗತ್ಯಕ್ಕೆ ತಕ್ಕಂತೆ ಸ್ತ್ರೀ ದೇವತೆಗಳಿಗೆ ಮಂಗಳವಾರ ಶುಕ್ರವಾರ, ಪುರುಷ ದೇವತೆಗಳಿಗೆ ಶನಿವಾರ, ಸೋಮವಾರ ಮತ್ತು ಗುರುವಾರ ಪೂಜಾದಿ ಕಾರ್ಯಗಳು

ನಡೆಯುತ್ತವೆ. ಊರ ಹೊರಗಿನ ದೇವರುಗಳಿಗೆ ಪೂಜೆಗಳು ನಡೆಯುವುದು ಕಡಿಮೆ. ಇದಕ್ಕೆ ಉದಾಹರಣೆಯಾಗಿ ಯಲಬುರ್ಗಾ ತಾಲೂಕಿನ ತಳಕಲ್ಲು ಗ್ರಾಮದ ಊರ ಹೊರಗಿನ ಉಡಚಮ್ಮನನ್ನು ಕಾಣಬಹುದು. ಪ್ರಮುಖವಾಗಿ ಈಕೆ ಗುಹ್ಯ ದೇವತೆ. ಈಕೆಗೆ ಬಲಿ ಸಂಪ್ರದಾಯ ಆಚರಣೆಗಳು ನಡೆಯುತ್ತವೆ. ಈಕೆಯನ್ನು ಸೀಮೆದೇವತೆ ಎಂದು ಕರೆಯುತ್ತಾರೆ.

ಸಾಮೂಹಿಕ ನೆಲೆಯಲ್ಲಿ ನಡೆಯುವ ಆಚರಣಗಳು ಬಹುಪಾಲು ಹಬ್ಬ ಹರಿದಿನಗಳಲ್ಲಿ, ಅಮಾವಾಸ್ಯೆ, ಹುಣ್ಣಿಮೆಯಂತಹ ಸಂದರ್ಭಗಳಲ್ಲಿ ನಡೆಯುತ್ತವೆ. ಪ್ರತಿಯೊಂದು ಆರಾಧನೆ, ಆಚರಣೆ ಕೂಡಾ ಆಯಾ ಕಾಲ ಸಂದರ್ಭದ ಹಿನ್ನೆಲೆಯಲ್ಲಿ ಅರ್ಥಪೂರ್ಣತೆಯನ್ನು ಪಡೆಯುವ ಆಚರಣೆಗಳುಇ ಇನ್ನೊಂದು ಸಂದರ್ಭದಲ್ಲಿ ಹೀನಾಯವಾಗಿ ಕಾಣಬಹುದು. ದೇವೇಂದ್ರಕುಮಾರ ಹಕಾರಿಯವರು ಹೇಳುವಂತೆ "ಹಬ್ಬ ಮುಖ್ಯವಾಗಿ ಪ್ರತಿ ಜನಪದ ಕುಲದೇವತೆಯ ಆರಾಧನೆಯಾಗಿದ್ದು, ಅದು ಕೌಟುಂಬಿಕ ವಲಯಕ್ಕೆ ಸೀಮಿತವಾಗುವಂತಹುದು. ಆದರೆ ಕುಲದೇವತೆ, ಗ್ರಾಮದೇವತೆಗಳ ಉತ್ಸವವಾಗಿದ್ದು, ಕೌಟುಂಬಿಕ ಪರಿಧಿಯನ್ನು ದಾಟ ಸಾಮಾಜಿಕ ವಲಯದಲ್ಲಿ ವ್ಯವಹರಿಸುವಂತಹವು"[೮] ಎನ್ನುವ ಮಾತು ಅರ್ಥಪೂರ್ಣವೆನಿಸುತ್ತದೆ.

ಪ್ರಮುಖವಾಗಿ ಈ ಆಚರಣೆಗಳು ಆಯಾ ದೇವರುಗಳನ್ನು ಆಗಾಗ ಜಾಗೃತಾವಸ್ಥೆಗೆ ತರುವ ಪ್ರಯತ್ನಗಳೇ ಆಗಿವೆ. ಅಭಿಷೇಕ, ಎಲೆಪೂಜೆ, ಹೂ, ಬಲಿಯಂತಹ ಆರಾಧನೆ ವಿಧಿಗಳಲ್ಲದೇ ಸ್ವಚ್ಛತೆಯ ಪ್ರತೀಕಳಗಿ ಕಂಡುಬರುತ್ತವೆ. ಉದಾ : ಗಂಗಾವತಿ ತಾಲೂಕಿನ ಹೇಮಗುಡ್ಡದ ದುರುಗಮ್ಮನಿಗೆ ಆಗಾಗ ಹೋಮ, ಹವನ, ಪೂಜೆ, ಅಭಿಷೇಕ ನಡೆಯುತ್ತವೆ. ಇಲ್ಲಿ ಹೂಗಾರ ಮನೆತನಮದವರು ಪೂಜಾರಿಗಳಾಗಿದ್ದರೂ, ಇಂತಹ ಕಾರ್ಯಗಳಲ್ಲಿ ಬ್ರಾಹ್ಮಣರೇ ಹೆಚ್ಚಾಗಿ ಭಾಗವಹಿಸುತ್ತಾರೆ (ಸಾಮೂಹಿಕ ನೆಲೆಯಲ್ಲಿ). ಸಿದ್ಧಾಪುರದ ಹಲವಾರು ಕಡೆಗಳಲ್ಲಿ ಈ ರೀತಿಯ ಕಾರ್ಯಗಳು ನಡೆಯುತ್ತಿರುವುದನ್ನು ಕಾಣುತ್ತೇವೆ. ಸಾಮೂಹಿಕ ನೆಲೆಯಲ್ಲಿ ಆಚರಣೆಗೊಳಪಡುವ ವಿಧಿ-ವಿಧಾನಗಳು ಜನರ ಮನಸ್ಸನ್ನು ಕ್ರಿಯಾಶೀಲವಾಗಿರುವಂತೆ ಮತ್ತು ಮನುಷ್ಯ ಸಂಬಂಧಗಳನ್ನು ಪುನರ್ ಪ್ರತಿಷ್ಠಾಪಿಸುವ ಕೆಲಸವನ್ನು ಮಾಡುವ ಸಂಗತಿಗಳೇ ಆಗಿವೆ.

ಉತ್ಸವಗಳು

೧. ಪಲ್ಲಕ್ಕಿ ಉತ್ಸವ

ಈ ಆಚರಣೆ ಪುರುಷ ಮತ್ತು ಸ್ತ್ರೀ ದೇವರುಗಳನ್ನು ಒಳಗೊಂಡಂತೆ ಅನೇಕ ದೇವರುಗಳಲ್ಲಿ ಕಂಡುಬರುತ್ತದೆ. ಪಲ್ಲಕ್ಕಿಯನ್ನು ನಿರ್ಧಿಷ್ಟ ಮನೆತನದವ್ರು ಕೆಲವೊಂದು ವಿಧಿವಿಧಾನಗಳ ಮೂಲಕ ಕಟ್ಟಿಗೆಯಿಂದ ತಯಾರಿಸುತ್ತಾರೆ. ಪಲ್ಲಕ್ಕಿಯು ತೊಟ್ಟಿಲಾಕಾರವನ್ನು ಹೊಂದಿದ್ದು, ನಾಲ್ಕು ಕಡೆ ಸಣ್ಣ ಕಾಲುಗಳು, ಕಾಮನಬಿಲ್ಲಿನಾಕಾರದ ಕಟ್ಟಿಗೆಯ ಕಮಾನು ಮತ್ತು ಉದ್ದನೆಯ ಹೆಗಲಗಂಬವನ್ನು ಹೊಂದಿರುತ್ತದೆ. ಆಯಾ ದೇವರ ಐತಿಹಾಸಿಕ ಹಿನ್ನೆಲೆಯ ಆಧಾರದ ಮೇಲೆ ಪಲ್ಲಕ್ಕಿಯ ತೊಟ್ಟಿಲ ಮೇಲೆ ಕೆತ್ತನೆಯ ಕೆಲಸವನ್ನು ಮಾಡಿರುತ್ತಾರೆ. ಈ ಕಲೆಯಲ್ಲಿ ಕಿನ್ನಾಳ ಗ್ರಾಮ ಪ್ರಸಿದ್ಧವಾಗಿದೆ.

ಪಲ್ಲಕ್ಕಿಯ ಮೇಲೆ ಬಣ್ಣ-ಬಣ್ಣದ ಗೊಂಬೆಗಳಿಂದ ಅಲಂಕೃತವಾದ ಕುತನಿ ಬಟ್ಟೆಯನ್ನು ಹೊದಿಸಿರುತ್ತಾರೆ. ಪ್ರತಿಯೊಂದು ಹಬ್ಬ, ಉತ್ಸವದಲ್ಲಿ ದೇವರು ಗರ್ಭಗುಡಿಯಿಂದ ಹೊರ ಹೋಗುವ ಸಮಯದಲ್ಲಿ ಈ ಪಲ್ಲಕ್ಕಿಯನ್ನು ಉಪಯೋಗಿಸುತ್ತಾರೆ. ಈ ಸಂದರ್ಭದಲ್ಲಿ ಅಗಸರು ಮಡಿ ಮಡಿಯ ಬಟ್ಟೆಯನ್ನು ದಾರಿಗೆ ಹಾಸುತ್ತಾರೆ. ಪಲ್ಲಕ್ಕಿ ಹೊತ್ತವರು ಇದರ ಮೇಲೆ ನಡೆದುಕೊಂಡು ಹೋಗುತ್ತಾರೆ. ಡೊಳ್ಳು, ಭಜನೆ, ಶಹನಾಯಿ ಮೇಳದವರು ಇದರಲ್ಲಿ ಭಾಗವಹಿಸುತ್ತಾರೆ.

ಸಿದ್ದಾಪುರದ ಹಲವಾರು ಕಡೆಗಳಲ್ಲಿ ಪಲ್ಲಕ್ಕಿ ಉತ್ಸವವು ವಿಶೇಷವಾಗಿ ಕಂಲಡುಬರುತ್ತದೆ. ಕೊಪ್ಪಳ ಜಿಲ್ಲೆಯ ಲೇಬಗೇರಿ ಗ್ರಾಮದ ಶ್ರೀ ಮಾರುತೇಶ್ವರ ಕಾರ್ತಿಕೋತ್ಸವದಲ್ಲಿ ನಡೆಯುವ ಮುಳ್ಳಿನ ಪಲ್ಲಕ್ಕಿ ಉತ್ಸವವು ಗ್ರಾಮ ಸಂಸ್ಕೃತಿಯ ವಿಶಿಷ್ಟತೆಯನ್ನು ಹೆಚ್ಚಿಸುತತದೆ. ಇಲ್ಲಿಯ ಅಡವಿಯಲ್ಲಿ ಸಿಗುವ ಕಾರಿ ಮುಳ್ಳನ್ನು ತಂದು ಅದರಿಂದ ಪಲ್ಲಕ್ಕಿಯನ್ನು ತಯಾರಿಸಿ ಅದರಲ್ಲಿ ಗುಡಿಯ ಪೂಜಾರಿಯನ್ನು ಕೂರಿಸಿ ಊರಿನ ತುಂಬಾ ಮೆರವಣಿಗೆ ಮಾಡಲಾಗುತ್ತದೆ.

ಜಾತ್ರೆಯಂತಹ ಸಂದರ್ಭದಲ್ಲಿ ದೇವರ ಉತ್ಸವ ಮೂರ್ತಿಯನ್ನು ಈ ಪಲ್ಲಕ್ಕಿಯಲ್ಲಿ ಹೊರಡಿಸುತ್ತಾರೆ. ಉತ್ಸವ ಮೂರ್ತಿಯನ್ನು ದೇವಸ್ಥಾನದಲ್ಲಿ ಪೂಜಿಸಿ ಈ ಪಲ್ಲಕ್ಕಿಯಲ್ಲಿ ಊರಿನ ಪ್ರಮುಖ ಬೀದಿಗಳಲ್ಲಿ ಮೆರವನಿಗೆ ಮಾಡುತ್ತಾರೆ. ಜೊತೆಗೆ ಡೊಳ್ಳುಕುಣಿತ, ಭಜನಾಮೇಳ, ನಂದಿಕೋಲು, ಹುಲಿವೇಷ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತವೆ.

೨. ತೇರು ಉತ್ಸವ (ಜಾತ್ರೆ)

ಜಾತ್ರೆಯ ಸಂದರ್ಭದಲ್ಲಿ ತೇರು ಉತ್ಸವ ಬಹಳ ಮಹತ್ವವಾಗಿ ಕಂಡುಬರುತ್ತದೆ. ಜಾತ್ರೆ ಎಂಬುದು ಸಂಸ್ಕೃತದ 'ಯಾತ್ರಾ' ಶಬ್ಧದಿಂದ ಹುಟ್ಟಿದ್ದು, ಜಾತ್ರೆ ಎಂದರೆ ದೇವರ ದರ್ಶನಕ್ಕಾಗಿ ಪುಣ್ಯಕ್ಷೇತ್ರಗಳಿಗೆ ಹೋಗುವುದು ಎಂದರ್ಥ ಬರುತ್ತದೆ. ಜಾತ್ರೆಗೆ ಪರಿಷೆ ಎಂದೂ ಕರೆಯುತ್ತಾರೆ. ಬಹುಮುಖ್ಯವಾಗಿ ಧಾರ್ಮಿಕ ಉದ್ದೇಶದಿಂದ ಅಂದರೆ ತಮ್ಮ ದೇವರ ಉತ್ಸವಕ್ಕಾಗಿ ಜನ ಸೇರಿದರೆ ಅದನ್ನು ಜಾತ್ರೆ ಎನ್ನಬಹುದು. ಡಾ. ದೇವೇಂದ್ರಕುಮಾರ ಹಕಾರಿಯವರು ಜನ ಸೇರುವುದಕ್ಕೂ, ಜಾತ್ರೆಗು ಒಂದು ಸಹಜ ಸಂಬಂದವಿದೆ ಎನ್ನುವುದು ವಾಸ್ತವ ಸತ್ಯ. ಜನಪದರ ಬದುಕಿಗೂ ಜಾತ್ರೆಗೂ ಇರುವ ಸಂಬಂಧದ ಮಹತ್ವದ ಕೊಂಡಿ ಎಂದರೆ ಜನಪದರ ಶ್ರದ್ಧೆ, ಧರ್ಮ ಮತ್ತು ಅದಕ್ಕೆ ಸಂಬಂಧಿಸಿದ ಹಬ್ಬಗಳು ಎಂದು ಅಭಿಪ್ರಾಯಪಡುತ್ತಾರೆ.

ಜಾತ್ರೆಗಳಲ್ಲಿ ದೇವರ ಮೆರವಣಿಗೆಗೆ ಆದ್ಯತೆ. ಉತ್ಸವಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಇಲ್ಲವೇ ತೇರಿನಲ್ಲಿಟ್ಟು ಎಳೆಯುವರು. ತೇರಿಗೆ ಆಧ್ಯಾತ್ಮಿಕ ಸಂಕೇತವೂ ಬಂದಿದೆ. ತೇರು ದೇಹದ ಪ್ರತೀಕ. ಸ್ಥೂಲ ಸೂಕ್ಷ್ಮ ಕಾರಣ ಶರೀರಗಳಿಂದ ಕೂಡಿದ ದೇಹದಂತಿರುವ ಈ ತೇರಿಗೂ ಮೂರು ಭಾಗಗಳಿರುತ್ತವೆ.[೧೦] ಮಾನವ ಜೀವನದ ಸಾಂಕೇತಿಕವಾಗಿ ಈ ತೇರು ಉತ್ಸವ ನಡೆಸುತ್ತಾರೆ. ತೇರು ಉತ್ಸವಕ್ಕೆ ರಥೋತ್ಸವ ಎಂದೂ ಕರೆಯುತ್ತಾರೆ. ಆಯಾ ದೇವರ ಹಬ್ಬದ ಮಾರನೇ ದಿನ

ಅಥವಾ ಅದೇ ದಿನ ಸಾಯಂಕಾಲ ಈ ಉತ್ಸವ ನಡೆಯುತ್ತದೆ. ಕೊಪ್ಪಳ ಜಿಲ್ಲೆಯ ಕನಕಗಿರಿಯ ಕನಕರಾಯನ ತೇರು ಜಿಲ್ಲೆಯಲ್ಲಿಯೇ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಇತ್ತೀಚೆಗೆ ಎಲ್ಲ ಕಡೆಗೂ ಭಕ್ತರ ಆರ್ಥಿಕ ಸುಧಾರಣೆಯಿಂದಾಗಿ ಈ ತೇರುಗಳು ವಿಧವಿಧವಾಗಿ ಕಂಡುಬರುತ್ತವೆ. ಈ ಹಿಂದೆ ದೊಡ್ಡ ದೊಡ್ಡ ನಾಲ್ಕು ಮರದ ಗಾಲಿಗಳ ಮೇಲೆ ಈ ತೇರನ್ನು ಎಳೆಯಲಾಗುತ್ತಿತ್ತು. ಬೃಹದಾಕಾರದ ತೇರು ಕಟ್ಟಿಗೆ ಗಾಲಿಗಳ ಮೇಲೆ ನಡೆಯುವುದು ಕಷ್ಟಕರವಾದುದರಿಂದ ಪ್ರಸಕ್ತ ಎಲ್ಲ ಕಡೆಗಳಲ್ಲಿಯೂ ಕಲ್ಲಿನ ಗಾಲಿಗಳನ್ನು ಮಾಡಲಾಗಿದೆ. ತೇರಿನ ಮೇಲೆ ಮನುಷ್ಯನ ಜೀವನಕ್ಕೆ ಸಂಬಂಧಿಸಿದ ಸಾಂಸಾರಿಕ ಚಿತ್ರಗಳು, ದೇವಮಾನವರ ಚಿತ್ರಗಳು, ಪೌರಾಣಿಕ ಕಥೆಗಳ ಚಿತ್ರಗಳು ವಿಧವಿಧವಾಗಿ ಮೂಡಿರುತ್ತವೆ. ಇದು ಪ್ರಮುಖವಾಗಿ ಗೋಪುರದ ಆಕೃತಿಯಲ್ಲಿರುತ್ತದೆ. ಅದಕ್ಕೆ ಬಣ್ಣ–ಬಣ್ಣದ ಬಟ್ಟೆಗಳಿಂದ ಅಲಂಕರಿಸುತ್ತಾರೆ. ಮೇಲ್ತುದಿಯಲ್ಲಿ ಹಿತ್ತಾಳೆಯ ಕಳಸವನ್ನು ಹಾಕಿರುತ್ತಾರೆ. ನಂದಿಕೋಲು, ಭಜನೆಮೇಳ ಹೀಗೆ ವಾದ್ಯಗಳ ಸಮೇತವಾಗಿ ದೇವರ ವಿಗ್ರಹವನ್ನು ತಂದು ತೇರಿನಲ್ಲಿ ಕೂರಿಸಿ ಸನಂತರ ದೇವರ ಪೂಜಾರಿ ಅಥವಾ ಮಠದ ಸ್ವಾಮಿಗಳು ಹಸಿರು ನಿಶಾನೆ ತೋರಿದ ನಂತರ ಈ ರಥೋತ್ಸವ ಜರುಗುತ್ತದೆ. ಜಾತ್ರೆಗೆ ಬಂದ ಭಕ್ತರು ನೂರಾರು ಜನ ಸೇರಿಕೊಂಡು ತೇರಿಗೆ ಕಟ್ಟಿದ ಹಗ್ಗವನ್ನು ಎರಡೂ ಕಡೆ ಸಮವಾಗಿ ಎಳೆಯುತ್ತಾರೆ. ಬಹುಮುಖ್ಯವಾಗಿ ಈ ತೇರು ಉತ್ಸವವು ಜಾತ್ರೆ ಮುಗಿಯುವ ಸಂಕೇತವನ್ನು ಸೂಚಿಸುತ್ತದೆ.

ಕನ್ನಡದ ಆದಿ ಕವಿ ಪಂಪ, ರನ್ನರು ಈ ತೇರು ಶಬ್ದವನ್ನು ಬಳಸಿದ್ದರಿಂದ ತೇರಿನ ಪ್ರಾಚೀನತೆಯನ್ನು ಅರಿಯಬಹುದು. ಕೃಷ್ಣ ಇದರಲ್ಲಿ ಕೂತಿದ್ದರಿಂದ ತೇರು ಎಂದರೆ ದೇವರು ಕೂಡುವ, ದೇವತಾ ವಿಗ್ರಹವನ್ನಿಟ್ಟು ಎಳೆಯುವ ಅಲಂಕಾರದ ಬಂಡಿ ಎಂದರ್ಥ ರೂಢಿಗೆ ಬಂದಿರಬಹುದು. ಕ್ರಮೇಣ ಈ ತೇರು ಎಂದರೆ ರಥೋತ್ಸವ ಎಂಬರ್ಥವೂ ವಾಡಿಕೆಗೆ ಬಂದಿದೆ.[೧೧] ಈ ಮಾತನ್ನು ಗಮನಿಸಿದರೆ ತೇರು ಉತ್ಸವವು ಪ್ರಾಚೀನ ಕಾಲದಿಂದಲೂ ನಡೆಯುತ್ತಾ ಬಂದಿರುವುದು ಕಾಣುತ್ತದೆ. ಜಾತ್ರೆ ಮತ್ತು ತೇರು ಉತ್ಸವಗಳು ಒಟ್ಟೊಟ್ಟಿಗೆ ನಡೆಯುತ್ತವೆ.

ಉರುಳು ಸೇವೆ

"ವೈಯಕ್ತಿಕ, ಕೌಟುಂಬಿಕ ಇಲ್ಲವೇ ಸಾಮಾಜಿಕ ಕಾರಣಗಳಿಗಾಗಿ ವ್ಯಕ್ತಿ ಕಟ್ಟಿಕೊಂಡ ಹರಕೆಯ ಫಲವೆ 'ಉರುಳು ಸೇವೆ'. ದೇವಸ್ಥಾನದ ಪ್ರಾಂಗಣದಲ್ಲಿ ಗುಡಿಯ ಸುತ್ತ ಒದ್ದೆ ಬಟ್ಟೆಯಲ್ಲಿ ದೇಹವನ್ನು ಬಲಕ್ಕೆ ಉರುಳಿಸಿಕೊಂಡು ಹೋಗುವ ಒಂದು ಸೇವೆ ದಿಂಡುರುಳು".[೧೨]

ಈ ಆಚರಣೆಯು ಪ್ರಮುಖವಾಗಿ ಸಿದ್ಧಾಪುರವನ್ನೊಳಗೊಂಡಂತೆ ಕೊಪ್ಪಳ ಜಿಲ್ಲೆಯ ಎಲ್ಲಾ ಕಡೆಗಳಲ್ಲಿಯೂ ಕಂಡುಬರುತ್ತದೆ. ಇದಕ್ಕೆ ದೀಡ್‌ನಮಸ್ಕಾರ ಎಂತಲೂ ಕರೆಯುತ್ತಾರೆ. ಊರಿನ ಹಬ್ಬಗಳಲ್ಲಿ ಈ ಆಚರಣೆಯು ವಿಶೇಷವಾಗಿ ನಡೆಯುತ್ತದೆ. ಹರಕೆ ಹೊತ್ತುಕೊಂಡ ಭಕ್ತರು ಜಾತ್ರೆ, ಉತ್ಸವಗಳಲ್ಲಿ ತಾವು ಬೇಡಿಕೊಂಡ ದೇವರಿಗೆ ಉರುಳುಸೇವೆ ಮಾಡುತ್ತಾರೆ. ತಮ್ಮ ಹರಕೆಯು ಫಲಿಸಿದ ನಂತರ ಈ ವಿಧಿಯಾಚರಣೆಯನ್ನು ನಡೆಸುತ್ತಾರೆ. ಜನರು ತಮ.ಗೆ

ಬಂದ ಕಷ್ಟ, ನೋವುಗಳು ದೂರವಾದ ಸಂದರ್ಭದಲ್ಲಿ ಆಯಾ ದೇವರುಗಳಿಗೆ ಬಂದು ಉಪವಾಸವಿದ್ದು ನದಿ, ಹಳ್ಳ, ಬಾವಿಗಳಲ್ಲಿ ಸ್ನಾನ ಮಾಡಿ ಮಡಿಬಟ್ಟೆ ತೊಟ್ಟು ದೇವರ ದರ್ಶನ ಪಡೆದು ಪೂಜೆ ಸಲ್ಲಿಸುತ್ತಾರೆ. ನಂತರ ಇನ್ನುಮುಂದೆ ಯಾವ ಕಷ್ಟಗಳೂ ಬರದೇ ಇರಲಿ ಎಂದು ಬೇಡಿಕೊಂಡು ತಾವು ತಂದ ಅಡುಗೆಯನ್ನು ದೇವರಿಗೆ ನೈವೇದ್ಯ ಮಾಡಿ ನಮತರ ಅದನ್ನು ಪ್ರಸಾದವಾಗಿ ಸ್ವೀಕರಿಸುತ್ತಾರೆ. ಸಿದ್ಧಾಪುರದಲ್ಲಿ ಮೊಹರಂ ಆಚರಣೆಯ ಸಂದರ್ಭದಲ್ಲಿ ಪ್ರತಿ ವರ್ಷವೂ ಉರುಳು ಸೇವೆಯನ್ನು ಮಾಡುತ್ತಾರೆ. ಭಜನೆಮೇಳಗಳ ಮೂಲಕ ಮೆರವಣಿಗೆ ಮಾಡಿ ಉರುಳು ಸೇವೆ ಮಾಡಿ ದರ್ಶನ ಪಡೆಯುತ್ತಾರೆ. ಈ ಆಚರಣೆಯು ಸೌಹಾರ್ಧತೆ, ಸಾಮರಸ್ಯದ ಕುರುಹಾಗಿ ಕಂಲಡುಬರುತ್ತದೆ. ಅದರಂತೆ ಜಿಲ್ಲೆಯ ಕುದರಿಮೋತಿ ಮೊಹರಂ, ಶಹಾಪುರದ ಸಿಲ್ವರ್ ತಾತನ ಉರುಸು ಹೀಗೆ ಪ್ರತಿ ಜಾತ್ರೆ, ಉತ್ಸವ, ಹಬ್ಬದಾಚರಣೆಗಳಲ್ಲಿ ಈ ಆಚರಣೆಯು ಕಂಡುಬರುತ್ತದೆ.

ಓಕುಳಿಯಾಟದ ಆಚರಣೆ

ಸಿದ್ಧಾಪುರವನ್ನೊಳಗೊಂಡಂತೆ ಪಕ್ಕದ ಗ್ರಾಮಗಳಲ್ಲಿ ನಡೆಯುವ ಆಚರಣೆ ಇದಾಗಿದೆ. ಕೆಲವು ಪ್ರದೇಶಗಳಲ್ಲಿ ಯುಗಾದಿಯ ಮರುದಿನ ನಡೆದರೆ, ಇನ್ನೂ ಕೆಲವು ಕಡೆ ಹೋಳಿ ಹುಣ್ಣಿಮೆಯ ಮರುದಿನ ನೆರಯುತ್ತದೆ. ಗ್ರಾಮದ ಎಲ್ಲಾ ಸಮುದಾಯದವರು ಸೇರಿ ಈ ಆಚರಣೆ ಮಾಡುತ್ತಾರೆ. ಲಂಬಾಣಿ ಜನಾಂಗದವರು ತಮ್ಮ ಖುಷಿಗಾಗಿ ಚಂದಾ ಹಣವನ್ನು ವಸೂಲಿ ಮಾಡುತ್ತಾರೆ. ಇದು ಪ್ರಮುಖವಾಗಿ ಹೋಳಿ ಹುಣ್ಣಿಮೆಯ ದಿನ ನಡೆಯುವ ಆಚರಣೆಯಾಗಿದೆ. ಇನ್ನು ಯುಗಾದಿ ಸಂದರ್ಭದಲ್ಲಿ ನಡೆಯುವ ಓಕುಳಿಯಾಟ ಹನುಮಂತ ದೇವರ ಮದುವೆಗೆ ಸಂಬಂಧಿಸಿದ್ದಾಗಿದೆ. ಓಕುಳಿ ಆಟದಲ್ಲಿ ಹಾಲು ಓಕುಳಿ, ನೀರು ಓಕುಳಿ ಎಂದು ಎರಡು ವಿಧಗಳಲ್ಲಿ ಕಂಡುಬರುತ್ತವೆ.

ಯುಗಾದಿಯಿಂದ ಆರಂಭವಾಗಿ ಕಾರಹುಣ್ಣಿಮೆಯವರೆಗೂ ನಿರಂತರವಾಗಿ ನಡೆಯುವ ಈ ಓಕುಳಿಯಾಟದಲ್ಲಿ ಸಮಾಜದ ಕೆಳವರ್ಗದವರು, ಹೆಣ್ಣುಮಕ್ಕಳು ಭಾಗವಹಿಸುವುದು ಕಂಡುಬರುತ್ತದೆ. ಈ ಆಚರಣೆ ವರ್ತಮಾನದ ಸಂದರ್ಭದಲ್ಲಿ, ಸೀಮಿತ ಸಂದರ್ಭದಲ್ಲಿ ಮಾತ್ರ ಕಂಡುನಬರುತ್ತದೆ. ಹಿಂದಿನಷ್ಟು ಕ್ರೂರತೆ ಇರದೇ ಬದಲಾದ ವ್ಯವಸ್ಥೆಗೆ ಹೊಂದಿಕೊಂಡಿದೆ. ಈ ಹಿಂದೆ ಕನಕಗಿರಿ ಕನಕರಾಯನ ಜಾತ್ರೆಯ 'ಮರಿಗಿಚ್ಚಿ' ಆಟ ನಡೆಯುತ್ತಿತ್ತು. ಇದನ್ನು 'ಮಹಿಮರ ಆಟ' ಎಂರಲೂ ಕರೆಯುತ್ತಾರೆ. ಪ್ರಮುಖವಾಗಿ ಇದು ಕನಕರಾಯನ ಮದುವೆಗೆ ಸಂಬಂಧಿಸಿದ ಒಂದು ದಿನದ ಆಚರಣೆಯಾಗಿದೆ. ಇದರಲ್ಲಿ ದೇವದಾಸಿಯರಾದ ಹರಿಜನ ಹೆಣ್ಣುಮಕ್ಕಳ ಪಾತ್ರ ಹೆಚ್ಚಾಗಿ ಇತ್ತು. ಈ ವರ್ಗದ ಹೆಣ್ಣುಮಕ್ಕಳು ಕನಕರಾಯನ ಮದುವೆ ದಿನ ಅರೆಬೆತ್ತಲಾಗಿ ಕುಣಿಯುತ್ತಿದ್ದರು. ಆಗ ಯಾದವ ಕುಲದ ಗೊಲ್ಲರು ಕನಕರಾಯನ ವೇಷದಲ್ಲಿ ಬಂದು ಅವರ ಜೊತೆ ಕುಣಿಯಬೇಕಿತ್ತು. ಕುಣಿಯುತ್ತಾ ಕುಣಿಯುತ್ತಾ ಬೆತ್ತಲೆಯಾದ ಹೆಣ್ಣುಮಗಳು ಸಂಭೋಗದ

ಆಸನದಲ್ಲಿ ಕೂಡಬೇಕಿತ್ತು. ಆಗ ಗೊಲ್ಲ ಕುಲದ ವ್ಯಕ್ತಿ ಆಕೆಯ ಸೇರಿದ ನಂತರ ಈ ಆಚರಣೆ ಮುಕ್ತಾಯವಾಗುತ್ತಿತ್ತು. ವರ್ತಮಾನದ ಸಂದರ್ಭಕ್ಕೆ ಈ ಆಚರಣೆಯನ್ನು ನಿಲ್ಲಿಸಲಾಗಿದೆ. ಈ ನಿಷೇಧವು ೧೯೮೫ರ ಆಸುಪಾಸಿನಲ್ಲಿ ನಿಲ್ಲಿಸಿರುವುದಾಗಿ ಕನಕರಾಯನ ದೇವಸ್ಥಾನದ ಟ್ರಸ್ಟ್ ಕಮಿಟಿ ಸದಸ್ಯರಾದ ದುರ್ಗಾದಾಸ್ ಯಾದವ್ ರವರು ವಿವರಿಸಿದರು. ಆದರೆ ಹನುಮಂತ ದೇವರ ಹೆಸರಿನಲ್ಲಿ ನಡೆಯುವ ಸೇವೆಯು ಇಷ್ಟೊಂದು ಕ್ರೂರವಾಗಿ ಇಲ್ಲ. ಏನೇ ಆದರೂ ಈ ಆಚರಣೆಯು ಕೆಳವರ್ಗದ ಸ್ತ್ರೀಯರ ಶೋಷಣೆಯ ಮುಖವಾಗಿ ಕಾಣುತ್ತದೆ.

ಇನ್ನೊಂದು ನೆಲೆಯಲ್ಲಿ ಮಹದೇವ ಶಂಕನಪುರದವರು ತಮ್ಮ 'ಮಾರುಹಬ್ಬಗಳು' ಕೃತಿಯಲ್ಲಿ ಪು. ಸಂ. ೧೯೯೯ ರಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಡುತ್ತಾರೆ. "ಓಕುಳಿ ಆಡುವುದು ಶೃಂಗಾರದ ಸಂಕೇತವಾಗಿದೆ. ಜೀವಸೃಷ್ಟಿಯ ಆರಂಭವನ್ನು ಸೂಚಿಸುವ ಆಚರಣೆಯಾಗಿ ಉಳಿದಿದೆ. ಈ ಓಕುಳಿಯಲ್ಲಿ ಪರಸ್ಪರ ಬೆರೆಯುವ ಮೂಲಕ ಸೃಷ್ಟಿಕಾರ್ಯಕ್ಕೆ ಇಂಬು ಕೊಟ್ಟಂತಾಗುತ್ತದೆ. ಒಟ್ಟಿನಲ್ಲಿ ಕೆಂಪು ನೀರನ್ನು ಶೃಂಗಾರದಾಟಕ್ಕೆ, ಸೃಷ್ಟಿಕ್ರಿಯೆಗೆ ಹತ್ತಿರವಾದ ಫಲಸಮೃದ್ಧಿಯನ್ನು ಬಯಸುವ ಆಶ್ಯವಾಗಿದೆ ಎಂದು ಹೇಳಬಹುದು. ಇದು ಒಂದು ಸಮೃದ್ಧಿಯ ಸಂಕೇತವಾಗಿದೆ.[೧೩]

ಬಲಿ ಆಚರಣೆ

ಬಲಿ ಆಚರಣೆಯು ಪ್ರಾಚೀನ ಕಾಲದಿಂದಲೂ ಒಂದು ಸಂಪ್ರದಾಯವಾಗಿ ಬೆಳೆದಿದೆ. ಶಿಷ್ಟ ಮತ್ತು ಜನಪದ ದೇವರುಗಳನ್ನು ಪ್ರತ್ಯೇಕಗೊಳಿಸುವ ಈ ಆಚರಣೆಯಲ್ಲಿ ಸಾಮಾನ್ಯವಾಗಿ ಕುರಿ, ಕೋಳಿ, ಮೇಕೆ, ಕೋಣಗಳನ್ನು ಬಲಿಕೊಡುತ್ತಾರೆ. ಹೆಚ್ಚಾಗಿ ಸ್ತ್ರೀ ದೇವರುಗಳಲ್ಲಿ ನಡೆಯುವ ಈ ಆಚರಣೆ ಪ್ರಾದೇಶಿಕವಾಗಿ ವಿಭಿನ್ನತೆಯನ್ನು ಹೊಮದಿದೆ. ದಕ್ಷಿನ ಕನ್ನಡ ಹಾಗೂ ಉತ್ತರ ಕನ್ನಡ ಭಾಗದಲ್ಲಿ ಕೋಣನ ಬಲಿ ಹೆಚ್ಚಾಗಿ ನಡೆದರೆ, ಉತ್ತರ ಕರ್ನಾಟಕದಲ್ಲಿ ಕುರಿ, ಕೋಳಿ ಬಲಿಯಾಚರಣೆ ಹೆಚ್ಚು ಕಂಡುಬರುತ್ತದೆ. ಕೊಪ್ಪಳ ಜಿಲ್ಲೆಯ ಸಿಂದೋಗಿಯಲ್ಲಿ ಬೀರಪ್ಪನ ಜಾತ್ರೆಯಲ್ಲಿ ಮುದ್ದವ್ವನಿಗೆ ಬಲಿಕಾರ್ಯವನ್ನು ಕೈಗೊಳ್ಳುವುದೆ ಮೂಲಕ ಎಡೆಯನ್ನು ಪ್ರಸಾದದ ರೂಪದಲ್ಲಿ ವಿನಿಯೋಗಿಸಲಾಗುತ್ತದೆ. ಆದರೆ ಇಲ್ಲಿಯ ವಿಶಿಷ್ಟತೆ ಏನೆಂದರೆ, ಬೀರಪ್ಪನಿಗೆ ಮಾಂಸಾಹಾರದ ನೈವೃದ್ಯ ಅರ್ಪಿಸುವುದಿಲ್ಲ. ಗ್ರಾಮ ದೇವರುಗಳು ಜನಪದರ ಜೀವನದ ಪ್ರತೀಕಗಳು. ಇವು ವ್ಯಾಪಕತೆಯನ್ನು ಪಡೆದಿಲ್ಲ. "ತಮ್ಮ ಶಕ್ತಿಯ ಪರಿಮಿತಿಯೊಳಗೆ ಪ್ರಭಾವ ಬೀರುವ ಇವುಗಳಲ್ಲಿ ಹೆಚ್ಚಿನವು ಹೆಣ್ಣು ದೇವತೆಗಳು. ಗಂಡು ದೇವರುಗಳು ಹೆಣ್ಣು ದೇವತೆಗಳ ಸಹೋದರರಾಗಿಯೂ, ಗಂಡಂದಿರಾಗಿಯೂ ಕಾಣಿಸಿಕೊಳ್ಳುತ್ತವೆ".[೧೪]

ಹಿಂದಿನ ಕಾಲದಲ್ಲಿ ರೋಗ ರುಜಿನಗಳಿಂದ ಮಳೆ, ಬೆಳೆ ಇಲ್ಲದೆ ನೊಂದ ಜನ ತಮ್ಮ ಕಷ್ಟಗಳ ನಿವಾರಣೆಗಾಗಿ ದೇವತೆಗೆ ಬಲಿ ನೀಡುವುದಾಗಿ ಮೊರೆ ಹೋಗುತ್ತಿದ್ದರು. ಹೀಗೆ ಬಲಿ ನೀಡುವುದರಿಂದ ದೇವಿ ತೃಪ್ತಳಾಗಿ ರೋಗ ರುಜಿನಗಳನ್ನು ನಿವಾರಣೆ ಮಾಡುತ್ತಾಳೆ ಎಂಬ

ನಂಬಿಕೆ ಬಲವಾಗಿ ನೆಲೆಯೂರಿತು. ಇದರಿಂದ ಮಳೆ ಬೆಳೆಯಾಗಿ ಸಮೃದ್ಧತೆಯನ್ನು ಹೊಂದಿ ಜನರು ಮಾನಸಿಕವಾಗಿ ತೃಪ್ತಿಯಾಗುತ್ತಿದ್ದ ಈ ನಂಬಿಕೆಯೇ ಬಲಿ ಆಚರಣೆಗೆ ಮೂಲವಾಯಿತು. ಬಲಿ ನೀಡುವ ಪ್ರಾಣಿಯನ್ನು ವರ್ಷದ ಮುಂಚಿನಿಂದಲೇ ಬೆಳೆಸಲಾಗುತ್ತದೆ. ಹೀಗೆ ಬಿಟ್ಟ ಪ್ರಾಣಿಯೂ ಎಲ್ಲಿ ಬೇಕೆಂದರಲ್ಲಿ ಮೇಯಬಹುದು. ಜಾತ್ರೆಯ ಮುಂಚೆ ಈ ಪ್ರಾಣಿಯನ್ನು ತಂದು ಸ್ವಚ್ಛಗೊಳಿಸಿ, ಹೂಗಳಿಂದ ಅಲಂಕರಿಸಿ ಹಣೆಗೆ ಅರಿಷಿಣ-ಕುಂಕುಮವಿಟ್ಟು ಪೂಜಿಸುತ್ತಾರೆ. ಈ ಪ್ರಾಣಿಯ ತಲೆ ಕಡಿಯುವ ಮುಂಚೆ ಆ ಪ್ರಾಣಿಯು ತಲೆ ಆಡಿಸಿ ಸಮ್ಮತಿ ಸೂಚಿಸಬೇಕು ಎಂಬ ನಂಬಿಕೆಯೂ ಇದೆ.

ಕೋಣನ ಬಲಿಯ ಆಚರಣೆಯ ಹಿಂದೆ ಇರಬಹುದಾದ ಆಸಯ ಅಥವಾ ಜೀವನ ವಿಧಾನ ಯಾವುದೆಂದು ಹೇಳುವುದು ಅಷ್ಟು ಸುಲಭವಾದುದಲ್ಲ. "ರೈತರು ಬೆಳೆದ ಬೆಳೆಯನ್ನು ಹಿಂಡು ಹಿಂಡಾಗಿ ಬಂದು ನಾಸ ಮಾಡುತ್ತಿದ್ದ ಕಾಡೆಮ್ಮೆಗಳನ್ನು ಕೊಲ್ಲುವ ಹಿಂದಿನ ಆಶಯವೂ ಇರಬಹುದು. ಇಂಥ ಪ್ರಾಣಿಗಳನ್ನು ಮಾರೆಮ್ಮ ನಿಯಂತ್ರಿಸುತ್ತಾಳೆ ಎಂಬ ನಂಬಿಕೆಯೂ ಜನರಿಗಿದ್ದಿರಬಹುದು. ಮಾರಮ್ಮ ಮರದಮ್ಮನೇ ಆಗಿದ್ದಲ್ಲಿ ವಿರೋಧವಿದ್ದೇ ಇರುತ್ತದೆ. ಅಥವಾ ಮತ್ತೊಂದು ರೀತಿಯಲ್ಲಿ ಯೋಚಿಸುವುದಾದರೆ ಸೃಷ್ಟಿಯ ಮತ್ತು ಸಮೃದ್ಧಿಯ ಬಲಿಷ್ಠ ಸಂಕೇತವಾದ ಕೋಣವನ್ನು ಕಡಿದು ಅದರ ರಕ್ತವನನು ಹೊಲಕ್ಕೆ ಚೆಲ್ಲುವ ಮೂಲಕ ಬೆಳೆ ಹುಲುಸಾಗಲಿ ಎಂಬ ಆಶಯವೂ ಇರಬಹುದು".[೧೫]

ಪ್ರಸಕ್ತ ಕೆಲವು ಕಡೆಗಳಲ್ಲಿ ಕೋಣನ ಬಲಿಯನ್ನು ನಿಷೇಧಿಸಿರುವುದರಿಂದ ಕೋಣನ ಬಲಿಯ ಆಚರಣೆ ಕೇವಲ ಸಾಂಕೇತಿಕವಾಗಿ ನಡೆಯುತ್ತದೆ. ಕೋಣನ ಬದಲಿಗೆ ಬೂದುಗುಂಬಳ ಕಾಯಿಯನ್ನು ಕಡಿದು ಅದರಲ್ಲಿ ಕುಂಕುಮವನ್ನು ಬೆರೆಸಲಾಗುಇವುದು. ಈ ಪದ್ಧತಿಯು ಕೋಣನ ಬಲಿಯ ಸಂಕೇತವನ್ನು ಸೂಚಿಸುತ್ತದೆ. ಉತ್ತರ ಕನ್ನಡ ಜಿಲ್ಲೆಯ ಸಿರ್ಸಿಯ ಮಾರಿಕಾಮಬ ದೇವಿಯ ಜಾತ್ರೆಯಲ್ಲಿ ಕೋಣನ ರಕ್ತವನ್ನು ಸಿರಂಜಿನ ಮೂಲಕ ತೆಗೆದು ಪೂಜಿಸುವ ಸಂಪ್ರದಾಯವಿದೆ. ಹಿಂದಿನ ಕಾಲದಲ್ಲಿ ಕೋಣನ ಬಲಿಯ ಸನ್ನಿವೇಶ ಅತ್ಯಂತ ಅತ್ಯಂತ ಭಯಾನಕವಾಗಿತ್ತು. ದೇವಿಯು ತನ್ನ ಮಾದಿಗ ಪತಿಯನ್ನು ಆತನು ತನ್ನ ಪರಕಾಯ ಪ್ರವೃಶಶಕ್ತಿಯಿಂದ ಕೋಳಿ, ಕುರಿ, ಕೋಣಗಳನ್ನು ಪ್ರವೇಶಿಸಿದರೂ ಅವನನ್ನು ಆ ಎಲ್ಲ ರೂಪಗಳಲ್ಲಿ ಸಂಹರಿಸಿದ್ದನ್ನು ಸೂಚಿಸುವ ಸಂಕೇತವೆನ್ನುವಂತೆ ಲೆಕ್ಕಕ್ಕೆ ಸಿಗದಷ್ಟು ಕೋಳಿ, ಕುರಿಗಳು ಇಂದಿಗೂ ಬಲಿಯಾಗುತ್ತಿವೆ. ಉತ್ತರ ಕರ್ನಾಟಕದ ಈ ಭಾಗದಲ್ಲಿ ದುರುಗಮ್ಮ ಮತ್ತು ದ್ಯಾಮವ್ವ ದೈವಗಳಿಗೆ ಬಲಿ ಆಚರಣೆ ಹೆಚ್ಚಾಗಿ ನಡೆಯುತ್ತದೆ. ಆಂಧ್ರದ ಹಳ್ಳಿಗಳ ಮುಖ್ಯ ದೇವತೆ ಹೊಲಗಳ ತಾಯಿ ಪೋಲೇರಮ್ಮ. ಈಕೆಯ ಗಂಡ ಕೋಣ. ಜಾತ್ರೆಯಲ್ಲಿ ಹೋತದ ಬಲಿ, ಚರಗ ಚೆಲ್ಲುವುದು, ಬೆಂಕಿ ತುಳಿಯುವುದು, ಸಿಡಿ ಆಡುವುದು ಈ ಎಲ್ಲ ಆಚರಣೆಗಳು ಹೊಲೆಯ ಹೊಲದ ಜೊತೆ ಸಂಬಂಧವಿದ್ದುದನ್ನು ಸೂಚಿಸುತ್ತದೆ. ಹೊಲಗಳ ಮೊದಲ ಒಡೆಯರಾದ ಹೊಲೆಯರ

ದೇವತೆ ಪೋಲೇರಮ್ಮ ಇವರು ಹೊಲವನ್ನು ಕೋಣಗಳಿಂದ ಉಳುತ್ತಿದ್ದರು. ಫಲ ಕೊಡುವುದಕ್ಕೆ ಅನೇಕ ವಿಧದಿಂದ ಕಾರಣವಾಗುವ ಕೋಣವನ್ನು ಆಕೆಯ ಗಂಡ ಎಂದಿರುವುದೂ ಸಹಜ. ಭೂಮಿಯ ಫಲವಂತಿಕೆ ಗಂಡಿನ ಬಲಿಯನ್ನು ಅವಲಂಬಿಸಿದ್ದರಿಂದ ಕೋಣನ ಬಲಿ ಮಾನವ ಬಲಿಯಸ್ಥಾನದಲ್ಲಿ ಪ್ರಚಾರವಾಯಿತು.[೧೬] ಕೋಣನ ಬಲಿಯ ರಹಸ್ಯಾರ್ಥವನ್ನು ಕುರಿತು ಹಿರೇಮಠರ ಈ ಮಾತನ್ನು ಗಮನಿಸಬಹುದಾಗಿದೆ.

ಬಹುಮುಖ್ಯವಾಗಿ ಈ ಆಚರಣೆಯು ಭೂಮಿಯ ಫಲವತ್ತತೆಗಾಗಿ, ಸ್ತ್ರೀಶಕ್ತಿಯ ಫಲವಂತಿಕೆಗಾಗಿ, ಪುರುಷ ಶಕ್ತಿಯ ಬಲಿ ಅಗತ್ಯವೆಂಬ ನಂಬಿಕೆ ಬೇರೂರಿದೆ. ದುರುಗವ್ವ ಮತ್ತು ದ್ಯಾಮವ್ವಗಳ ಕಥೆ ಹಾಗೂ ಜಾತ್ರೆಯ ಪ್ರಮುಖ ಆಶಯವೂ ಸಹ ಸಾತ್ವಿಕ ಮತ್ತು ತಾಮಸಗಳ ಸರಿಬೆರಕೆಯ ಹಿನ್ನೆಲೆಯಲ್ಲಿ ರಚಿತವಾದುದನ್ನು ನೋಡಿದಾಗ ಒಂದು ಬಗೆಯ ಸಂಕರ ಬದುಕಿನ ಗಟ್ಟಿತನಕ್ಕೆ ಪ್ರಕೃತಿಯ ಬೆಳವಣಿಗೆಗೆ ಅವಶ್ಯವೆಂದು ತೋರುತ್ತದೆ.

ಬಲಿ ಮತ್ತು ಪುರಾಣದ ಸಂಪ್ರದಾಯವು ಮುಂದುವರೆದುಕೊಂಡು ಬರಲು ಚತುರ್ವರ್ಣ ನೀತಿ ನೆಲೆಯೂರಿರುವುದು ಮತ್ತು ದೇವರನ್ನು ಸುಪ್ರೀತಗೊಳಿಸುವುದು ಈ ಎರಡು ಉದ್ದೇಶಗಳು ಕಂಡುಬರುತ್ತವೆ. "ಆದಿಮಾನವನು ಇತರ ಬುಡಕಟ್ಟುಗಳೊಂದಿಗೆ ಮಾತ್ರವಲ್ಲದೇ ಪ್ರಾಣಿವರ್ಗಗಳೊಂದಿಗೆ ಭ್ರಾತೃತ್ವವನ್ನು ಹೊಂದಲು ಬಯಸಿದನು. ಇದರಿಂದಾಗಿ ರಕ್ತ ವಿನಿಮಯಕ್ಕೆ ಇದು ದಾರಿಮಾಡಿಕೊಟ್ಟಿತು."[೧೭] ಎಂಬ ಎಲ್ಮೋರರ ಅಭಿಪ್ರಾಯ ಇಂದಿಗೂ ಪ್ರಸ್ತುತವೆನಿಸುತ್ತದೆ.

ಪ್ರಸಕ್ತ ಆಧುನಿಕ ವ್ಯವಸ್ಥೆಯಲ್ಲಿ ಅನೇಕ ಕಟ್ಟುಪಾಡುಗಳಿದ್ದರೂ, ಭಕ್ತಿಯಿಮದ ನಡೆದುಕೊಂಡು ಬಂದ ಈ ಬಲಿ ಸಂಪ್ರದಾಯವು ಇಂದಿಗೂ ಅವ್ಯಾಹತವಾಗಿ ಆಚರಣೆಯಲ್ಲಿದೆ. "ಪ್ರಾಣಿ ಬಲಿಕೊಡುವ ಪ್ರಕ್ರಿಯೆ ಕೇವಲ ಭಕ್ತಿಯಿಂದ ಅಲ್ಲ. ಅದರ ಹಿಂದೆ ಭಯವೇ ಜಾಸ್ತಿ ಇರುತ್ತದೆ. ಜನರು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಬಲಿಕೊಡುವರು. ದೈವಕ್ಕೆ ಬಲಿಕೊಡದಿದ್ದರೆ ಜನರ ಮೇಲೆ ಸಿಟ್ಟಿಗೆದ್ದು ಅವರ ದೈಹಿಕ ಆರೋಗ್ಯವನ್ನು ಕೆಡಿಸಬಹುದು. ಹೊಲದ ಬೆಳೆ ನಾಶವಾಗಲೂಬಹುದು. ಮನೆಯಲ್ಲಿ ತಾವು ಸಾಕಿದ ಪಶುಗಳು ರೋಗದಿಂದ ಸಾಯಬಹುದು ಎಂಬ ಭೀತಿಯಿಂದ ಪ್ರಾಣಿಬಲಿ ಕೊಡುವುದು ಸಾಮಾನ್ಯ.[೧೮] ಪ್ರಸ್ತುತ ಸಿದ್ಧಾಪುರ ಮತ್ತಿತರ ಗ್ರಾಮಗಳಲ್ಲಿ ಬಲಿ ಆಚರಣೆ ಸಾಮಾನ್ಯವಾಗಿ ಸ್ತ್ರೀ ದೈವಗಳಾದ ದುರುಗಮ್ಮ, ದ್ಯಾಮವ್ವ, ಮಾರೆಮ್ಮಗಳಿಗೆ ನಡೆಯುವುದು ಹೆಚ್ಚಾಗಿ ಕಂಡುಬರುತ್ತದೆ. ಒಟ್ಟಾರೆಯಾಗಿ ಕೊಪ್ಪಳ ಜಿಲ್ಲೆಯ ದೊಣ್ಣೆಗುಡ್ಡದ ದುರುಗಮ್ಮ, ಹಟ್ಟಿಯ ದುರುಗಮ್ಮ, ಬೂದುಗುಂಪಾ ಕರಿಯಮ್ಮ, ಕಬ್ಬರಗಿ ಮಾಸ್ತೆಮ್ಮ ಹೀಗೆ ಇತರ ದೈವದ ಜಾತ್ರೆಗಳನ್ನು ಕಾಣಬಹುದು.

ಕೊನೆಟಿಪ್ಪಣಿಗಳು

೧. ಜೀನಹಳ್ಳಿ ಸಿದ್ಧಲಿಂಗಪ್ಪ., *ಮಲೆನಾಡು ಜಾನಪದ*, ಪುಟ – ೧೫೮

೨. ನಾಯಕ ಹಾ.ಮಾ., *ಜಾನಪದ ಸ್ವರೂಪ*, ಪುಟ – ೫೫

೩. ರಾ.ಗೌ. ಮತ್ತು ವಸಂತಕುಮಾರ ಎಂ.ಸಿ., *ಜಾನಪದ ನಂಬಿಕೆಗಳು*, ಪುಟ – ೦೮

೪. ದಾಸೇಗೌಡ ಜಿ.ಸಿ., *ಜಾನಪದ ನಂಬಿಕೆಗಳು.*, ಪುಟ – ೧೦

೫. ಜೀನಹಳ್ಳಿ ಸಿದ್ಧಲಿಂಗಪ್ಪ., *ಮಲೆನಾಡು ಜಾನಪದ*, ಪುಟ – ೨೦

೬. ಪುರುಷೋತ್ತಮ ಬಿಳಿಮಲೆ., *ಹುಲಿಗೆಮ್ಮ*, ಪುಟ – ೪೩

೭. ಜವರೇಗೌಡ ದೇ., *ಜಾನಪದ ಅಧ್ಯಯನ.*, ಪುಟ – ೩೪೨

೮. ಶಿವಕುಮಾರಸ್ವಾಮಿ ಸಿ.ಎಸ್., (ಸಂ) *ಕರ್ನಾಟಕ ಜಾತ್ರೆಗಳು*, ಪುಟ – ೫೭

೯. ಅದೇ ಪುಟ – ೫೩

೧೦. ಅದೇ ಪುಟ – ೭

೧೧. ಅದೇ ಪುಟ – ೨೫

೧೨. ನಾಗೇಗೌಡ ಎಚ್.ಎಲ್., (ಸಂ) *ಕನ್ನಡ ಜಾನಪದ ವಿಶ್ವಕೋಶ*, ಪುಟ – ೯೫

೧೩. ಮಹದೇವ ಶಂಕನಪುರ., *ಮಾರಿಹಬ್ಬಗಳು*, ಪುಟ – ೧೬೯

೧೪. ಹಾ. ಮಾ. ನಾಯಕ್ (ಸಂ)., *ಕರ್ನಾಟಕ ವಿಷಯ ವಿಶ್ವಕೋಶ*, ಪುಟ – ೧೧

೧೫. ಹಿರೇಮಠ ಎಸ್.ಎಸ್., *ಜಾತ್ರೆಗಳು*, ಪುಟ – ೬೩

೧೬. W. T. Elmere, *Dravidian Gods in Modern Hinduism*, Page - 28

೧೭. ನಾಗಲೋಟಿಮಠ ಸ. ಜ., *ಉತ್ತರ ಕರ್ನಾಟಕದ ಪ್ರಾಣಿಬಲಿ*, ಪುಟ – ೧೧

* * *

ಅಧ್ಯಾಯ – ಐದು
ಸಮಾರೋಪ

ಅಧ್ಯಾಯ – ಐದು
ಸಮಾರೋಪ

ಕೊಪ್ಪಳ ಜಿಲ್ಲೆಯು ಶಿಲಾಯುಗ ಕಾಲದಿಂದಲೂ ಮಾನವನ ವಾಸದ ನೆಲೆಯಾಗಿತ್ತು. ಶಿಲಾಯುಗ ಕಾಲದ ಬೇರೆ ಬೇರೆ ಸಂಸ್ಕೃತಿಗಳು ಬೆಳೆದು ಬಂದಿದ್ದು, ಇತಿಹಾಸ ಆರಂಭಕಾಲಕ್ಕೆ ಅಶೋಕನ ಶಿಲಾಶಾಸನಗಳನ್ನು ಕೊಪ್ಪಳದ ಗವಿಮಠದ ಕೆರೆಯ ಹೆಬ್ಬಂಡೆಯಲ್ಲಿ ಹೊಂದಿರುವುದು. ಗಂಗಾವತಿಯು ಕೂಡ ಕೊಪ್ಪಳ ಜಿಲ್ಲೆಯ ಒಂದು ತಾಲೂಕಾಗಿದ್ದು, ಇದು ಕೂಡ ಶಿಲಾಯುಗದ ಕಾಲದಿಂದಲೇ ಇತಿಹಾಸವನ್ನು ಹೊಂದಿದೆ. ಇಲ್ಲಿ ಸೂಕ್ಷ್ಮಶಿಲಾಯುಗ, ನವಶಿಲಾಯುಗ, ತಾಮ್ರಯುಗ, ಕಬ್ಬಿಣದ ಬೃಹತ್ ಶಿಲಾಯುಗ, ಜಂತಗಲ್, ಹಿರೇಬೆಣಕಲ್ಲ ನಲ್ಲಿ ನೋಡಬಹುದು. ಈ ಕಾಲದ ಗವಿಚಿತ್ರ ಹಾಗೂ ಬಯಲು ಬಂಡೆ ಕೊರೆದು ಚಿತ್ರಗಳು ತಾಲೂಕಿನಲ್ಲಿ ವ್ಯಾಪಕವಾಗಿ ಕಂಡುಬಂದಿವೆ.

ಇತಿಹಾಸ ಕಾಲದಲ್ಲಿ ಗಂಗಾವತಿಯು ಅನೇಕ ರಾಜರು, ಮಹಾರಾಜರು, ಹೈದರಾಬಾದ್ ನಿಜಾಮರ ಆಳ್ವಿಕೆಯನ್ನು ನೋಡುತ್ತೇವೆ. ಅದರಲ್ಲಿ ವಿಶೇಷವಾಗಿ ೧೧ ನೇ ಶತಮಾನದಲ್ಲಿ ಕಲ್ಯಾಣಿ ಚಾಲುಕ್ಯರ ಮಾಂಡಲಿಕರಾದ ನೊಳಂಬ ಪಲ್ಲವರು,ನೇರವಾಗಿ ಗಂಗಾವತಿ ಪ್ರವೇಶದ ಮಿಶ್ರ ನಾರಾಯಣವನ್ನು ತಮ್ಮ ರಾಜ್ಯದ ಎರಡನೇ ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಾರೆ.

೧೩೩೬ ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದಾಗ ತಾಲೂಕಿನ ಆನೆಗೊಂದಿ ಈ ಸಾಮ್ರಾಜ್ಯದ ಮೊದಲನೇ ರಾಜಧಾನಿಯಾಗಿತ್ತು, ವಿಜಯನಗರ ಪತನದ ನಂತರ ಆನೆಗುಂದಿಯಲ್ಲಿ ಅರವೀಡು ವಂಶಸ್ಥರ ನರಪತಿ ಸಂಸ್ಥಾನ ಅಸ್ತಿತ್ವಕ್ಕೆ ಬಂದಿತು. ಈ ಮನೆತನ ೧೯೪೮ ವರೆಗೆ ಅಸ್ತಿತ್ವದಲ್ಲಿತ್ತು.

ಅದೇ ರೀತಿಯಾದ ತಾಲೂಕಿನ ಕನಕಗಿರಿಯಲ್ಲಿ ಗುಜ್ಜಲ ವಂಶದ ನಾಯಕ ಅರಸರು ವಿಜಯನಗರ ಸಾಮ್ರಾಜ್ಯದ ಮಾಂಡಲಿಕರಾಗಿ ೧೪೩೬ ರಿಂದ ೧೮೭೨ ರವರೆಗೆ ೧೨ ಜನ

ನಾಯಕರು ಆಡಳಿತ ನಡೆಸಿದ್ದು,ಮುಮದೆ ಹುಲಿಹೈದರ್ ಸಂಸ್ಥಾನ ೧೮೨೨-೧೯೪೭ ರವರೆಗೆ ಅಸ್ತಿತ್ವದಲ್ಲಿತ್ತು. ಮುಂದೆ ಆನೆಗುಂದಿ ಸಂಸ್ಥಾನ ನಿಜಾಂರ ಕಾಲ, ಹೈದರಾಬಾದ್ ವಿಮೋಚನಾ ಚಳುವಳಿ,ಭೂಗತ ಹೋರಾಟ, ಸ್ವತಂತ್ರ ದಿನಾಚರಣೆ,ಸಭೆ, ಸಮ್ಮೇಳನಗಳು ರಾತ್ರೋರಾತ್ರಿ ನಿಜಾಂ ಇಲಾಖೆಯಿಂದ ಗುಪ್ತವಾಗಿ ರಜಾಕರರ ಚಟುವಟಿಕೆಗಳು ಬಗ್ಗೆ ಸಮಾಚಾರ ಸಂಗ್ರಹಿಸುವುದು, ಕೇಂದ್ರ ಸರ್ಕಾರ ನಿಜಾಂ ರಾಜ್ಯದ ಮೇಲೆ ಹಾಕಿದ ಆರ್ಥಿಕ ದಿಗ್ಬಂಧನೆ.

ಹೀಗೆ ಈ ಎಲ್ಲಾ ರಾಜಕೀಯ ಆಳ್ವಿಕೆಗಳ ಪರಿಣಾಮವಾಗಿ ತಾಲೂಕಿನ ಪ್ರತಿ ಗ್ರಾಮಗಳು ಚರಿತ್ರೆಯ ಭಾಗಗಳಾಗಿದ್ದು,ಒಂದಲ್ಲ ಒಂದು ಸಾಂಸ್ಕೃತಿಕ ಅವಶೇಷಗಳನ್ನು ಹೊಂದಿವೆ. ಈ ಗ್ರಾಮಗಳ ಪರಿಸರದ ಜೊತೆಗೆ ಸಾಂಸ್ಕೃತಿಕ ಇತಿಹಾಸವನ್ನು ಕಂಡುಕೊಳ್ಳುವುದರ ಮೂಲಕ ಅಧ್ಯಾಯವನ್ನು ಮಾಡಿ, ಅಲ್ಲಿನ ಚರಿತ್ರೆಯ ಸಂಸ್ಕೃತಿಕ ಸಮೀಕ್ಷೆಯ ಮೂಲಕ ಘಟನೆಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

ಈ ಅಧ್ಯಯನದಲ್ಲಿ ಕಂಡುಬರುವ ಫಲಿತಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

ಸಿದ್ದಾಪುರ ಮತ್ತು ಬರಗೂರು, ಉಳೇನೂರು ಬೆನ್ನೂರು,ಈಳಿಗನೂರು ಗ್ರಾಮ ಪರಿಸರವನ್ನು ಚಾರಿತ್ರಿಕ ಮತ್ತು ಸಾಂಸ್ಕೃತಿಕವಾಗಿ ಅಧ್ಯಯನ ಮಾಡಿದಾಗ ಅಲ್ಲಿನ ಪರಿಸರ ದೃಷ್ಟಿಯಿಂದಾಗಿ ತನ್ನದೇ ಯಾದ ವೈಶಿಷ್ಟವನ್ನು ಹೊಂದಿದೆ. ಭಾರತವು ಪ್ರತಿಯೊಂದು ಹಳ್ಳಿಯ ನಾಡು ಪ್ರಾಚೀನ ಪರಂಪರೆಯನ್ನು ಉಳಿಸಿಕೊಂಡು ಹೋಗುವುದು ಅದರ ಪ್ರಗತಿಯ ಮುಖ್ಯ ಉದ್ದೇಶವಾಗಿದೆ.

ಸಿದ್ದಾಪುರ ಪರಿಸರ ಗ್ರಾಮಗಳ ಪರಿಚಯಗಳನ್ನು ಸ್ಥಳ ನಿರ್ದೇಶನದ ಮೂಲಕ ಗುರುತಿಸಲಾಗಿದ್ದು ಸಿದ್ದಾಪುರ ತಾಲೂಕಿನ ಪ್ರಮುಖ ಗ್ರಾಮಗಳಲ್ಲಿ ಒಂದು. ಸಿದ್ದಾಪುರ ಗ್ರಾಮವು ಹೋಬಳಿ ಯಾಗಿದ್ದು ಅದರ ಸುತ್ತ-ಮುತ್ತಲೂ ಹಳ್ಳಿಗಳಲ್ಲೊಂದಾದ ಬರಗೂರು, ಉಳೇನೂರು, ಬೆನ್ನೂರು ಮತ್ತು ಈಳಿಗನೂರು ಕೂಡ ಒಂದಾಗಿದೆ. ಸಿದ್ದಾಪುರ ಗ್ರಾಮವು ವ್ಯಕ್ತಿವಾಚಕವಾದದ್ದು ಸ್ಥಳನಾಮವನ್ನು ಬೆನ್ನೂರು ಸುತ್ತಲೂ ಕರಷಿ ಆವೃತ್ತಿದಿಂದಾಗಿ ಅದು ರೂಡಿನಾಮವನ್ನು ಹೊಂದಿದೆ. ಕ್ರಮೇಣವಾಗಿ ಉಳೆನೂರು ಎಂದು ಹೆಸರು ಬಂದಿರುವುದಾಗಿದೆ.

ಈ ಪರಿಸರದ ಸಾಮಾಜಿಕ ವ್ಯವಸ್ಥೆಯನ್ನು ಕುರಿತಾಗಿ ವಿವರಿಸಲಾಗಿದೆ. ಇದೇ ಪರಿಸರದಲ್ಲಿ ಸಮಾಜವನ್ನು ನೋಡಿದಾಗ ಮಾನವರು ಸಮಾಜ ಜೀವಿಗಳು,ಸಮಾಜವಿಲ್ಲದೆ ಒಬ್ಬಂಟಿಯಾಗಿ ಜೀವಿಸಲು ಅವರು ಇಚ್ಛಿಸುವುದಿಲ್ಲ. ಹಾಗೂ ಮಾನವ ಸಮಾಜವೆಂಬ ಚೌಕಟ್ಟಿನ ಹೊರತಾಗಿ "ಮಾನವ ವ್ಯಕ್ತಿತ್ವ" ರೂಪಗೊಳ್ಳುವುದೇ ಇಲ್ಲವೆಂಬುದನ್ನು ತಿಳಿಯಬಹುದು. ಈ ಪರಿಸರದಲ್ಲಿ ಕುಟುಂಬವನ್ನು ಕಂಡಾಗ ಅತಿಹೆಚ್ಚಾಗಿ ಅವಿಭಕ್ತ ಕುಟುಂಬಗಳನ್ನು ಕಾಣುತ್ತೇವೆ. ಮತ್ತು ವಿಭಕ್ತ ಕುಟುಂಬಗಳು ಇತ್ತೀಚೆಗೆ ಕಂಡು ಬರುತ್ತವೆ. ಈ ಪರಿಸರದಲ್ಲಿ ವಿವಾಹ ಪದ್ಧತಿಯು ವಿಶೇಷವಾಗಿ ರೂಢಿ ಸಂಪ್ರದಾಯಗಳಿಂದ ವಿವಾಹ ನಡೆಸುವುದು ಕಂಡುಬರುತ್ತದೆ. ಈ ಪರಿಸರದ ಸಮುದಾಯಗಳಾದ ವೀರಶೈವ ಲಿಂಗಾಯತ, ಬಣಜಿಗ, ಒಕ್ಕಲಿಗರು, ವಿಶ್ವಕರ್ಮ, ಆಂಧ್ರ ಜನಾಂಗ, ವೇಷಗಾರರು, ಶೆಟ್ಟರು, ಕುರುಬ,ವಡ್ಡರು(ಭೋವಿ)ಮತ್ತು ಅಗಸರು ಮುಂತಾದ

ಸಮುದಾಯಗಳ ವೃತ್ತಿ ಆರ್ಥಿಕತೆಯನ್ನು ವಿಶೇಷವಾಗಿ ಕಾಣಬಹುದಾಗಿದೆ.

ಈ ಪರಿಸರದಲ್ಲಿ ಹಲವಾರು ಹಬ್ಬ-ಹರಿದಿನಗಳನ್ನು, ಜಾತ್ರೆ- ಉತ್ಸವಗಳನ್ನು ಸಕ್ರಿಯವಾಗಿ ಎಲ್ಲಾ ಸಮುದಾಯದವರು ಸೇರಿಕೊಂಡು ಆಚರಿಸುತ್ತಾರೆ. ಇದರಲ್ಲಿ ಮುಖ್ಯವಾಗಿ ಶರಣಬಸವೇಶ್ವರ ಜಾತ್ರೆ,ವೀರಪ್ಪಯ್ಯನ ಜಾತ್ರೆ ಮತ್ತು ಮೊಹರಂ ಹಿಂದೂ-ಮುಸ್ಲಿಂ ಭಾವೈಕ್ಯ ಯಿಂದ ಎಲ್ಲರೂ ಸೇರಿಕೊಂಡು ವಿಜ್ರಂಭಣೆಯಿಂದ ಆಚರಿಸುತ್ತಾರೆ. ಹಿಂದೂ ಮತ್ತು ಮುಸ್ಲಿಂ ಆಚರಣೆಗಳನ್ನು ನೋಡಿದಾಗ ಈ ಪರಿಸರದ ಜನರು ದೇವರಲ್ಲಿ ಹೆಚ್ಚಿನ ನಂಬಿಕೆವುಳ್ಳವರಾಗಿದ್ದಾರೆ.

ಬರಗೂರು ಗ್ರಾಮದ ಕ್ಷೇತ್ರಕಾರ್ಯ ಅಧ್ಯಯನದಲ್ಲಿ ಈ ಗ್ರಾಮದ ಪ್ರಮುಖ ದೇವಸ್ಥಾನಗಳಾದ ಮರಿಯಮ್ಮ ದೇವಸ್ಥಾನ, ಜಂಬುನಾಥ ದೇವಸ್ಥಾನ, ಹನುಮಂತರಾಯ ದೇವಸ್ಥಾನ ಪ್ರಮುಖವಾಗಿದ್ದು ಇಲ್ಲಿ ಮರಿಯಮ್ಮದೇವಿ ಜಾತ್ರೆಯು ಇಲ್ಲಿ ಬಹಳ ವಿಜ್ರಂಭಣೆಯಿಂದ ಐದುವರ್ಷಕ್ಕೊಮ್ಮೆ ನಡೆಸಲಾಗುತ್ತದೆ. ಇಲ್ಲಿ ವಿಶೇಷವಾಗಿ ಶಾಸನವು ದೊರೆತಿದೆ ಮತ್ತು ವೀರಗಲ್ಲು ಸಮಾಧಿಗಳು ದೊರೆತಿವೆ.

ಉಳೇನೂರು ಗ್ರಾಮದ ಕ್ಷೇತ್ರ ಕಾರ್ಯ ಕೈಗೊಂಡಾಗ ಈ ಗ್ರಾಮದಲ್ಲಿ ಪ್ರಮುಖವಾದ ಶಿಲಾಶಾಸನಗಳು ಕಂಡುಬಂದಿದ್ದು. ಇವುಗಳ ಕೆಂಪು ಮತ್ತು ಬಿಳಿ ಕಲ್ಲಿನಲ್ಲಿ ಕೆತ್ತಲಾದ ಶಾಸನಗಳು ಅವುಗಳ ಮೇಲೆ ಏಳೆ ಎಳೆದು ಅಕ್ಷರಗಳು ನಶಿಸುವುದನ್ನು ಕಾಣುತ್ತೇವೆ. ಸಪ್ತಮಾತೃಕೆಯರ ಶಿಲ್ಪ ಗಳು,ಸೂರ್ಯದೇವರ ಮೂರ್ತಿಶಿಲ್ಪ ವನ್ನು ನೋಡಬಹುದು. ಹಾಗೆಯೇ ಈ ಊರಿನ ಪ್ರಮುಖ ದೇವಸ್ಥಾನಗಳೆಂದರೆ ಬಸವಣ್ಣ ದೇವರಗುಡಿ, ಉಳೇನೂರು ಮಠ, ಕಲ್ಲೇಶ್ವರ ದೇವಸ್ಥಾನ, ಸುಂಕ್ಲಮ್ಮ ಕಟ್ಟೆ ,ದ್ಯಾವಮ್ಮ ದೇವಸ್ಥಾನ ಮತ್ತು ಪ್ರಮುಖವಾಗಿ ನಂದಿ ಶಿವಲಿಂಗ, ಲಕ್ಷ್ಮಿ ಮೂರ್ತಿ ಶಿಲ್ಪಗಳು ದೊರೆತಿವೆ.

ಬೆನ್ನೂರು ಗ್ರಾಮದ ಕ್ಷೇತ್ರಕಾರ್ಯ ಅಧ್ಯಯನದಲ್ಲಿ ಈ ಗ್ರಾಮದ ದೇವಸ್ಥಾನಗಳಾದ ಕೆಂಚಮ್ಮ ಗುಡಿ, ಬೀರಲಿಂಗೇಶ್ವರ ದೇವಸ್ಥಾನ, ಮಾರೆಮ್ಮನ ಗುಡಿ, ಹನುಮಂತದೇವರು, ಕಲ್ಲೇಶ್ವರ ಗುಡಿ, ಕಟ್ಟೆಗಳು ಕಂಡುಬಂದಿವೆ. ಹಾಗೂ ಈ ಊರಿನಲ್ಲಿ ನಡೆಸುವ ಜಾತ್ರೆಯ ವಿವರಗಳು ಸಹ ಲಭ್ಯವಾಗಿದೆ.

ಒಟ್ಟಾರೆ ಸಿದ್ದಾಪುರ ಪ್ರದೇಶದ ದೇವಾಲಯಗಳ ಅಧ್ಯಯನದಿಂದ ಪ್ರಾಚೀನ ದೇವಾಲಯಗಳು ಮತ್ತು ವಾಸ್ತುಶಿಲ್ಪ ದೃಷ್ಟಿಯಿಂದ ಮಹತ್ವವನ್ನು ಪಡೆದಿದೆ. ಅಷ್ಟೇ ಅಲ್ಲದೆ ಧಾರ್ಮಿಕ ಆಚರಣೆಯ ಜೊತೆಗೆ ಆಧುನಿಕ ರೀತಿಯಲ್ಲಿ ಕಟ್ಟಡ ಶೈಲಿಯ ವಿನ್ಯಾಸದಲ್ಲಿ ಬದಲಾವಣೆಯನ್ನು ನೋಡಬಹುದಾಗಿದೆ. ಒಟ್ಟಾರೆ ಸಿದ್ದಾಪುರ ಪ್ರದೇಶದ ಜೀವನ ಸಂಸ್ಕೃತಿಯ ಹಲವು ವೈಶಿಷ್ಟ್ಯತೆಗಳನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಯಿತು.

ಜನಪದ ಸಂಸ್ಕೃತಿಯು ಮೊದಲಿನಿಂದಲೂ ಗತಪರಂಪರೆಯನ್ನು ಸಂರಕ್ಷಿಸುತ್ತಲೇ ಬಂದಿದೆ. ಮನುಷ್ಯ ಯಾವತ್ತೂ ಪ್ರಕೃತಿಗೆ ನಿಕಟವಾಗಿಯೇ ಬದುಕುತ್ತಾ ಬಂದಿರುವುದು ಇದಕ್ಕೆ ಆಧಾರವಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಕೈಗಾರೀಕರಣಕ್ಕೆ ಗುರಿಯಾಗಿರುವ ಇವತ್ತಿನ ಆಧುನಿಕ ಜೀವನದಲ್ಲಿ

ಮಾನವ ಪ್ರಕೃತಿಯೊಂದಿಗೆ ಯಾವುದೋ ರೀತಿಯಲ್ಲಾದರೂ ಸಂಪರ್ಕವನ್ನು ಹೊಂದಿರುತ್ತಾನೆ. ಮೌಖಿಕ ಪರಂಪರೆಯ ಎಲ್ಲ ಅಭಿವ್ಯಕ್ತಿಗಳಲ್ಲಿ ನಂಬಿಕೆಗಳು, ಸಂಪ್ರದಾಯಗಳು ಆಚರಣೆಗಳು ಹಿಂದಿನ ಪರಂಪರೆಯೊಂದಿಗೆ ಉತ್ತಮ ಸಂಬಂಧಗಳನ್ನು ಹೊಂದಿದಾಗ ಇಂದು ನಿರ್ಧಾರಿತವಾದ ಮೌಲ್ಯ ವ್ಯವಸ್ಥೆಯನ್ನು ಕಾಯ್ದುಕೊಳ್ಳು ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ದೇವರುಗಳ ಆದರಲ್ಲೂ ಗ್ರಾಮ ದೈವಗಳ ಅಧ್ಯಯನದ ಪ್ರಸ್ತುತತೆ ಹೆಚ್ಚಿನದಾಗಿರುತ್ತದೆ.

ಜನಪದ ದೈವ ಸಂಸ್ಕೃತಿಯು ಗುಂಪು ಅನನ್ಯತೆಯ ವರ್ಧಕವೂ ಹೌದು. ವಾಸ್ತವವಾಗಿ ದೇವರು ಸಮಷ್ಟಿಯ ಒಂದು ಭಾಗವಾಗಿ ಗುಂಪು ಅನನ್ಯತೆಯನ್ನು ಗುರುತಿಸಿಕೊಳ್ಳುವ ಸಾಮರ್ಥ್ಯವನ್ನು ನೀಡುತ್ತದೆ. ದೈವ ಸಂಸ್ಕೃತಿಯ ಆಚರಣೆಗಳು ಗುಂಪುಗಳ ಸಮರೂಪತೆ ಮತ್ತು ಸಮಾನ ಅಂಶಗಳನ್ನು ಹೊಂದಿರುವ ವಿವಿಧ ವ್ಯವಸ್ಥೆಗಳು ಪರಿಣಾಮಕಾರಕವಾಗಿ ಒಂದುಗೂಡುವ ರೀತಿಯ್ರು ಆಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಒಂದು ಸಮುದಾಯದ ಅಥವಾ ಗುಂಪಿನ ಜೀವನ ಪದ್ಧತಿಯನ್ನು ಅದರ ಅನನ್ಯತೆಯೊಡನೆ ಗ್ರಹಿಸಲು ಸಾಧ್ಯವಾಗುವುದರೊಂದಿಗೆ ಮತ್ತೊಂದು ಗುಂಪಿನ ಜೀವನ ಪದ್ಧತಿಯನ್ನು ಅರಿಯಲು ದೈವ ಸಂಸ್ಕೃತಿಯ ಅಧ್ಯಯನವು ಅವಶ್ಯಕವಾಗಿದೆ.

ಸಿದ್ಧಾಪುರ ಪರಿಸರದ ಗ್ರಾಮಗಳ ಕೆಳ ಸಮುದಾಯಗಳ ಸಾಮಾಜಿಕ ಸ್ಥಿತಿಗತಿಗಳು, ನಂಲಬಿಕೆ ಆಚರಣೆಗಳು ವಿಶಿಷ್ಟವಾಗಿ ಕಾಣುತ್ತವೆ. ಕೆಳವರ್ಗಗಳ ದೈವ ಮತ್ತು ಸಾಮಜಿಕ ನಂಬಿಕೆಯನ್ನು ಆಧರಿಸಿ ಶಿಷ್ಟದೈವಗಳು ಮತ್ತು ಮೇಲುವರ್ಗಗಳು ಹೇಗೆ ತಮ್ಮ ಸಾಂಸ್ಕೃತಿಕ ಯಜಮಾನಿಕೆಯನ್ನು ಸೃಷ್ಟಿಸುತ್ತವೆ ಎಂಬುದನ್ನು ಅರಿಯಲು ಈ ಪ್ರದೇಶದ ಸಾಂಸ್ಕೃತಿಕ ಅಧ್ಯಯನಮವು ಸಾಧ್ಯವಾಗಿದೆ. ಶಿಷ್ಟ ದೈವಗಳ ಜೊತೆ ಜೊತೆಗೆ ಇಂದಿಗೂ ಬಹಳ ಹಿಂದಿನಿಂದಲೂ ಆರಾಧಿಸಿಕೊಂಡು ಬಂದಿರುವ ಹಲವಾರು ಹೆಸರಿನ ಅವೈದಿಕ ಮತ್ತು ಕೆಳ ಸಮುದಾಯಗಳ ಸ್ಥಳೀಯ ಜನಪದ ಸ್ತ್ರೀದೈವಗಳು ಇವರ. ಶ್ರೀ ಗವಿಸಿದ್ದೇಶ್ವರ, ಕೊಟ್ಟೂರೇಶ್ವರ, ಮಹಾಮಾಯೆ, ಬೂದೇಶ್ವರ, ಹೇಮಗುಡ್ಡದ ದುರುಗಮ್ಮ ಇಂತಹ ಹಲವು ದೇವರುಗಳು ಶಿಷ್ಟ ಮತ್ತು ಪರಿಶಿಷ್ಟರ ಆರಾಧನೆಗೆ ಒಳಗಾಗಿದ್ದು ಸಾಂಸ್ಕೃತಿಕವಾಗಿ ಪ್ರಧಾನವಾಗಿವೆ. ಇನ್ನೊಂದು ಕಡೆಯಲ್ಲಿ ಗ್ರಾಮದ ಎಷ್ಟೋ ದೇವರುಗಳು ಮುಂಚೂಣಿಗೆ ಬಾರದೇ ಸ್ಥಳೀಯ ಸಮುದಾಯಗಳಿಂದ ನಿತ್ಯ ಪೂಜೆಗೆ ಒಳಗಾಗಿ ತಮ್ಮದೇಯಾದ ಅಸ್ತಿತ್ವವನ್ನು ಉಳಿಸಿಕೊಂಡು ಬರುವಲ್ಲಿ ಯಶಸ್ವಿಯಾಗಿವೆ. ಒಟ್ಟಾರೆಯಾಗಿ ದೇವರುಗಳ ನಂಬಿಕೆ, ಆಚರಣೆಗಳ ಆಳದಲ್ಲಿ ಸಾಮಾಜಿಕ ವಾಸ್ತವವನ್ನು ಸೂಕ್ಷ್ಮವಾಗಿ ಒಳಗೊಂಡಿವೆ. ದೈವಸಂಬಂಧಿ ನೆಲೆಗಳು ಮನುಷ್ಯ ಸಂಬಂಧಗಳನ್ನು ಗಟ್ಟಿಗೊಳಿಸಿ ವಾಸ್ತವವನ್ನು ಮರೆಮಾಚುತ್ತವೆ. ಸಾಂಸ್ಕೃತಿಕ ಯಜಮಾನಿಕೆಯನ್ನು ಸೃಷ್ಟಿಸುವ ಆಕರವಾಗಿಯೂ ಕಾಣಿಸುತ್ತವೆ.

ಭಾರತವು ಬಹು ಸಂಸ್ಕೃತಿಗಳ ನೆಲೆಗಳನ್ನು ತನ್ನಲ್ಲಿ ಮೇಳೈಸಿಕೊಂಡು ತನ್ನದೇಯಾದ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಮೈಗೂಡಿಸಿಕೊಂಡಿರುವ ದೇಶವಾಗಿದೆ. ಹಾಗಾಗಿ ಇದು ಪವಿತ್ರಭೂಮಿ ಎಂದು ಹೆಸರುವಾಸಿಯಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿಕೊಂಡಿಲರುವ ಪ್ರದೇಶವು

ಸಾಕಷ್ಟು ಪ್ರಾಚೀನತೆಯನ್ನು ಹೊಂದಿದ್ದು, ಬೌದ್ಧ, ಜೈನ, ವೈದಿಕ, ಶೈವ, ವೀರಶೈವ ಮತ್ತು ಮುಸ್ಲಿಂ ಹೀಗೆ ಅನೇಕ ಧರ್ಮಗಳ ನೆಲೆವೀಡಾಗಿದೆ.

ಇಂದು ಗ್ರಾಮೀಣ ಸಮುದಾಯಗಳು ಆಧುನಿಕ ಸವಲತ್ತುಗಳನ್ನು ಪಡೆದುಕೊಂಡರೂ ಭಾವಾನಾತ್ಮಕವಾಗಿ ವೈಚಾರಿಕವಾಗಿ ಅವರು ಆಧುನಿಕತೆಯನನು ಪಡೆದುಕೊಂಡರೆಂದು ಹೇಳಲಾಗುವುದಿಲ್ಲ. ಅವರ ಜೀವನ ಸಂಸ್ಕೃತಿಯ ಅಂಗಗಳಾದ ನಂಬಿಕೆ, ಸಂಪ್ರದಾಯ ಮತ್ತು ಆಚರಣೆ ವಿಧಿ–ವಿಧಾನಗಳಲ್ಲಿ ಜಾನಪದತ್ವ ಹಾಗೆಯೇ ಉಳಿದಿದೆ. ಇದಕ್ಕೆ ನಮ್ಮ ಪ್ರಬಲ ಜಾತಿ ವ್ಯವಸ್ಥೆ, ಜೀವನ ದೃಷ್ಟಿ, ಉಳಿಗಮಾನ್ಯ ಪದ್ಧತಿಗಳೂ ಕಾರಣವಾಗಿವೆ. ಪ್ರಮುಖವಾಗಿ ಗ್ರಾಮೀಣವಾಸಿಗಳು ಮತ್ತು ನಗರವಾಸಿಗಳು ಆಧುನಿಕ ವಿಜ್ಞಾನ, ತಂತ್ರಜ್ಞಾನದ ಸುಧಾರಿತ ಕ್ರಮವನ್ನು ತಮ್ಮ ಸಾಂಪ್ರದಾಯಿಕ ಜೀವನ ಕ್ರಮದ ಸುಧಾರಿತ ಆಚರಣೆಗೆ ವೈಭವೀಕರಣಕ್ಕೆ ಒಳಗೊಂಡಿರುವುದು ಜಾಸ್ತಿ. ಅವರು ಇದನ್ನು ಮೂಲಭೂತವಾಗಿ ಪರೀಕ್ಷಿಸಿ ಒಪ್ಪಿಕೊಳ್ಳುವ ಪ್ರಯತ್ನವನ್ನು ಮಾಡಲಿಲ್ಲ.

ವಕ್ತೃ ವಿವರ

೧. ಡಾ. ಶರಣಬಸಪ್ಪ ಕೋಲ್ಕಾರ್, ೪೫, ಗಂಗಾವತಿ, ಕಾಲೇಜು ಪ್ರಾಂಶುಪಾಲರು.
೨. ಬಸವರಾಜ ನೀರಗಂಟಿ, ೪೬, ಸಿದ್ದಾಪುರ, ಮಾಜಿ ಸದಸ್ಯರು (ತಾ.ಪಂ)
೩. ಶ್ರೀ ಎಸ್.ವಿ. ಪಾಟೀಲ್, ೪೮, ಗಂಡೂರು, ಸಾಹಿತಿಗಳು.
೪. ಶ್ರೀ ಎಂ.ಡಿ. ಶಿರಾಜ್, ೫೦, ಸಿದ್ದಾಪುರ.
೫. ಶ್ರೀ ಉಮಾಪತಿ ಹಳೇಮನಿ, ೪೭, ಸಿದ್ಧಾಪುರ.
೬. ವಿರೂಪಣ್ಣ ಮರಕುಂಬಿ, ೪೭, ಸಿದ್ದಾಪುರ.
೭. ಎಚ್. ಎನ್. ಕನಕಪ್ಪ, ೩೫, ಸಿದ್ಧಾಪುರ, ಮುಖ್ಯಶಿಕ್ಷಕರು.
೮. ಗೋಪಾಲಪ್ಪ ಒಂಟೆತ್ತು, ೫೮, ಸಿದ್ಧಾಪುರ, ಗ್ರಾಮಸ್ಥರು.
೯. ಹನುಮಂತಪ್ಪ ಒಂಟೆತ್ತು, ೪೨, ಸಿದ್ದಾಪುರ, ಸದಸ್ಯರು (ಗ್ರಾ.ಪಂ).
೧೦. ಬಸವರಾಜ ಅರ್ಚಕರು, ೩೬, ಸಿದ್ದಾಪುರ, ಕಾರ್ಪೆಂಟರ್.
೧೧. ರಾಮಣ್ಣ ವಡ್ಡರ, ೪೭, ಸಿದ್ಧಾಪುರ, ಗ್ರಾಮಸ್ಥರು.
೧೨. ಶರಣಯ್ಯ ಸ್ವಾಮಿ, ೩೨, ಸಿದ್ಧಾಪುರ, ಯೋಗಸಾಧಕರು.
೧೩. ಪ್ರದೀಪಕುಮಾರ ರಾಮರೆಡ್ಡಿ, ೩೨, ಸಿದ್ಧಾಪುರ, ಬ್ಯಾಂಕ್ ಮ್ಯಾನೇಜರ್.
೧೪. ದುರುಗೇಶ ಕುಂಟೋಜಿ, ೩೮, ಸಿದ್ಧಾಪುರ, ಗ್ರಾಮಸ್ಥರು.
೧೫. ನೀಲಪ್ಪ ಹೂಗಾರ, ೪೦, ಸಿದ್ಧಾಪುರ, ಪೂಜಾರಿ.
೧೬. ಮಂಜುನಾಥ ಪಿ., ೪೫, ಉಳೇನೂರು, ಗ್ರಾಮಸ್ಥರು.
೧೭. ರಜಾಕ್, ೩೮, ಬೆನ್ನೂರು, ಗ್ರಾಮಸ್ಥರು.
೧೮. ಶರಣಪ್ಪ ಕುರುಬರ, ೩೫, ಈಳಿಗನೂರು, ಅಧ್ಯಕ್ಷರು (ಎಸ್.ಡಿ.ಎಂ.ಸಿ.)
೧೯. ವೆಂಕಟೇಶ ಪೂಜಾರ, ೩೪, ಈಳಿಗನೂರು, ಉಪನ್ಯಾಸಕರು.
೨೦. ಹನುಮೇಶ, ೩೪, ಬರಗೂರು, ಗ್ರಾಮಸ್ಥರು.

ಆಕರ ಗ್ರಂಥಗಳು

ಅಪರ್ಣಾ ಕೂ.ಸ., ೧೯೯೯, ದೇವಾಲಯ ವಾಸ್ತುಶಿಲ್ಪ ಪರಿಚಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅಲ್ಲಮಪ್ರಭು ಬೆಟ್ಟದೂರು ಹಾಗೂ ಎಚ್. ಎಸ್. ಪಾಟೀಲ (ಸಂ), ೧೯೯೧, ತಿರುಳುಗನ್ನಡ್ ಸ್ವರ್ಣಸಂಚಿಕೆ, ಕೊಪ್ಪಳ.

ಕಲಬುರ್ಗಿ ಎಂ. ಎಂ., ೧೯೯೪, ಕರ್ನಾಟಕದ ಕೈಫಿಯತ್ತುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅಲ್ಲಮಪ್ರಭು ಬೆಟ್ಟದೂರು (ಸಂ), ೨೦೦೫, ಕೊಪ್ಪಳ ಜಿಲ್ಲಾ ದರ್ಶನ, ಕಲಬುರಗಿ ವಿಶ್ವವಿದ್ಯಾಲಯ, ಕಲಬುರಗಿ.

ದೇವರಕೊಂಡಾರೆಡ್ಡಿ (ಸಂ), ೧೯೯೯, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೨, ಕೊಪ್ಪಳ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸುರೇಶ ಕೆ. ಎಂ. ಮತ್ತು ಇತರರು, ೨೦೦೧, ಕರ್ನಾಟಕ ದೇವಾಲಯ ಕೋಶ, ಕೊಪ್ಪಳ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶರಣಬಸಪ್ಪ ಕೋಲ್ಕಾರ್, ೨೦೦೨, ಅಕ್ಷಯ ಗಂಗಾವತಿ ತಾಲೂಕು ಪ್ರಥಮ ಸಾಹಿತ್ಯ ಸಮ್ಮೇಳನ ಸಂಚಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಗಂಗಾವತಿ.

ಶರಣಬಸಪ್ಪ ಕೋಲ್ಕಾರ್, ೨೦೧೦, ಗಂಗಾವತಿ ತಾಲೂಕು ದರ್ಶನ, ಬಸವ ಪ್ರಕಾಶನ ಗುಲ್ಬರ್ಗಾ.

ಶರಣಬಸಪ್ಪ ಕೋಲ್ಕಾರ್, ೧೯೯೪, ಕನಕಗಿರಿ ಪ್ರದೇಶ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶರಣಬಸಪ್ಪ ಕೋಲ್ಕಾರ್, ೨೦೧೦, ಅಂತರಗಂಗೆ ಗಂಗಾವತಿ ತಾಲೂಕು ದ್ವಿತೀಯ ಸಾಹಿತ್ಯ ಸಮ್ಮೇಳನದ ಸಂಚಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಗಂಗಾವತಿ.

ಕಲಬುರ್ಗಿ ಎಂ.ಎಂ., ೧೯೭೫, **ಧಾರವಾಡ ಜಿಲ್ಲೆ ಶಾಸನ ಸೂಚಿ**, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕಾಮತ್ ಸೂರ್ಯನಾಥ., ೧೯೮೪, **ಕರ್ನಾಟಕ ರಾಜ್ಯ ಗ್ಯಾಝೆಟಿಯರ್ ಭಾಗ–೧**, ಕರ್ನಾಟಕ ಸರ್ಕಾರ, ಬೆಂಗಳೂರು

ಚಿದಾನಂದಮೂರ್ತಿ ಎಂ., ೧೯೭೯, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಸಪ್ನ ಬುಕ್‌ಹೌಸ್ ಬೆಂಗಳೂರು.

ವೆಂಕಟರಾವ್ ಡಿ., ೨೦೧೩, **ಕೃಷಿ ಬೆಳವಣಿಗೆ**, ವಿದ್ಯಾನಿಧಿ ಪ್ರಕಾಶನ, ಗದಗ

ಜಯಮ್ಮ ಕೆರೆಯಣ್ಣ ಎಚ್., ೨೦೧೦, **ಶಾಸನಗಳಲ್ಲಿ ದಾನದತ್ತಿಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ದಿವಾಕರ್ ಆರ್. ಆರ್., ೨೦೦೬, **ಕರ್ನಾಟಕ ಪರಂಪರೆ** ಸಂ-೦೨, ಮಧ್ಯಕಾಲ ಮತ್ತು ಆಧುನಿಕ ಕಾಲ, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.

ದೇವರಕೊಂಡಾರೆಡ್ಡಿ (ಸಂ)., ೨೦೦೬, **ಹಂಪಿ ಸಂಪುಟ** (ಕಲೆ, ಕ್ರೀಡೆ ಮತ್ತು ಕೌಶಲ) ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪಂಚಮುಖಿ ಆರ್.ಎಸ್., ೧೯೪೨, **ಕರ್ನಾಟಕ ಅರಸು ಮನೆತನಗಳು**, ಸಂಶೋಧನಾ ಮಂಡಲ, ಧಾರವಾಡ.

ಪಾಟೀಲ ಬಿ.ವಿ., ೧೯೯೬, **ಗ್ರಾಮ ದೇವತೆಗಳು**, ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪಾಟೀಲ ಬಿ.ಪಿ. (ಸಂ), ನೇಗಿನಾಳ್ ಎಂ.ಬಿ. (ಪ್ರ.ಸಂ), ೧೯೯೯, **ಜನಪದ ಸಾಹಿತ್ಯ ದರ್ಶನ ಭಾಗ-೨೩**, ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಭಟ್ ಎಸ್.ಎಸ್., ೧೯೮೪, **ಪ್ರಾಚೀನ ಭಾರತದಲ್ಲಿ ಜನಜೀವನ**, ನವಕರ್ನಾಟಕ ಪಬ್ಲಿಕೇಶನ್, ಬೆಂಗಳೂರು.

ಬಾಲಸುಬ್ರಹ್ಮಣ್ಯ, ಸಿ.ಎಸ್. ವಾಸುದೇವನ್ ಹಾಗೂ ಶ್ರೀ ರಮೇಶ ನಾಯಕ., ೨೦೦೭, **ಕರ್ನಾಟಕ ದೇವಾಲಯ ಕೋಶ : ಗದಗ ಜಿಲ್ಲೆ**, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮುಮ್ಮಿಗಟ್ಟಿ ಎಸ್. ಸುಮಂಗಲ, ೨೦೧೦, **ನಮ್ಮ ಭೂಮಿ ನಮ್ಮ ಪರಿಸರ**, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ರಘುನಾಥ ಶಾಲಿನಿ (ಸಂ), ಇಮ್ರಾಪುರ ಸೋಮಶೇಖರ (ಪ್ರ.ಸಂ)., ೨೦೦೧, **ಜಾನಪದ ಸಾಹಿತ್ಯ ದರ್ಶನ, ಭಾಗ-೨೪**, ಪ್ರಸಾರಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಶಿವಾನಂದಶಾಸ್ತ್ರಿ ಶಂಕಿನಮಠ, ೨೦೧೨, **ಶ್ರೀ ಹೊಳಲಮ್ಮದೇವಿ ಚರಿತಾಮೃತ**, ಅಂಬಿಕಾ ಪ್ರಕಾಶನ, ಗದಗ.

ಶ್ರೀಕಾಂತ್ ಎಂ.ಪಿ., ೨೦೦೮, **ಬಾವಿ ಬಾವಿಗೂ ಅಂತರ**, ಆಯ್.ಬಿ.ಎಚ್. ಪ್ರಕಾಶನ, ಬೆಂಗಳೂರು.

ಸತ್ಯನಾಥ ಟಿ.ಎನ್. ೧೯೯೯, **ನರಬಲಿ ಒಂದು ಸಾಂಸ್ಕೃತಿಕ ಅಧ್ಯಯನ**, ಸಂಸ್ಕೃತಿ ವಿಕಾಸ ಮಾಲೆ, ಬೆಂಗಳೂರು.


ಸುರೇಶ ಕೆ.ಎಂ., ವಾಸುದೇವ ಬಡಿಗೇರ, ಸೋಮಶೇಖರ್ ಎಸ್.ವೈ., ಕೊಟ್ರೇಶ್ ಎಂ., **ಕರ್ನಾಟಕ ದೇವಾಲಯ ಕೋಶ : ಕೊಪ್ಪಳ ಜಿಲ್ಲೆ**, ೨೦೦೧, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಕ್ಷೆಗಳು

ಕರ್ನಾಟಕ ರಾಜ್ಯ ನಕ್ಷೆ



ಕೊಪ್ಪಳ ಜಿಲ್ಲೆ ನಕ್ಷೆ



ಛಾಯಾಚಿತ್ರಗಳು



ಈಶ್ವರ ದೇವಸ್ಥಾನ, ಸಿದ್ಧಾಪುರ



ವೆಂಕಟೇಶ್ವರ ಮತ್ತು ಆಂಜನೇಯ

ದೇವಸ್ಥಾನ, ಸಿದ್ಧಾಪುರ




ದೇವಸ್ಥಾನದೊಳಗಿರುವ ಆಂಜನೇಯ ಮೂರ್ತಿ




ಈಶ್ವರ ದೇವಸ್ಥಾನದ ಪ್ರವೇಶದ್ವಾರ



ವೀರಭದ್ರೇಶ್ವರ ದೇವಸ್ಥಾನ, ಸಿದ್ಧಾಪುರ



ದೇವಸ್ಥಾನದೊಳಗಿನ ವೀರಭದ್ರೇಶ್ವರ ಮೂರ್ತಿ



ವೆಂಕಟೇಶ್ವರ ದೇವಸ್ಥಾನದ
ಪ್ರಾಂಗಣದಲ್ಲಿರುವ ವೀರಗಲ್ಲು

ಕಾಶಿ ವಿಶ್ವನಾಥ ದೇವಸ್ಥಾನ, ಸಿದ್ಧಾಪುರ





ಗ್ರಾಮದೇವತೆ ದುಗಲಮ್ಮ, ಸಿದ್ಧಾಪುರ



ಗ್ರಾಮದ ಅಧಿದೇವತೆ ದ್ಯಾವಮ್ಮ, ಉಳೇನೂರು



ದ್ಯಾವಮ್ಮನ ಮೂರ್ತಿ, ಉಳೇನೂರು



ಹೊಳೆ ಬಸವೇಶ್ವರ ದೇವಸ್ಥಾನ, ಬೆನ್ನೂರು



ಕಲ್ಲೇಶ್ವರ ದೇವಸ್ಥಾನ, ಬೆನ್ನೂರು



ಪಂಚಮುಖಿ ಬಸವೇಶ್ವರ ಮೂರ್ತಿ




ಆಂಜನೇಯ ದೇವಸ್ಥಾನ, ಬೆನ್ನೂರು



ಆಂಜನೇಯ ದೇವಸ್ಥಾನ, ಈಳಿಗನೂರು



ಹಳ್ಳದ ದಂಡೆಯಲ್ಲಿರುವ ಗಜಲಕ್ಷ್ಮೀ ಶಿಲ್ಪ



ಸಿದ್ಧಾಪುರದ ಸೊಸೆಯಂದಿರ ಬಾವಿಯ ಗೋಡೆಯ ಮೇಲೆ ಕಂಡುಬಂದಿರುವ ಪುರುಷಮೃಗ





ಹಳ್ಳದ ದಂಡೆಯಲ್ಲಿರುವ ವೀರಗಲ್ಲುಗಳು





ಸೊಸೆಯಂದಿರ ಬಾವಿಯ ಗೋಡೆಯಲ್ಲಿರುವ ಹನುಮ ಮತ್ತು ನಾಗರ ಶಿಲ್ಪಗಳು




ರಾಮಲಿಂಗೇಶ್ವರ ದೇವಸ್ಥಾನ ಬಲಭಾಗದಲ್ಲಿರುವ
ಶಾಸನ, ಸಿದ್ಧಾಪುರ




ಸಿದ್ಧಾಪುರದಲ್ಲಿರುವ ಸಾಸರ ಬಾವಿ



ನಿರ್ಲಕ್ಷ್ಯಕ್ಕೊಳಪಟ್ಟ ದೇವಸ್ಥಾನ ಮತ್ತು ಶಿಲ್ಪಗಳು.
ಉಳೇನೂರು

ಉಳೇಸೂರಿನಲ್ಲಿ ಕಂಡುಬಂದ ಶಾಸನಗಳು



ಕಮಲಧಾರಿ ಶಿಲ್ಪ, ಉಳೇನೂರು




ಪ್ರಾಚೀನ ಬಾವಿ, ಉಳೇನೂರು



ಪ್ರಾಚೀನ ಬಾವಿ, ಬೆನ್ನೂರು



ಈಳಿಗನೂರಿನಲ್ಲಿ ದೊರೆತಿರುವ ಶಾಸನ



ಪ್ರಾಚೀನ ಬಾವಿ, ಬರಗೂರು



ಬರಗೂರಿನಲ್ಲಿ ಕಂಡುಬಂದ ಶಾಸನ




ವೀರಪ್ಪಯ್ಯ ತಾತನ ಮೂರ್ತಿ, ಸಿದ್ಧಾಪುರ



ಮರಿಯಮ್ಮ ದೇವಸ್ಥಾನ, ಬರಗೂರು



ಮರಿಯಮ್ಮ ದೇವಿ ಮೂರ್ತಿ, ಬರಗೂರು



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ